
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಭಾರತ ಹಾಗು ಆಸ್ಟ್ರೇಲಿಯಾ ತಂಡಗಳ ನಡುವೆ ಟಿ-20 ಸರಣಿಯ ಐದನೇ ಹಾಗೂ ಅಂತಿಮ ಪಂದ್ಯ ಶನಿವಾರ ಮಳೆಯಿಂದಾಗಿ ಸ್ಥಗಿತಗೊಂಡಿತು. ಅದರಿಂದಾಗಿ ಭಾರತ ತಂಡ ಸರಣಿಯನ್ನು 2-1 ರಿಂದ ಗೆದ್ದುಕೊಂಡಿತು.

09 ನವೆಂಬರ್ 2025 ಭಾನುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 239 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಹಣ ಉಳಿತಾಯ ಒಂದೇ ಸಾಲದು, ಹೂಡಿಕೆ ಮರೆಯದಿರಿ! » 2


ಅಪರೂಪದ ಖನಿಜಗಳ ಅತಿದೊಡ್ಡ ಜಾಗತಿಕ ಮೇಲಾಟ » 3


ಕೀರ್ತನೆಗಳಿಂದಲೇ ಏಳಿಗೆಗೆ ಶ್ರಮಿಸಿದ ಕನಕದಾಸರು » 4


# ಸಾಂವಿಧಾನಿಕ ಸಂಸ್ಥೆಗಳು ಮೋದಿ ಅಡಿಯಾಳು

## ಚುನಾವಣಾ ಆಯೋಗ ಬೇಜವಾಬ್ದಾರಿ ಸಂಸ್ಥೆ: ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ

• ಪ್ರಜೋದಯ ವರದಿ



**ಬೆಂಗಳೂರು:** ನರೇಂದ್ರ ಮೋದಿ ಪ್ರಧಾನಿಯಾದ ಬಳಿಕ ಎಲ್ಲಾ ಸಾಂವಿಧಾನಿಕ ಸಂಸ್ಥೆಗಳ ಮೌಲ್ಯ ಹಾಳು ಮಾಡಿ, ಚುನಾವಣಾ ಆಯೋಗ, ಸಿಬಿಐ, ಇಡಿ, ಐಟಿಯನ್ನು ಕೇಂದ್ರ ಸರ್ಕಾರದ ಅಡಿಯಾಳಾಗಿಸಿಕೊಂಡಿದ್ದಾರೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಾಗ್ದಾಳಿ ನಡೆಸಿದರು.

ಶನಿವಾರ ಕೆಪಿಸಿಸಿ ಕಚೇರಿಯಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ನಡೆದಿರುವ ಮತಗಳ್ಳತನದ ದಾಖಲೆಗಳನ್ನು, ಮತಗಳ್ಳತನದ ವ್ಯವಸ್ಥಿತ ಷಡ್ಯಂತ್ರ ಮತ್ತು ವ್ಯವಸ್ಥಿತ ಕಾರ್ಯತಂತ್ರದ ದಾಖಲೆಗಳನ್ನು ವಿವರಿಸಿದ ಅವರು, ಬಿಜೆಪಿಯವರು ಕೇವಲ ಸುಳ್ಳಿನಲ್ಲಿ ಮಾತ್ರವಲ್ಲ ಮತಗಳ್ಳತನದಲ್ಲೂ ನಿಸ್ಸೀಮರು ಎನ್ನುವುದು ಸಾಬೀತಾಗಿದೆ. ನಾವು ಅದನ್ನು ಸಹಿಸಲ್ಲ. ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೌಲ್ಯ ಕಾಪಾಡಲು ಹೋರಾಟದ ಮಾರ್ಗ ಹಿಡಿಯುತ್ತೇವೆ ಎಂದರು.

ಕರ್ನಾಟಕ, ಬಿಹಾರ, ಮಹಾರಾಷ್ಟ್ರ ಹರಿಯಾಣದಲ್ಲಿ ಮತಗಳ್ಳತನವಾಗಿದೆ. ಇಷ್ಟೆಲ್ಲಾ ನಡೆದರೂ ಚುನಾವಣಾ ಆಯೋಗ ತನಿಖೆ ಮಾಡಿಲ್ಲ. ಚುನಾವಣಾ ಆಯೋಗ ಕೇಂದ್ರದ ಕೈಗೊಂಬೆಯಾಗಿ ಕೆಲಸ ಮಾಡುತ್ತಿದೆ. ಕೇಂದ್ರ ಸರ್ಕಾರ ಸೂಚನೆಯಂತೆ ಕೆಲಸ ಮಾಡುತ್ತಿದೆ. ಸ್ವತಂತ್ರ ಸಂಸ್ಥೆಗಳನ್ನು ಮೋದಿ ಸರ್ಕಾರ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇಡಿ-ಐಟಿ ಈಗ ಚುನಾವಣಾ ಆಯೋಗ ದುರ್ಬಳಕೆಯಾಗುತ್ತಿದೆ. ಕೇಂದ್ರದ ಅಡಿಯಾಳಾಗಿ ಕೇಂದ್ರ ಚುನಾವಣಾ ಆಯೋಗ ಕೆಲಸ ಮಾಡುತ್ತಿದ್ದು, ಇದು ಪ್ರಜಾಪ್ರಭುತ್ವಕ್ಕೆ ಮಾರಕ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಿಜೆಪಿ ಮತಗಳ್ಳತನದ ಮೂಲಕ ಅನೇಕ ವಿಧಾನಸಭೆ ಮತ್ತು ಲೋಕಸಭೆಯಲ್ಲಿ ಅಧಿಕಾರಕ್ಕೆ ಬಂದಿರುವುದು ಸ್ಪಷ್ಟವಾಗಿ ಗೊತ್ತಾಗಿದೆ. ಲೋಕಸಭೆ ವಿರೋಧಪಕ್ಷದ ನಾಯಕರಾದ ರಾಹುಲ್ ಗಾಂಧಿ ಅವರು ನಿರಂತರ ಅಧ್ಯಯನ, ತಪಾಸಣೆ ಬಳಿಕ ದಾಖಲೆ ಸಮೇತ ಮತಗಳ್ಳತನವನ್ನು ದೇಶದ ಜನರಿಗೆ ಮನವರಿಕೆ ಮಾಡಿಸಿದ್ದಾರೆಂದು ವಿವರಿಸಿದರು.

ಸಂವಿಧಾನ ಬಾಹಿರವಾಗಿ ಅಧಿಕಾರ ಹಿಡಿಯುವುದು ಸಂವಿಧಾನಕ್ಕೆ ಎಸಗುವ ದ್ರೋಹ. ಪ್ರಜಾಪ್ರಭುತ್ವಕ್ಕೆ ಎಸಗಿದ ವಂಚನೆ. ರಾಹುಲ್ ಗಾಂಧಿ ಅವರು, ಬೆಂಗಳೂರು ಕೇಂದ್ರ ಲೋಕಸಭೆ ಚುನಾವಣೆಯಲ್ಲಿ ನಡೆದ ಮತಗಳ್ಳತನವನ್ನು ಸ್ಪಷ್ಟವಾಗಿ, ದಾಖಲೆ ಸಮೇತ ಬಯಲಿಗೆ ಎಳೆದು ದಾಖಲೆಗಳನ್ನು ದೇಶದ ಜನರ ಮುಂದೆ ಇಟ್ಟಿದ್ದಾರೆ. ಇಷ್ಟಾದರೂ ಚುನಾವಣಾ ಆಯೋಗ ನಾವು ಎತ್ತಿರುವ ಪ್ರಶ್ನೆಗಳಿಗೆ ಉತ್ತರಿಸುತ್ತಿಲ್ಲ, ದೇಶದ ಜನರ ಮುಂದೆ ಇರಿಸಿದ ದಾಖಲೆಗಳಿಗೂ ಉತ್ತರ ನೀಡುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಾಡಿರುವ ಮತ ಕಳ್ಳತನದ ಆರೋಪಗಳನ್ನು ತನಿಖೆ ಮಾಡಲು ವಿಫಲವಾದ ಚುನಾವಣಾ ಆಯೋಗವನ್ನು ಟೀಕಿಸಿದ ಅವರು, ಆಯೋಗವು ಬೇಜವಾಬ್ದಾರಿಯಿಂದ ಪ್ರತಿಕ್ರಿಯಿಸುತ್ತಿದೆ. ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನಕ್ಕೆ ಅನುಗುಣ ವಾಗಿ ಕಾರ್ಯನಿರ್ವಹಿಸುತ್ತಿಲ್ಲ. ಅದರಿಂದಚುನಾವಣಾ ಆಯೋಗವು ಕೇಂದ್ರ ಸರ್ಕಾರದ ಪ್ರಭಾವ ದಲ್ಲಿ ಕಾರ್ಯನಿರ್ವಹಿಸುತ್ತಿದೆಂಬುದು ಸ್ಪಷ್ಟವಾಗಿದೆ.

**ನ.25ರಂದು ಬೃಹತ್ ಸಮಾವೇಶ**

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಾತನಾಡಿ, ನ.25ರಂದು ದೆಹಲಿಯ ರಾಮಲೀಲಾ ಮೈದಾನದಲ್ಲಿ ಎಐಸಿಸಿ ವತಿಯಿಂದ ಬೃಹತ್ ಸಮಾವೇಶ ಮಾಡಲು ಚಿಂತನೆ ನಡೆಸಲಾಗಿದೆ. ಸಹಿ ಸಂಗ್ರಹ ಅಭಿಯಾನವನ್ನು ಇಲ್ಲಿಗೆ ನಿಲ್ಲಿಸುವುದಿಲ್ಲ. ಈ ಅಭಿಯಾನ ಇನ್ನೂ ಆಗದ ಪ್ರದೇಶಗಳಲ್ಲಿ ಇನ್ನು 34ದಿನ ಕಾಲಾವಕಾಶ ನೀಡಿ ಮುಂದುವರೆಸಲುಸೂಚಿಸಲಾಗುವುದೆಂದು ತಿಳಿಸಿದರು.

### 1.12 ಕೋಟಿ ಸಹಿ ಸಂಗ್ರಹ: ಡಿಕೆಶಿ

ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ, ರಾಜ್ಯ ಹಾಗು ದೇಶದಲ್ಲಿ ನಡೆಸಿರುವ ಮತ ಕಳವು ವಿರುದ್ಧ ಕರ್ನಾಟಕದಲ್ಲಿ ನಡೆದ ಸಹಿ ಸಂಗ್ರಹ ಅಭಿಯಾನದಲ್ಲಿ 1,12,40,000 ಸಹಿಗಳನ್ನು ಸಂಗ್ರಹಿಸಲಾಗಿದೆ. ಈ ಸಹಿ ಸಂಗ್ರಹದ ಅರ್ಜಿಗಳನ್ನು ಇದೇ ತಿಂಗಳು 10ರಂದು ದೆಹಲಿಗೆ ರವಾನಿಸಲು ತೀರ್ಮಾನಿಸಲಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು.

# ಇಂದು ಪ್ರತಿಮೆ ಪ್ರತಿಷ್ಠಾಪನೆ, 4ನೇ ಬೆಟ್ಟದ ಪದನಾಮ ಅನಾವರಣ

## ಉಪ ರಾಷ್ಟ್ರಪತಿ, ರಾಜ್ಯಪಾಲ, ಕೇಂದ್ರ ಸಚಿವರ ಆಗಮನ

• ಪ್ರಜೋದಯ ವರದಿ

**ಹಾಸನ:** ಜೈನಧರ್ಮ ಹಾಗು ಮುನಿ ಪರಂಪರೆಗೆ ಶ್ರೇಷ್ಟ ಕೊಡುಗೆ ನೀಡಿರುವ 20ನೇ ಶತಮಾನದ ಪ್ರಥಮಾಚಾರ್ಯ ಚಾರಿತ್ರ ಚಕ್ರವರ್ತಿ ಆಚಾರ್ಯ ಶ್ರೀ 108ನೇ ಶಾಂತಿಸಾಗರ ಮಹಾರಾಜರ ಪ್ರತಿಮೆ ಪ್ರತಿಷ್ಠಾಪನಾ ಮಹೋತ್ಸವ ಮತ್ತು ಶ್ರವಣಬೆಳಗೊಳ ಕ್ಷೇತ್ರದಲ್ಲಿ ನಾಲ್ಕನೇ ಬೆಟ್ಟದ ಪದನಾಮ ಅನಾವರಣ ಕಾರ್ಯಕ್ರಮ ಭಾನುವಾರ ನಡೆಯಲಿದೆ.



ಕಾರ್ಯಕ್ರಮಕ್ಕೆ ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್,ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಭಾಗಿಯಾಗಿ ವಿವಿಧ ಕಾರ್ಯಕ್ರಮ ಉದ್ಘಾಟಿಸುವರು.

ಶಾಂತಿ ಮಹಾರಾಜ ಶ್ರೀಗಳು ಬೆಳಗೊಳಕ್ಕೆ ಬಂದು 100 ವಸಂತಗಳ ಪುಣ್ಯಸ್ಮೃತಿ ಶತಮಾ ನೋತ್ಸವದ ನೆನಪಿನಲ್ಲಿ ಅವರ ಕೀರ್ತಿ ಶ್ರವಣ ಬೆಳಗೊಳದಲ್ಲಿ ಶಾಶ್ವತವಾಗಿರಲೆಂದು ವಿಂಧ್ಯಗಿರಿಯ ಪಕ್ಕದಲ್ಲಿರುವ ಮತ್ತೊಂದು ಖಾಲಿ ಬೆಟ್ಟದಲ್ಲಿ ಹತ್ತೂವರೆ ಅಡಿ ಉದ್ದದ ಮಹಾರಾಜರ ಮೂರ್ತಿ ಪ್ರತಿಷ್ಠಾಪನೆ ಮಾಡಲಾಗುತ್ತಿದೆ.

ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಪಟ್ಟಾಚಾರ್ಯ ವರ್ಯ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ಅಂದು ಬೆಳಿಗ್ಗ 10.30ಕ್ಕೆ ಶ್ರೀಕ್ಷೇತ್ರದ ಗೊಮ್ಮಟನಗರದ ಬಾಹುಬಲಿ ತಾಂತ್ರಿಕ ಮಹಾ ವಿದ್ಯಾಲಯದ ಆವರಣದಲ್ಲಿ ಕಾರ್ಯಕ್ರಮ ಆರಂಭವಾಗಲಿದೆ. ಮಧ್ಯಾಹ್ನ 1 ಗಂಟೆಗೆ 4ನೇ ಬೆಟ್ಟದ ಮೇಲೆ ಆಚಾರ್ಯ ಶ್ರೀ ಶಾಂತಿಸಾಗರ ಮಹಾರಾಜರ ಪ್ರತಿಮೆ ಪ್ರತಿಷ್ಠಾಪನಾ ಚರಣ ಪಾದುಕೆ ಸ್ಥಾಪನೆ ಹಾಗು ಬೆಟ್ಟಕ್ಕೆ ಪದನಾಮ ಅನಾವರಣ ಮತ್ತು ಶಾಂತಿಸಾಗರ ಮಹಾರಾಜರ ಜೀವನ ಚರಿತ್ರೆಯ ಬೃಹತ್ ಶೀಲಾಶಾಸನ ಲೋಕಾರ್ಪಣೆ ಆಗಲಿದೆ.

ಮಧ್ಯಾಹ್ನ 3.30 ಗಂಟೆಗೆ ಶ್ರೀ ಮಠದ ಮುಂಭಾಗದಿಂದ ಆಚಾರ್ಯ ಶ್ರೀ ಶಾಂತಿಸಾಗರ ಮಹಾರಾಜರ ಪ್ರತಿಮೆಯೊಂದಿಗೆ ವಿವಿಧ ಮಂಗಳ ವಾದ್ಯ, ಧರ್ಮ ಧ್ವಜ, ಮಂಗಳ ಕಳಶಗಳೊಂದಿಗೆ ಬೃಹತ್ ಮೆರವಣಿಗೆ ಹಾಗೂ ಸಂಜೆ 6 ಗಂಟೆಗೆ ಮೆರವಣಿಗೆಯಲ್ಲಿ ಸಾಗಿ ನೂತನವಾಗಿ ಸ್ಥಾಪಿತಗೊಂಡಿರುವ ಪ್ರತಿಮೆ ಪ್ರತಿಷ್ಠಾಪನೆ ಕಾರ್ಯಕ್ರಮ ಜರುಗಲಿದೆ.

ಬೆಳಿಗ್ಗೆ 8.45ಕ್ಕೆ ಶ್ರವಣಬೆಳಗೊಳಕ್ಕೆ ಆಗಮಿಸುವ ಉಪರಾಷ್ಟ್ರಪತಿ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಸ್ವಾಗತಿಸಲಿದ್ದು, 10.15ಕ್ಕೆ ನಿರ್ಗಮಿಸಲಿದ್ದಾರೆ. ಸಚಿವ ಡಿ. ಸುಧಾಕರ್, ಸಂಸದ ಶ್ರೇಯಸ್ ಪಟೇಲ್ ಭಾಗಿಯಾಗುವರು. ಶಾಸಕ ಸಿ.ಎನ್.ಬಾಲಕೃಷ್ಣ ಅಧ್ಯಕ್ಷತೆ ವಹಿಸುವರು.ಶಾಸಕರಾದ ಅಭಯ್ ಪಾಟೀಲ, ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ, ರಾಜ್ಯಸಭಾ ಸದಸ್ಯ ನವೀನ್ ಜೈನ್ ಹಾಗೂ ಮಹಾ ರಾಷ್ಟ್ರದ ಶಾಸಕರೂ ಭಾಗಿಯಾ ಗಲಿದ್ದಾರೆ.

# ಶಿರಾಡಿ ಘಾಟ್‌ನಲ್ಲಿ ಸುರಂಗ ಮಾರ್ಗದ ಸಮೀಕ್ಷೆಗೆ ಸಮಿತಿ

## ಹೆದ್ದಾರಿ-ರೈಲ್ವೆ ಜಂಟಿ ಕಾರ್ಯ | ಕೇಂದ್ರ ಸಚಿವ ನಿತಿನ್ ಗಡ್ಕರಿ ಪ್ರತಿಕ್ರಿಯೆ

• ಪ್ರಜೋದಯ ವರದಿ



**ಹಾಸನ:** ಶಿರಾಡಿ ಘಾಟ್‌ನಲ್ಲಿ ಸುರಂಗ ಮಾರ್ಗ ಸೇರಿ ರೈಲ್ವೇ ಮತ್ತು ಹೆದ್ದಾರಿಗಳ ಸಮಗ್ರ ಅಭಿವೃದ್ಧಿಗೆ ಜಂಟಿ ಸಮೀಕ್ಷೆ ನಡೆಸಲು ಕೇಂದ್ರ ಸರ್ಕಾರ ತಜ್ಞರ ಜಂಟಿ ಕಾರ್ಯಕಾರಿ ಸಮಿತಿಯನ್ನು ರಚಿಸಿದೆ.

ಮಂಗಳೂರು-ಬೆಂಗಳೂರು ಹೈಸ್ಪೀಡ್ ಕಾರಿಡಾರ್‌ಗೆ ಸಂಬಂಧಿಸಿದಂತೆ ಹಾಸನದಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಸಂಪರ್ಕ ಕಲ್ಪಿಸುವ ಶಿರಾಡಿ ಘಾಟ್‌ನಲ್ಲಿ ಸುರಂಗ ಮಾರ್ಗ ನಿರ್ಮಾಣದ ಜಂಟಿ ಸಮೀಕ್ಷೆಗೆ ಸಮಿತಿ ರಚಿಸಲು ಕೋರಿ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಪತ್ರ ಬರೆದಿದ್ದರು. ಅದಕ್ಕೆ ಪ್ರತಿಕ್ರಿಯಿಸಿರುವ ಸಚಿವರು ಸಮಿತಿ ರಚಿಸುವುದಾಗಿ ತಿಳಿಸಿದ್ದಾರೆ.

ಹೈಸ್ಪೀಡ್ ಕಾರಿಡಾರ್ ಯೋಜನೆಯಡಿ ಶಿರಾಡಿ ಘಾಟ್‌ನಲ್ಲಿ ಹೆದ್ದಾರಿ ಹಾಗು ರೈಲ್ವೆ ಮಾರ್ಗ ಅಭಿವೃದ್ಧಿಗೆ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸುವುದಕ್ಕೆ ಸಂಬಂಧಿಸಿದಂತೆ ಎರಡೂ ಇಲಾಖೆ ಗಳ ಸಹಭಾಗಿತ್ವದಲ್ಲಿ ಜಂಟಿ ಸಮೀಕ್ಷೆ ನಡೆಸಲು ತಜ್ಞರ ಸಮಿತಿ ರಚಿಸುವಂತೆ ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರು ಕೇಂದ್ರ ಹೆದ್ದಾರಿ ಸಚಿವಾಲಯಕ್ಕೆ ಮನವಿ ಮಾಡಿದ್ದರು. ಅವರ ಮನವಿಗೆ ಸ್ಪಂದಿಸಿದ ಕೇಂದ್ರ ಹೆದ್ದಾರಿ ಸಚಿವಾಲಯವು ತಜ್ಞರ ಜಂಟಿ ಕಾರ್ಯಕಾರಿ ಸಮಿತಿಯನ್ನು ರಚನೆ ಮಾಡಿದೆ.

ಈ ತಜ್ಞರ ಸಮಿತಿಯು ಶಿರಾಡಿ ಘಾಟ್ ಪ್ರದೇಶದಲ್ಲಿ ರೈಲು ಮತ್ತು ರಸ್ತೆ ಸಂಪರ್ಕಿತ ಸುರಂಗ ಮಾರ್ಗದ ಸಾಧ್ಯತೆ ಹಾಗೂ ಸಾಧಕ-ಬಾಧಕಗಳ ಬಗ್ಗೆ ಸಮಗ್ರ ಪರಿಶೀಲನೆ ನಡೆಸಲಿದೆ ಎಂದು ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರ್ ಅವರು ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಈ ಬಗ್ಗೆ ಸಂತಸ ವ್ಯಕ್ತಪಡಿಸಿರುವ ಸಂಸದ ಬ್ರಿಜೇಶ್ ಚೌಟ, ಇದು ಬೆಂಗಳೂರು- ಮಂಗ ಳೂರು ಹೈಸ್ಪೀಡ್ ಕಾರಿಡಾರ್ ಯೋಜನೆಯ ಬಗೆಗಿನ ದಕ್ಷಿಣ ಕನ್ನಡ ಜಿಲ್ಲೆಯ ಜನರ ಬಹುದಿನದ ಕನಸು ನನಸಾಗುವ ಮೊದಲ ಹೆಜ್ಜೆ ಯಾಗಿದೆ. ಶಿರಾಡಿ ಘಾಟ್ ಪ್ರದೇಶದ ಪರಿಸರ ಸೂಕ್ಷ್ಮತೆ ಮತ್ತು ಭೌಗೋಳಿಕ ಸಂಕೀರ್ಣತೆಯನ್ನು ಗಮನದಲ್ಲಿಟ್ಟು ಕೊಂಡು ಈ ಭಾಗದಲ್ಲಿ ರಸ್ತೆ ಹಾಗೂ ರೈಲು ಹಳಿಗಳ ಅಭಿವೃದ್ಧಿ ಕಾಮಗಾರಿಗೆ ರೈಲ್ವೇ ಇಲಾಖೆ ಹಾಗು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಜಂಟಿ ಸಮೀಕ್ಷೆ ಕೈಗೊಳ್ಳಲು ಮತ್ತು ಡಿಪಿಆರ್ ಮೇಲ್ವಿಚಾರಣೆಗೆ ತಜ್ಞರ ಸಮಿತಿ ನೇಮಿಸುವಂತೆ ಮನವಿ ಮಾಡಲಾಗಿತ್ತು. ನಮ್ಮ ಮನವಿಗೆ ತಕ್ಷಣ ಸ್ಪಂದಿಸಿರುವ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಧನ್ಯವಾದಗಳು ಎಂದಿದ್ದಾರೆ.

## ಜಾತಿ ಕಂದಕ ತೊಡೆದುಹಾಕಿದ ಮಹನೀಯ | ಸಂಸದ ಶ್ರೇಯಸ್ ಪಟೇಲ್

# ಕೀರ್ತನೆಗಳಿಂದ ಸಮಾನತೆಯ ಸಂದೇಶ ಸಾರಿದ ಕನಕದಾಸರು

• ಪ್ರಜೋದಯ ವರದಿ



**ಹಾಸನ:** ನಾಡು ಕಂಡ ಶ್ರೇಷ್ಠ ದಾರ್ಶನಿಕ, ಕೀರ್ತನಕಾರ ಕನಕದಾಸರು ತಮ್ಮ ಅಮರವಾದ ಕೀರ್ತನೆಗಳ ಮೂಲಕ ಸಮಾನತೆ, ನ್ಯಾಯ, ಭಕ್ತಿಯ ನಿಜವಾದ ಅರ್ಥವನ್ನು ಜನಮನಕ್ಕೆ ಬೋಧಿಸಿದ್ದಾರೆ ಎಂದು ಸಂಸದ ಶ್ರೇಯಸ್ ಪಟೇಲ್ ಅವರು ತಿಳಿಸಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಶನಿವಾರ ಜಿಲ್ಲಾಡಳಿತದಿಂದ ಹಮ್ಮಿಕೊಂಡಿದ್ದ ದಾಸ ಶ್ರೇಷ್ಠ ಶ್ರೀಕನಕದಾಸ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನಕದಾಸರು ಬಡವರು, ಹಿಂದುಳಿದವರ ಹೃದಯದ ಮಾತುಗಳನ್ನು ಕೀರ್ತನೆಗಳ ರೂಪದಲ್ಲಿ ತಂದ ಜನಮಾನಸದ ಕವಿ. ಭಕ್ತಿಯ ಮಾರ್ಗವೇ ಮಾನವೀಯತೆಯ ಮಾರ್ಗ. ಕನಕದಾಸರ ಸಂದೇಶ ವನ್ನು ಪ್ರತಿಯೊಬ್ಬರೂ ಪಾಲಿಸೋಣ ಎಂದು ಕರೆ ನೀಡಿದರು.

ತಮ್ಮ ಕೀರ್ತನೆಗಳ ಮೂಲಕವೇ ಜಾತಿ ಜಾತಿಗಳ ನಡುವಿನ ಕಂದಕವನ್ನು ತೊಡೆದು ಹಾಕುವ ಮೂಲಕ ಸಮಾಜದಲ್ಲಿ ಭತ್ತ ಮತ್ತು ರಾಗಿ ಶ್ರೇಷ್ಠತೆ ಬಗೆಗಿನ ರಾಮಧಾನ್ಯ ಚರಿತೆ ಮೂಲಕ ಬಡವ ಮತ್ತು ಶ್ರೀಮಂತನ ನಡುವಿನ ಶ್ರೇಷ್ಠತೆ ಸಮಾಜಕ್ಕೆ ನೀಡಿದ ಉತ್ತಮ ಸಂದೇಶ, ಕನಕ ದಾಸರು ಇಂದು ಸಮುದಾಯಕ್ಕೆ ಸೀಮಿತವಾಗಿಲ್ಲ ಇಡೀ ದೇಶ ಹಾಗು ಪ್ರಪಂಚಕ್ಕೆ ಮಾದರಿ ಯಾಗುವ ಅಪ್ರತಿಮ ನಾಯಕರು ಅಂತಹ ಮಹಾನ್ ದಾರ್ಶನಿಕರನ್ನು ಸ್ಮರಿಸುವುದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯ ಎಂದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರು ಮಾತನಾಡಿ, ದಾಸ ಶ್ರೇಷ್ಠ ಶ್ರೀ ಕನಕದಾಸರ ಬರವಣಿಗೆ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದೆ. ಇಂತಹ ಮಹಾನ್ ಮಾನವತಾವಾದಿ ನಮ್ಮ ರಾಜ್ಯದಲ್ಲಿ ಹುಟ್ಟಿರುವುದು ನಮ್ಮ ನಿಮ್ಮೆಲ್ಲರ ಹೆಮ್ಮೆ. ಕನಕದಾಸರು ದಾಸ ಶ್ರೇಷ್ಠರು ತಮ್ಮ ಇಡೀ ಜೀವನವನ್ನು ಸಮಾಜದ ಸೇವೆಗೆ ಮುಡಿಪಾಗಿಇಟ್ಟವರು. ಮನುಷ್ಯನ ಬದುಕಿಗೆ ಕನಕ ದಾಸರು ಹೇಳಿರುವ ಸಾಲುಗಳು ಸ್ಫೂರ್ತಿ ದಾಯಕ ಅವರ ತತ್ವ ಆದರ್ಶಗಳನ್ನು ಮೈಗೂಡಿಸಿ ಕೊಳ್ಳಬೇಕೆಂದು ಕರೆ ನೀಡಿದರು.

ಕಾಗಿನೆಲೆ ಆದಿಕೇಶವನ ದೇವಾಲಯದಲ್ಲಿ ಇಂದಿಗೂ ಅವರು ಬಳಸಿದ ವಸ್ತುಗಳು ಅವರ ನೆನಪನ್ನು ಮರುಕಳಿಸುತ್ತದೆ. 16ನೇ ಶತಮಾನದಲ್ಲೇ ತಮ್ಮ ಎಲ್ಲಾ ಲೌಕಿಕ ಜೀವನವನ್ನು ಬದಿ ಗಿಟ್ಟು ತಮ್ಮ ಕೀರ್ತನೆಗಳ ಮೂಲ ಕವೇ ಸಮಾಜದ ಏಳಿಗೆಗೆ ಶ್ರಮಿಸಿದ ಅವರ ಜೀವನಶೈಲಿ ಎಲ್ಲರಿಗೂ ಮಾದರಿ ಎಂದರು.

ಶಾಸಕ ಹೆಚ್.ಪಿ.ಸ್ವರೂಪ್ ಅವರ ಪ್ರಕಾಶ್, ಮಹಾನಗರ ಪಾಲಿಕೆಯ ಮೇಯರ್ ಗಿರೀಶ್ ಚನ್ನವೀರಪ್ಪ, ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಪ್ಪ, ತಹಶೀಲ್ದಾರ್ ಗೀತಾ, ಸಮುದಾಯದ ಮುಖಂಡರಾದ ಸಿದ್ದೇಗೌಡ, ನವಿಲೆ ಅಣ್ಣಪ್ಪ, ಮಲ್ಲಿಗೆವಾಳು ದ್ಯಾವಪ್ಪ, ಇತರರು ಉಪಸ್ಥಿತರಿದ್ದರು.

### ಕನಕದಾಸರ ಭಾವಚಿತ್ರ ಮೆರವಣಿಗೆ

ದಾಸಶ್ರೇಷ್ಠ ಶ್ರೀ ಕನಕದಾಸರ ಜಯಂತಿ ಪ್ರಯುಕ್ತ ಜಿಲ್ಲಾಡಳಿತ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸಕ ಹೆಚ್.ಎಸ್.ಸ್ವರೂಪ್ ಭಾಗವಹಿಸಿದ್ದರು. ಜಿಲ್ಲಾಧಿಕಾರಿಗಳ ಕಚೇರಿ ಯಿಂದ ಕಲಾಭವನದವರೆಗೂ ಹೊರಟ ಮೆರವಣಿಗೆಗೆ ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಚಾಲನೆ ನೀಡಿ ಕಲಾಭವನದವರೆಗೂ ಕಲಾ ತಂಡಗಳೊಂದಿಗೆ ಕಾಲ್ನಡಿಗೆಯಲ್ಲಿ ತೆರಳಿ ವೇದಿಕೆ ಕಾರ್ಯಕ್ರಮದಲ್ಲಿ ಭಾಗಿಯಾದರು. ನಂತರ ಮಾತನಾಡಿದ ಶಾಸಕರು, ಕನಕದಾಸರ ಕೊಡುಗೆ ಹಾಗೂ ಸಾಧನೆಗಳನ್ನು ಸ್ಮರಿಸಿದರು.

# ಡಿ.1 ರಿಂದ 19ರ ವರೆಗೆ ಸಂಸತ್ ಚಳಿಗಾಲ ಅಧಿವೇಶನ

• ಪ್ರಜೋದಯ ವರದಿ

**ನವದೆಹಲಿ:** ಸಂಸತ್ತಿನ ಚಳಿಗಾಲದ ಅಧಿವೇಶನ ಡಿ.1 ರಿಂದ 19ರ ವರೆಗೆ ನಡೆಯಲಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಹೇಳಿದ್ದಾರೆ.

ಸಂಸತ್ತಿನ ಚಳಿಗಾಲದ ಅಧಿವೇಶನ ನಡೆಸುವ ಸರ್ಕಾರದ ಪ್ರಸ್ತಾವಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅಂಕಿತ ಹಾಕಿದ್ದಾರೆ. ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಲು ಹಾಗು ಜನರ ಆಶೋತ್ತರಗಳನ್ನು ಈಡೇರಿಸಲು ರಚನಾತ್ಮಕ ಹಾಗು ಅರ್ಥಪೂರ್ಣ ಅಧಿವೇಶನವನ್ನು ಎದುರು ನೋಡುತ್ತಿದ್ದೇನೆ. ಬಿಹಾರ ವಿಧಾನಸಭಾ ಚುನಾವಣೆಯ ನಂತರ ನಡೆಯುತ್ತಿರುವ ಸಂಸತ್ತಿನ ಚಳಿಗಾಲದ ಅಧಿವೇಶನ ಮಹತ್ವದ್ದಾಗಿದೆ ಎಂದು ತಿಳಿಸಿದರು.

ಬಿಹಾರದಲ್ಲಿ ಮತದಾರರ ವಿಶೇಷ ತೀವ್ರ ಪರಿಷ್ಕರಣೆ ನಂತರ ಮೊದಲ ಹಂತದ ಚುನಾವಣೆ ನಡೆಸಲಾಗಿದೆ. ವಿರೋಧ ಪಕ್ಷಗಳು ರಾಷ್ಟ್ರವ್ಯಾಪಿ ಮತ್ತು ಹರಿಯಾಣ, ಕರ್ನಾಟಕ, ಮಹಾ ರಾಷ್ಟ್ರದಲ್ಲಿ ಮತ ಕಳ್ಳತನ ಆರೋಪ ವಿಚಾರ ಪ್ರಸ್ತಾಪಿಸಿ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುವ ಸಾಧ್ಯತೆಯಿದೆ.

ಸಂವಿಧಾನದ 130ನೇ ತಿದ್ದುಪಡಿ ಮಸೂದೆ, ಕೇಂದ್ರಾಡಳಿತ ಪ್ರದೇಶಗಳ ಸರ್ಕಾರ (ತಿದ್ದುಪಡಿ) ಮಸೂದೆ ಮತ್ತು ಜಮ್ಮು ಮತ್ತು ಕಾಶ್ಮೀರ ಮರುಸಂಘಟನೆ ಮಸೂದೆ ಈ ಬಾರಿಯ ಅಧಿವೇಶನದಲ್ಲಿ ಅಂಗೀಕಾರವಾಗುವ ಸಾಧ್ಯತೆಯಿದೆ. ಜು.21 ರಿಂದ ಆ.21ರ ವರೆಗೆ ನಡೆದ ಕೊನೆಯ ಸಂಸತ್ ಅಧಿವೇಶನ ಪದೇ ಪದೇ ಅಡ್ಡಿ, ಮುಂದೂಡಿಕೆ ಮತ್ತು ಸಭಾತ್ಯಾಗಗಳಿಗೆ ಸಾಕ್ಷಿಯಾಗಿತ್ತು.

# ಓದುವುದು ಕೇವಲ ಜ್ಞಾನಕ್ಕಲ್ಲ, ಅನುಭವ, ಅರಿವಿಗೆ

## ಪುಸ್ತಕಗಳು ಕಾಲದ ಸ್ಮರಣಿಕೆ | ಸಾಹಿತಿ ಗಿರಿಮನೆ ಶ್ಯಾಮರಾವ್ ಅಭಿಪ್ರಾಯ

• ಪ್ರಜೋದಯ ವರದಿ



**ಹಾಸನ:** ಓದುವುದರಿಂದ ಕೇವಲ ಜ್ಞಾನ ಸಿಗುವುದಿಲ್ಲ, ಅದು ಅನುಭವ, ಅರಿವು ಮತ್ತು ಪ್ರಜ್ಞೆಯನ್ನು ಕಟ್ಟಿ ಕೊಡುವ ಶಕ್ತಿ ಹೊಂದಿದೆ ಎಂದು ಸಾಹಿತಿ ಗಿರಿಮನೆ ಶ್ಯಾಮರಾವ್ ಅವರು ಅಭಿಪ್ರಾಯಪಟ್ಟರು.

ನಗರದ ಸಪ್ನ ಬುಕ್ ಹೌಸ್‌ನಲ್ಲಿ ನಡೆದ ಮೊದಲ ವರ್ಷದ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಪುಸ್ತಕಗಳು ಕೇವಲ ಅಕ್ಷರಗಳ ಸಂಗ್ರಹವಲ್ಲ, ಅವು ಕಾಲದ ಸ್ಮರಣಿಕೆ ಎಂದರು.

ಒಬ್ಬರು ಬರೆದ ಸಾಹಿತ್ಯ, ಕಾದಂಬರಿ, ಪತ್ರ ಅಥವಾ ಕವಿತೆ ಅವು ಬರೆಯಲ್ಪಟ್ಟ ಕಾಲದ ಜೀವನಶೈಲಿ, ಆಲೋಚನೆ, ಸಂಸ್ಕೃತಿ, ಭಾವನೆ ಹಾಗೂ ಸಾಮಾಜಿಕ ಸ್ಥಿತಿಗಳನ್ನು ತೋರಿಸುತ್ತವೆ. ನಾವು ಓದಿದಾಗ ನಾವು ಆ ಕಾಲಘಟ್ಟಕ್ಕೆ ಪ್ರಯಾಣಿಸುತ್ತೇವೆ. ಓದು ನಮ್ಮನ್ನು ಕೇವಲ ತಿಳುವಳಿಕೆಗಷ್ಟೇ ಕೊಂಡೊಯ್ಯುವುದಿಲ್ಲ, ಅದು ಆಯಾ ಕಾಲದ ಬದುಕಿನ ರುಚಿ, ನೋವು, ಹರ್ಷ ಮತ್ತು ಮನೋಭಾವವನ್ನು ಅನುಭವಿಸಲು ಸಹಾಯ ವ'ಾಡ'ುತ್ತ' ದ'ೆಂದ'ು ತಿಳಿಸಿದರು.

ಓದು ಅನುಭವ ಕಟ್ಟಿಕೊಡುತ್ತದೆ. ಓದುವುದರಿಂದ ಇತರರ ಬದುಕು, ಚಿಂತನೆ, ಅನುಭವ ಗಳನ್ನು ಅರಿತುಕೊಳ್ಳುವುದರ ಜೊತೆಗೆ ಜೀವನದ ವಿವಿಧ ಪರಿಸ್ಥಿತಿಗಳಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬ ಅರಿವು ಬರುತ್ತದೆ. ನಾವೇ ಅನುಭವಿಸದ ಸಂಗತಿಗಳನ್ನು ಪುಸ್ತಕಗಳ ಮೂಲಕ ಕಲಿಯಬಹುದೆಂದು ಹೇಳಿದರು.

» ನಾಲ್ಕನೇ ಪುಟದಲ್ಲಿ

# ಶಾಸಕರಿಂದ ಆಟೋ ನಿಲ್ದಾಣ ಉದ್ಘಾಟನೆ



ಹಾಸನ: ನಗರದ ಎಂ.ಜಿ.ರಸ್ತೆಯ ಬಿಜಿಎಸ್ ಕಾಲೇಜು ಮುಂಭಾಗದಲ್ಲಿ ಆಟೋ ನಿಲ್ದಾಣ ನಿರ್ಮಾಣ ಮಾಡಬೇಕೆಂಬ ಬಹುದಿನದ ಬೇಡಿಕೆಯನ್ನು ಶಾಸಕ ಹೆಚ್.ಪಿ.ಸ್ವರೂಪ್ ಅವರು ಈಡೇರಿಸಿದ್ದಾರೆ. ಶಾಸಕರ ಅನುದಾನದಲ್ಲಿ ನಿರ್ಮಾಣಗೊಂಡ ಆಟೋ ನಿಲ್ದಾಣವನ್ನು ಶನಿವಾರ ಉದ್ಘಾಟಿಸಿ, ಈ ಸಂದರ್ಭದಲ್ಲಿ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಕನ್ನಡ ಧ್ವಜಾರೋಹಣ ನೆರವೇರಿಸಿ ಶುಭಹಾರೈಸಿದರು. ಮಹಾನಗರಪಾಲಿಕೆ ಮೇಯರ್ ಗಿರೀಶ್ ಚನ್ನವೀರಪ್ಪ, ಆಟೋ ಚಾಲಕರು ಮತ್ತು ಮಾಲೀಕರು ಮತ್ತಿತರರು ಉಪಸ್ಥಿತರಿದ್ದರು.

# ವಾಹನಗಳ ನಡುವೆ ಕಾಡಾನೆ ಭೀಮನ ಸಂಚಾರ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನ ಬಿಕ್ಕೋಡು ಗ್ರಾಮದಲ್ಲಿ ಒಂಟಿ ಸಲಗವೊಂದು ವಾಹನಗಳ ನಡುವೆ ಹಾಗು ಜನರ ಸಮೀಪದಲ್ಲೇ ಯಾರಿಗೂ ತೊಂದರೆ ಕೊಡದೆ ಸಾಕಾನೆಯಂತೆ ಓಡಾಡಿದೆ.

ಗ್ರಾಮದೊಳಗೆ ಆಗಮಿಸಿದ ಭೀಮ ಹೆಸರಿ ಕಾಡಾನೆಯನ್ನು ಇಟಿಎಫ್ ಸಿಬ್ಬಂದಿ ಮೈಕ್‌ನಲ್ಲಿ ಅನೌನ್ಸ್ ಮಾಡುತ್ತ ಎಸ್ಕಾರ್ಟ್ ಮಾಡಿದ್ದಾರೆ. ಈ ವೇಳೆ ಕಾಡಾನೆ ಭೀಮ, ಸಾಕಾನೆಯಂತೆಯೇ ಯಾವುದೇ ಗೊಂದಲಕ್ಕೊಳಗಾಗದೇ ಹೆಜ್ಜೆ ಹಾಕಿದೆ. ಸುತ್ತಮುತ್ತ ಜನರು ಇರುವುದನ್ನು ಕಂಡು, ಸೊಂಡಿಲಿನಲ್ಲಿ ತನ್ನದೇ ಶೈಲಿಯಲ್ಲಿ ಸನ್ನೆ ಮಾಡುತ್ತಾ, ಜನರತ್ತ ನೋಡಿ ಕಾಡಿನ ಕಡೆ ಹೆಜ್ಜೆ ಹಾಕಿದೆ. ಇಟಿಎಫ್ ಸಿಬ್ಬಂದಿ ಎಸ್ಕಾರ್ಟ್ ಮಾಡುವ ವಿಡಿಯೋ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಜನರನ್ನು ಕಂಡು ಸೊಂಡಲು ಎತ್ತಿ ಸಾಗುತ್ತಿರುವುದು ಸಹ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ತಾಲ್ಲೂಕಿನ ಜಗಬೋರನಹಳ್ಳಿ ಗ್ರಾಮದ ಜಗಬೋರನಹಳ್ಳಿ ಫಾರೆಸ್ಟ್, ಅರಕರವಳ್ಳಿ ಹಾಗು ಹುಲ್ಕೋಡು ಗ್ರಾಮದ ಮುಕ್ಬಾಲ್ ಅವರ ತೋಟ, ಸುತ್ತಮುತ್ತ ಕಾಡಾನೆಗಳು ಕಂಡುಬಂದಿವೆ.



**ಹಲವೆಡೆ ಗಜಪಡೆ ಸಂಚಾರ**

ಸಕಲೇಶಪುರ ತಾಲ್ಲೂಕಿನ ವಿಜಿ ಶೆಟ್ಟಿ ತೋಟದ ಪಕ್ಕದ ಕಾಡು, ಸುಳ್ಳಕ್ಕಿ ಗ್ರಾಮದ ಮೇಘಲಕೆರೆ ಸುತ್ತಮುತ್ತ ಕಾಡಾನೆಗಳು ಕಾಣಿಸಿಕೊಂಡಿವೆ. ಹೆತ್ತೂರು ಮತ್ತು ಯಸಳೂರು ಹೋಬಳಿ ವ್ಯಾಪ್ತಿಯ ಹೊಸಳ್ಳಿ ಗ್ರಾಮದ ಜಾತ್ರೆ, ಮೇಳ ಹಾಗು ಅಡಿಕೆ ಹಡ್ಲು, ಹಡ್ಲು ಗದ್ದೆ ಗ್ರಾಮದ ಹೊಳೆಸಾಲು, ಕಿರ್ಕಳ್ಳಿ ಗ್ರಾಮದ ಒತಿ ಗದ್ದೆ, ಮುತ್ತು ಕೋಲು, ವಣಗೂರು ಗ್ರಾಮದ ಕೂಲ್ ಗದ್ದೆ, ಮತ್ತೂರು ಗ್ರಾಮದ ನೀಲಗಿರಿ ನಡುತೋಪು, ದಬ್ಬಳ್ಳಿ ಗ್ರಾಮದ ನೀಲಗಿರಿ ನಡುತೋಪು, ಬಾಚಿಹಳ್ಳಿ ಗ್ರಾಮದ ಬಿಲ್ಲರ್ ದಿನೆ, ಸುತ್ತಮುತ್ತ ಕಾಡಾನೆಗಳು ಕಾಣಿಸಿಕೊಂಡು ಜನರಲ್ಲಿ ಆತಂಕ ಮೂಡಿಸಿವೆ. ಕಾಡಾನೆಗಳು ಕಾಫಿ ತೋಟದಲ್ಲೇ ಬೀಡು ಬಿಟ್ಟಿರುವುದರಿಂದ ಕಾಫಿ ಹಣ್ಣು ಕೊಯ್ಲಿಗೆ ಅಡ್ಡಿಯುಂಟಾಗಿದೆ.

## ಶಾಂತಿ ಸಾಗರ ಮುನಿಗೆ ಗೌರವ | ಐತಿಹಾಸಿಕ ಶಿಲಾ ಶಾಸನ ಅಳವಡಿಕೆ

# ಜೈನಕಾಶಿಯ ಇತಿಹಾಸ ಪುಟಕ್ಕೆ ಮತ್ತೆರಡು ಹಿರಿಮೆ ಸೇರ್ಪಡೆ

-ಆರ್.ಶ್ರೀನಿವಾಸ್ ಉಳ್ಳಾವಳ್ಳಿ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ತಾಲ್ಲೂಕಿನ ಜೈನಕಾಶಿ ಶ್ರವಣಬೆಳಗೊಳವು ಚಂದ್ರಗಿರಿ ಹಾಗು ಇಂದ್ರಗಿರಿ ಬೆಟ್ಟ ಸೇರಿ ಏಕಶಿಲಾ ಶ್ರೀ ಬಾಹುಬಲಿ ಮೂರ್ತಿಯೊಂದಿಗೆ ತನ್ನದೇಯಾದ ಮಹತ್ವ ಹೊಂದಿದ್ದು ಸಾವಿರಾರು ವರ್ಷಗಳ ಇತಿಹಾಸ ಹೊಂದಿದೆ.

ಚಾರುಗಿರಿ ಮತ್ತು ಶಾಂತಿಗಿರಿ ಬೆಟ್ಟಗಳು ಸೇರ್ಪಡೆಯಾಗುವ ಮೂಲಕ ಮತ್ತಷ್ಟು ಹಿರಿಮೆ ಹೆಚ್ಚಿಸಿದೆ. ಶ್ರೀ ಕ್ಷೇತ್ರದ ನೂತನ ಪೀಠಾಧ್ಯಕ್ಷ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರು ವಿನೂತನ ದೃಷ್ಟಿಕೋನದಿಂದ ಕ್ಷೇತ್ರದ ಬೆಳಕನ್ನು ಎಲ್ಲೆಡೆ ಹರಡುವಲ್ಲಿ ಕಾರ್ಯನಿರತರಾಗಿದ್ದಾರೆ.

ತಮ್ಮ ದೀಕ್ಷಾ ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರ ನಿಷಿಧಿ ಮಂಟಪ ನಿರ್ಮಿಸುವ ಮೂಲಕ ಆ ಪ್ರದೇಶವನ್ನು ಚಾರುಗಿರಿಯನ್ನಾಗಿ ಮಾಡಿದ್ದಾರೆ. ಪ್ರಸಕ್ತ ಸಾಲಿನಲ್ಲಿ 20ನೇ ಶತಮಾನದ ಪ್ರಥಮಚಾರ್ಯ ಚಾರಿತ್ರ ಚಕ್ರವರ್ತಿ ಆಚಾರ್ಯ ಶ್ರೀ 108 ಶಾಂತಿಸಾಗರ ಮಹಾರಾಜ ಅವರ ಹತ್ತು ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ದೊಡ್ಡ ಬೆಟ್ಟಕ್ಕೆ ಹೊಂದಿಕೊಂಡಿರುವ ಮತ್ತೊಂದು ಚಿಕ್ಕ ಬೆಟ್ಟದಲ್ಲಿ ಪ್ರತಿಷ್ಠಾಪಿಸುವ ಮೂಲಕ ಶಾಂತಿಗಿರಿ ಅನಾವರಣಕ್ಕೆ ಮುಂದಾಗಿದ್ದಾರೆ.

ಅಲ್ಲದೆ ಬೆಂಗಳೂರು ರಸ್ತೆಯಲ್ಲಿರುವ ಚಿಕ್ಕ ಬೆಟ್ಟಕ್ಕೆ ಹೊಂದಿಕೊಂಡಂತಿರುವ ಮತ್ತೊಂದು ಪ್ರದೇಶದ 5ನೇ ಬೆಟ್ಟವನ್ನು ಇತಿಹಾಸದ ಪುಟಗಳಲ್ಲಿ ಸೇರಿಸುವ ಸಂಕಲ್ಪ ಹೊಂದಿದ್ದಾರೆ. ಈ 5ನೇ ಬೆಟ್ಟದಲ್ಲಿ ಶ್ರೀ ಕ್ಷೇತ್ರದಿಂದ ಧಾರ್ಮಿಕ ಬೆಳಕನ್ನು ವಿಶ್ವಕ್ಕೆ ಬೆಳಗಿಸಿದ ಮಹನೀಯರಾದ ಭದ್ರಬಾಹು ಮುನಿಗಳು, ಚಾವುಂಡರಾಯ, ಕಾಳಲಾದೇವಿ, ಗುಳ್ಳಕಾಯಿ ಅಜ್ಜಿ, ಗಂಗರಾಜ, ಶುಭಚಂದ್ರಾಚಾರ್ಯರು ಸೇರಿ ಮುಂತಾದವರ ಪ್ರತಿಮೆಗಳನ್ನು ಸ್ಥಾಪಿಸಿ ಅವರ ಕುರಿತಂತೆ ಶಿಲಾ ಶಾಸನಗಳನ್ನು ಅಳವಡಿಸುವ ಮೂಲಕ ಮತ್ತೊಂದು ಇತಿಹಾಸ ತಾಣವನ್ನಾ ಗಿಸುವ ದೂರದೃಷ್ಟಿ ಶ್ರೀಗಳದ್ದಾಗಿದೆ.

**ಶಾಂತಿಸಾಗರ ಮಹಾರಾಜರ ಹಿನ್ನಲೆ**

ಆಚಾರ್ಯ ಶ್ರೀ ಶಾಂತಿಸಾಗರ ಮಹಾರಾಜರು 19ನೇ ಶತಮಾನದ ಆಷಾಢ ಕೃಷ್ಣ ಪಕ್ಷ ಬುಧವಾರ ಜುಲೈ 25, 1872ರಲ್ಲಿ ಬೆಳ ಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಭೋಜ ಗ್ರಾಮದ ಸಂಪ್ರದಾಯಸ್ಥ ಸ್ಯಾದ್ವಾದ ಸಂಸ್ಕೃತಿಯ ಆದರ್ಶ ಜೈನ ಕುಟುಂಬದ ಭೀಮಗೌಡ ಮತ್ತು ಸತ್ಯವತಿ ದಂಪತಿ ಸುಪುತ್ರರಾಗಿ ತಾಯಿಯ ತವರು ಯಳಗೋಡ ಗ್ರಾಮದಲ್ಲಿ ಸಾತಗೌಡ ಪಾಟೀಲರೆಂಬ ಶುಭನಾಮಧೇಯ ದಿಂದ ಜನ್ಮ ತಾಳಿದರು.

ಬಾಲ್ಯದಿಂದಲೇ ಅಂತರ್ಮುಖಿಯಾಗಿದ್ದ ಸಾತಗೌಡ ಪಾಟೀಲರು ಲೌಕಿಕ ಬದುಕನ್ನು ತಿರಸ್ಕರಿಸುತ್ತಲೇ ಆಧ್ಯಾತ್ಮಿಕ ಬದುಕನ್ನು ಅಪ್ಪಿ ಮುದ್ದಾಡುತ್ತಿದ್ದರು. ಮನದ ನೈರ್ಮಲ್ಯವನ್ನು ಸಾಧಿಸಲು ದೇಹದ ಮೇಲೆ ಮಲವನ್ನು ಧರಿಸಲು ಸಿದ್ಧರಾಗಿದ್ದರು. ಗೃಹಸ್ಥದಲ್ಲಿದ್ದರೂ ವೈರಾಗಿ ಯಾಗಿ, ವೈರಾಗ್ಯದಲ್ಲಿ ಅನುರಕ್ತರಾಗಿ ಅತೀವ ಆನಂದದ ಅನುಭವವನ್ನುಂಡು ವಿರಾಗದ ಮೇರುವಿನಂತೆ ಜಗತ್ತಿಗೆ ಕಂಡರು.

ಬಾಲ್ಯದಿಂದ ಬದುಕಿನುದ್ದಕ್ಕೂ ಬದುಕು ಬದುಕಲು ಬಿಡು ಎಂಬ ತತ್ವದಡಿ ಜೀವನ ರೂಪಿಸಿ ಕೊಂಡು ಪ್ರಾಣಿ ದಯೆಯೇ ಧರ್ಮದ ಗುರಿ ಎಂದರಿತು ನಡೆದು ಎಲ್ಲಾ ಜೀವಿಗಳಲ್ಲೂ ಪ್ರೀತಿ, ಮಮತೆ, ಕರುಣೆ ತೋರಿ ಯಾರೊಂದಿಗೂ ಶತ್ರುತ್ವ ಭಾವ ತೋರದೇ ಎಲ್ಲರೊಂದಿಗೂ ಮಿತ್ರತ್ವ ದಿಂದ ಕೂಡಿ ನಡೆದು ದಯಾಸಿಂಧು, ಪ್ರೇಮಬಂಧು ಎಂದೆನಿಸಿ ಸಂಯಮ ಪಥದಲ್ಲಿ ಸಾಗಿಆತ್ಮ ಜ್ಯೋತಿ ಯನ್ನು ಸಮುಜ್ವಲಗೊಳಿಸಿದ ಮಹಾನ್ ತ್ಯಾಗಿಯಾದವರು.

ಸಾತಗೌಡರು 22ನೇ ವಯೋಮಾನದಲ್ಲಿ ಮಹೀಷವಾಡಿ ಗ್ರಾಮದಲ್ಲಿ ವಿರಕ್ತಭಾವ ಹೊಂದಿ ಸಿದ್ದಸಾಗರರಿಂದ ಬ್ರಹ್ಮಚರ್ಯ ವ್ರತ ಸ್ವೀಕರಿಸಿ ಬಾಹ್ಯದ ಪ್ರತೀಕ್ಷೆಯನ್ನು ತ್ಯಜಿಸಿ ಮೋಕ್ಷ ಮಾರ್ಗದಲ್ಲಿ ನಡೆದರು.

» ನಾಲ್ಕನೇ ಪುಟದಲ್ಲಿ

# ಹಣ ಉಳಿತಾಯ ಒಂದೇ ಸಾಲದು, ಹೂಡಿಕೆ ಮರೆಯದಿರಿ!



ಪ್ರತಿ ತಿಂಗಳು ಬ್ಯಾಂಕಿನ ಸೇವಿಂಗ್ಸ್ ಅಕೌಂಟ್‌ನಲ್ಲಿ 10000 ರುಪಾಯಿಗಳನ್ನು ಹೂಡಿಕೆ ಮಾಡುವುದು ಎಂದರೆ ಒಳ್ಳೆಯ ಸಂಗತಿ ಎಂದು ಭಾವಿಸಬಹುದು. ಇದರಿಂದ ಬೇಗ ಶ್ರೀಮಂತರಾಗಿಬಿಡಬಹುದು ಎಂಬ ಆಲೋಚನೆ ಬರಬಹುದು. ಆದರೆ ಇಂಥ ಉಳಿತಾಯ ಒಂದೇ ಸಾಕಾಗುವುದಿಲ್ಲ. ಅದೊಂದರಿಂದಲೇ ನಿಮ್ಮ ಹಣ ನೀವು ನಿರೀಕ್ಷಿಸಿದ ಮಟ್ಟಕ್ಕೆ ಬೆಳೆಯುವುದಿಲ್ಲ. ಆದರೆ ಇದರ ಬದಲಿಗೆ ಸರಳವಾಗಿ ಒಂದು ಬದಲಾವಣೆ ಮಾಡಿಕೊಂಡರೆ ನೀವು ಅಂದುಕೊಂಡಂತೆ ಶ್ರೀಮಂತರಾಗಬಹುದು!

ಇದಕ್ಕೆ ಉದಾಹರಣೆಯಾಗಿ ರಾಕೇಶ್ ಎಂಬ 30 ವರ್ಷ ವಯಸ್ಸಿನ ಉದ್ಯೋಗಿಯ ಕಥೆ ಕೇಳಿ. ಅವರು ಕಳೆದ 5 ವರ್ಷಗಳಿಂದ ಪ್ರತಿ ತಿಂಗಳೂ 10000 ರುಪಾಯಿಗಳನ್ನು ಸೇವಿಂ ಅಕೌಂಟ್‌ನಲ್ಲಿ ಉಳಿತಾಯ ಮಾಡುತ್ತಿದ್ದಾರೆ. ಅವರ ಅಕೌಂಟ್‌ನಲ್ಲಿ 6 ಲಕ್ಷ ರುಪಾಯಿಗಳು ಇವೆ. ಬಹಳ ಆಯಿತು ಎಂದು ಅನೇಕ ಮಂದಿ ಭಾವಿಸಬಹುದು. ತಾವು ಬಯಸಿದ ಒಂದು ಕಾರು ತೆಗೆದುಕೊಳ್ಳಬಹುದು ಎಂದು ರಾಕೇಶ್ ಅಂದಾಜಿಸಿದ್ದರು. ಆದರೆ ಅವರು ಪರಿಶೀಲಿಸಿದಾಗ ಆಘಾತ ಕಾದಿತ್ತು. ಅವರು ಬಯಸಿದ್ದ ಕಾರಿನ ದರ ಈಗ 10 ಲಕ್ಷಕ್ಕೆ ಏರಿತ್ತು. ಹಣದುಬ್ಬರದ ಪರಿಣಾಮ ಅವರು ಉಳಿತಾಯ ಖಾತೆಯಲ್ಲಿ ಇಟ್ಟಿದ್ದ ಹಣದ ಮೌಲ್ಯ ಸವಕಳಿಯಾಗಿತ್ತು.

ಈ ಕಥೆಯ ಹಿಂದೆ ತಣ್ಣಗಿನ ಸತ್ಯವೊಂದು ಇದೆ. ಅದೇನೆಂದರೆ, ಕೇವಲ ಹಣವನ್ನು ಉಳಿತಾಯ ಮಾಡುವುದರಿಂದ ಶ್ರೀಮಂತರಾಗಲು ಸಾಧ್ಯವಿಲ್ಲ. ಹಣದುಬ್ಬರ, ಕಡಿಮೆ ಬಡ್ಡಿ ದರ, ತಪ್ಪಿದ ಅವಕಾಶಗಳು ನೀವು ಗಳಿಸಿದ ಹಣದ ಮೌಲ್ಯವನ್ನು ತಗ್ಗಿಸುತ್ತವೆ. ಬ್ಯಾಂಕ್ ಖಾತೆಯಲ್ಲಿ ಉಳಿತಾಯ ಎನ್ನುವುದು ಸುರಕ್ಷಿತ ಮತ್ತು ಅನುಕೂಲಕರ ಎನ್ನಿಸಬಹುದು.

ಪ್ರತಿ ತಿಂಗಳೂ ಬ್ಯಾಂಕ್ ಬ್ಯಾಲೆನ್ಸ್ ಏರಿಕೆಯಾಗುವುದನ್ನು ನೋಡಲು ಖುಷಿಯಾಗಬಹುದು. ಮನಸ್ಸಿಗೆ ಹೆಚ್ಚು ಭದ್ರತೆ ಮತ್ತು ನಿಯಂತ್ರಣದ ಭಾವ ಮೂಡುತ್ತದೆ. ಆದರೂ ಈ ಕಂಫರ್ಟ್‌ನ ಹಿಂದೆ ಸದ್ದಿಲ್ಲದೆ ಅಪಾಯ ಕಾದಿರುತ್ತದೆ. ಹಣದುಬ್ಬರದ ಪರಿಣಾಮವಾಗಿ ನಿಮ್ಮ ಉಳಿತಾಯದ ಹಣದ ಮೌಲ್ಯ ಕಡಿಮೆಯಾಗುತ್ತಿರುತ್ತದೆ. ದಾಖಲೆಯಲ್ಲಿ ಮಾತ್ರ ಉಳಿತಾಯ ಏರುತ್ತಿರುತ್ತದೆ. ಆದರೆ ಅದರ ಮೌಲ್ಯ ಕರಗುತ್ತಿರುತ್ತದೆ.

ನೀವು ಪ್ರತಿ ತಿಂಗಳು 10000 ರುಪಾಯಿಗಳಂತೆ 10 ವರ್ಷಗಳ ಕಾಲ ಉಳಿತಾಯ ಮಾಡಿದ್ದೀರಿ ಎಂದು ಭಾವಿಸಿ. 10 ವರ್ಷ ಆದಾಗ ನಿಮ್ಮ ಸೇವಿಂಗ್ ಅಕೌಂಟ್‌ನಲ್ಲಿ ಉಳಿತಾಯದ ಮೊತ್ತ 12 ಲಕ್ಷ ರುಪಾಯಿ ಆಗಿರುತ್ತದೆ. ಅದು ಆಕರ್ಷಕವಾಗಿ ಕಾಣಿಸುತ್ತದೆ. ಹೀಗಿದ್ದರೂ ಸರಾಸರಿ 6 ಪರ್ಸೆಂಟ್ ಹಣದುಬ್ಬರದ ಲೆಕ್ಕದಲ್ಲಿ 10 ವರ್ಷದ ಅಂತ್ಯಕ್ಕೆ 12 ಲಕ್ಷ ರುಪಾಯಿಯ ಮೌಲ್ಯವು 6 ಲಕ್ಷದ 70 ಸಾವಿರ ರುಪಾಯಿಗೆ ಇಳಿದಿರುತ್ತದೆ.

**» ಪ್ರತಿ ತಿಂಗಳೂ ಬ್ಯಾಂಕ್ ಬ್ಯಾಲೆ ಏರಿಕೆಯಾಗುವುದನ್ನು ನೋಡಲು ಖುಷಿಯಾಗಬಹುದು. ಮನಸ್ಸಿಗೆ ಹೆಚ್ಚು ಭದ್ರತೆ ಮತ್ತು ನಿಯಂತ್ರಣದ ಭಾವ ಮೂಡುತ್ತದೆ. ಆದರೂ ಈ ಕಂಫರ್ಟ್‌ನ ಹಿಂದೆ ಸದ್ದಿಲ್ಲದೆ ಅಪಾಯ ಕಾದಿರುತ್ತದೆ. ಹಣದುಬ್ಬರದ ಪರಿಣಾಮವಾಗಿ ನಿಮ್ಮ ಉಳಿತಾಯದ ಹಣದ ಮೌಲ್ಯ ಕಡಿಮೆಯಾಗುತ್ತಿರುತ್ತದೆ. ದಾಖಲೆಯಲ್ಲಿ ಮಾತ್ರ ಉಳಿತಾಯ ಏರುತ್ತಿರುತ್ತದೆ. ಆದರೆ ಅದರ ಮೌಲ್ಯ ಕರಗುತ್ತಿರುತ್ತದೆ.**

ಆದರೆ, ಬ್ಯಾಂಕ್ ಉಳಿತಾಯ ಖಾತೆಯ ಬದಲಿಗೆ ಇದೇ ಹಣವನ್ನು 12 ಪರ್ಸೆಂಟ್ ರಿಟರ್ನ್ ನೀಡುವ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡಿರುತ್ತಿದ್ದರೆ 22 ಲಕ್ಷ ರುಪಾಯಿಗೆ ಬೆಳೆದಿರುತ್ತಿತ್ತು. ಈಗ ನಿಮಗೆ ಕೇವಲ ಉಳಿತಾಯ ನಿಜಕ್ಕೂ ಸೇಫ್ ಮತ್ತು ಸ್ಮಾರ್ಟ್ ಹೂಡಿಕೆ ಅಲ್ಲ ಎಂಬುದು ಮನವರಿಕೆ ಆಗಬಹುದು.

ಆದ್ದರಿಂದಲೇ ಶ್ರೀಮಂತ ಹೂಡಿಕೆದಾರರು ಕೇವಲ ಉಳಿತಾಯಕ್ಕೆ ಸೀಮಿತರಾಗುವುದಿಲ್ಲ. ಅವರು ಹೂಡಿಕೆಯ ಮೌಲ್ಯ ಹೆಚ್ಚಳವಾಗುವಂತೆ ನೋಡಿಕೊಳ್ಳುತ್ತಾರೆ. ಅವರು ಹಣವನ್ನು ತಮಗೋಸ್ಕರ ದುಡಿಯುವಂತೆ ಇನ್ವೆಸ್ಟ್ ಮಾಡುತ್ತಾರೆ. ನಿಶಾ ಮತ್ತು ಮೀರಾ ಸ್ನೇಹಿತೆಯರು. ಇಬ್ಬರೂ ಮಾಸಿಕ 60000 ರುಪಾಯಿ ಸಂಬಳ ಪಡೆಯುತ್ತಾರೆ.

ನಿಶಾ ಅವರು ಪ್ರತಿ ತಿಂಗಳು 2500 ರುಪಾಯಿಗಳನ್ನು ಸೇವಿಂಗ್ಸ್ ಖಾತೆಯಲ್ಲಿ ಉಳಿತಾಯ ಮಾಡುತ್ತಿದ್ದರು. ಮೀರಾ ಮ್ಯೂಚುವಲ್ ಫಂಡ್ ಸಿಪ್‌ನಲ್ಲಿ ಪ್ರತಿ ತಿಂಗಳೂ 2500 ರುಪಾಯಿ ಹೂಡಿಕೆ ಮಾಡುತ್ತಿದ್ದರು. ಅದು ವಾರ್ಷಿಕ 12 ಪರ್ಸೆಂಟ್ ರಿಟರ್ನ್ ಕೊಡುತ್ತಿತ್ತು. 10 ವರ್ಷಗಳ ಬಳಿಕ ಆಶಾ 13 ಲಕ್ಷ ರುಪಾಯಿ ಸಂಪಾದಿಸಿದರೆ, ಮೀರಾ ಅವರು 25 ಲಕ್ಷ ರುಪಾಯಿ ಗಳಿಸಿದ್ದರು. ಮೀರಾ ಅವರು ಕೇವಲ ಉಳಿತಾಯ ಮಾಡದೆ, ಸರಿಯಾಗಿ ಹೂಡಿಕೆ ಮಾಡಿರುವುದೇ ಇದಕ್ಕೆ ಕಾರಣವಾಗಿತ್ತು. ಆದ್ದರಿಂದ ಸೇವಿಂಗ್ ಅಕೌಂಟ್‌ನಲ್ಲಿ ತೀರಾ ಅಗತ್ಯಕ್ಕೆ ಬೇಕಾದಷ್ಟು ಹಣವನ್ನು ಮಾತ್ರ ಇಟ್ಟುಕೊಳ್ಳಬೇಕು.

ಉಳಿದ ಮೊತ್ತವನ್ನು ಹೂಡಿಕೆ ಮಾಡಬೇಕು. ಮ್ಯೂಚುವಲ್ ಫಂಡ್, ಚಿನ್ನ-ಬೆಳ್ಳಿ, ಇಟಿಎಫ್, ಬಾಂಡ್, ಷೇರು, ರಿಯಲ್ ಎಸ್ಟೇಟ್ ಆಯ್ಕೆ ಮಾಡಿಕೊಳ್ಳಬಹುದು. ಒಂದೇ ಅಸೆಟ್‌ನಲ್ಲೂ ಹೂಡಿಕೆಯ ಎಲ್ಲ ಹಣವನ್ನು ಇಡಬೇಕು, ಜಾಣ್ಮೆಯಿಂದ ಇನ್ವೆಸ್ಟ್ ಮಾಡಬೇಕು.

ಪ್ರತಿ ತಿಂಗಳು ನೀವು ಮಾಡುವ ಹೂಡಿಕೆಗೆ ಕಂಪೌಂಡ್ ಇಂಟರೆ ಸಿಗುವಂತಿರಬೇಕು. ಆಗ ಸಂಪತ್ತು ಸೃಷ್ಟಿಸಲು ಹಾದಿ ಸುಗಮವಾಗುತ್ತದೆ. ಕಂಪೌಂಡ್ ಇಂಟರೆ ಬಗ್ಗೆ ತಿಳಿಯಲು ಒಂದು ಉದಾಹರಣೆ ನೋಡೋಣ. ನೀವು ಪ್ರತಿ ತಿಂಗಳು 10000 ರುಪಾಯಿಗಳನ್ನು ಹೂಡಿಕೆ ಮಾಡುತ್ತೀರಿ ಮತ್ತು 12 ಪರ್ಸೆಂಟ್ ಬಡ್ಡಿ ಇದೆ ಎಂದು ಭಾವಿಸಿ. 20 ವರ್ಷಗಳ ಬಳಿಕ ನೀವು 1 ಕೋಟಿ ಸಂಪಾದಿಸುತ್ತೀರಿ. ನೀವು 10 ವರ್ಷ ಮೊದಲೇ 10,000 ಸಿಪ್ ಆರಂಭಿಸಿದ್ದೀರಿ ಎಂದು ಇಟ್ಟುಕೊಳ್ಳಿ. ನೀವು 30 ವರ್ಷಗಳಲ್ಲಿ 3 ಕೋಟಿ 50 ಲಕ್ಷ ರುಪಾಯಿ ಗಳಿಸುತ್ತೀರಿ. ಈ ವ್ಯತ್ಯಾಸಕ್ಕೆ ಕಾರಣ ಕಂಪೌಂಡಿಂಗ್ ಇಂಟರೆ ಅಥವಾ ಚಕ್ರಬಡ್ಡಿಯಾಗಿರುತ್ತದೆ.




ಬಹಳಷ್ಟು ಮಂದಿ ಹೂಡಿಕೆಯ ಪಯಣವನ್ನು ತಡವಾಗಿ ಆರಂಭಿಸುತ್ತಾರೆ. ಏಕೆಂದರೆ ಇನ್ವೆಸ್ಟ್ ಮಾಡಲು ತುಂಬ ದುಡ್ಡು ಬೇಕೆಂದು ಅವರು ಭಾವಿಸುತ್ತಾರೆ. ಆದರೆ ಪ್ರತಿ ತಿಂಗಳೂ 5000 ರುಪಾಯಿಗಳಿಂದ 10000 ರುಪಾಯಿಗಳ ಮಟ್ಟದಲ್ಲಿ ಕೂಡ ಹೂಡಿಕೆ ಆರಂಭಿಸ ಬಹುದು.

ಕೋಟ್ಯಧಿಪತಿಯಾಗಬಹುದು. ಉದಾಹರಣೆಗೆ ನಿಮ್ಮ ವಯಸ್ಸು 25 ವರ್ಷ ಎಂದು ಭಾವಿಸಿ. ಪ್ರತಿ ತಿಂಗಳು 10000 ಸಿಪ್ ಅನ್ನು ವಾರ್ಷಿಕ 12 ಪರ್ಸೆಂಟ್ ರಿಟರ್ನ್ ಸಹಿತ ಹೂಡಿಕೆ ಮಾಡುತ್ತಿದ್ದರೆ, 55ನೇ ವಯಸ್ಸಿಗೆ 3 ಕೋಟಿ 50 ಲಕ್ಷ ರುಪಾಯಿ ಗಳಿಸಬಹುದು. ಆದರೆ 10 ವರ್ಷ ತಡ ಮಾಡಿ, 35ನೇ ವಯಸ್ಸಿನಲ್ಲಿ ಹೂಡಿಕೆ ಆರಂಭಿಸಿದರೆ ನೀವು ಸುಮಾರು 1 ಕೋಟಿ ಗಳಿಸಬಹುದು. ಅಂದರೆ 10 ವರ್ಷದ ವಿಳಂಬಕ್ಕೆ ನೀವು, 2.5 ಕೋಟಿ ಬೆಲೆ ತೆರಬೇಕಾಗಬಹುದು.

ಏಕೆಂದರೆ ಹೂಡಿಕೆಯ ಆರಂಭಿಕ ವರ್ಷಗಳಲ್ಲಿ ಹೆಚ್ಚು ರಿಟರ್ನ್ ಸಿಗುವುದಿಲ್ಲ. ಹೀಗಾಗಿ ಪ್ರತಿ ತಿಂಗಳು 10000 ರುಪಾಯಿ ಉಳಿತಾಯ ಚೆನ್ನಾಗಿ ಕಾಣುತ್ತದೆ. ಆದರೆ ಅಷ್ಟಕ್ಕೇ ಸೀಮಿತ ರಾಗಬಾರದು; ಸಂಪತ್ತಿನ ಸೃಷ್ಟಿಗೆ ಅದನ್ನು ಹೂಡಿಕೆ ಮಾಡಲೇಬೇಕು.

ಇತ್ತೀಚಿನ ವರ್ಷಗಳಲ್ಲಿ ಬಂಗಾರದ ದರ ಭಾರಿ ಏರಿಕೆಯಾಗುತ್ತಿದೆ. ಆದ್ದರಿಂದ ಅದರ ಹೂಡಿಕೆ ಮಾಡಿದರೆ ಲಾಭದಾಯಕವಲ್ಲವೇ ಎಂಬ ಆಲೋಚನೆ ನಿಮ್ಮಲ್ಲಿರಬಹುದು. ಈಗಂತೂ ಚಿನ್ನದಲ್ಲಿನ ಹೂಡಿಕೆಗೆ ಭೌತಿಕ ಬಂಗಾರವನ್ನೇ ಖರೀದಿಸಬೇಕೆಂದೇನಿಲ್ಲ. ಬಂಗಾರದ ಇಟಿಎಫ್, ಮ್ಯೂಚುವಲ್ ಫಂಡ್‌ಗಳು ಇವೆ. ಆದ್ದರಿಂದ ಇದೂ ಆಕರ್ಷಿಸುತ್ತಿದೆ.

ಆದರೆ ನೀವು ಗಮನಿಸಬಹುದು. ಬಹುತೇಕ ಹಣಕಾಸು ಸಲಹೆಗಾರರು, ನಿಮ್ಮ ಒಟ್ಟು ಹೂಡಿಕೆಯ 5-10 ಪರ್ಸೆಂಟ್ ಹಣವನ್ನು ಬಂಗಾರದಲ್ಲಿ ಇನ್ವೆಸ್ಟ್ ಮಾಡಿರಿ ಎನ್ನುತ್ತಾರೆಯೇ ಹೊರತು, ದೊಡ್ಡ ಮೊತ್ತದ ಹೂಡಿಕೆಗೆ ಶಿಫಾರಸು ಮಾಡುವುದಿಲ್ಲ!

ಅಮೆರಿಕದ ವಿಶ್ವವಿಖ್ಯಾತ ಹೂಡಿಕೆದಾರ ವಾರೆನ್ ಬಫೆಟ್ ಅವರು ಈಗಲೂ ಬಂಗಾರದಲ್ಲಿ ಮಾಡುವ ಹೂಡಿಕೆಯನ್ನು ಒಪ್ಪುವುದಿಲ್ಲ! ಸ್ವರ್ಣ ಒಂದು ಅನುತ್ಪಾದಕ ಆಸ್ತಿಯಾಗಿದ್ದು, ಅದರಲ್ಲಿ ಇನ್ವೆಸ್ಟ್ ಮಾಡಬಾರದು ಎಂದು ಬಫೆಟ್ ಎಚ್ಚರಿಸುತ್ತಾರೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಬಂಗಾರವು ರಿಟರ್ನ್ ವಿಚಾರದಲ್ಲಿ ಷೇರು ಮಾರುಕಟ್ಟೆಯನ್ನೂ ಹಿಂದಿಕ್ಕಿದೆ.

ಜಾಗತಿಕ ಆರ್ಥಿಕ ಬಿಕ್ಕಟ್ಟುಗಳು, ವಾಣಿಜ್ಯ ಸಂಘರ್ಷಗಳು, ನಾನಾ ದೇಶಗಳ ನಡುವಣ ಯುದ್ಧಗಳು, ನಿರ್ಬಂಧಗಳ ನಡುವೆ ಷೇರು ಮಾರುಕಟ್ಟೆಗಳೂ ಕುಸಿದಾಗ, ಚಿನ್ನವು ಹೂಡಿಕೆದಾರಿಗೆ ಭರ್ಜರಿ ಲಾಭವನ್ನು ತಂದುಕೊಟ್ಟಿದೆ.

ಈಗ ಬಂಗಾರ ಮತ್ತು ನಿಫ್ಟಿ 50ರ ಕಳೆದ 15 ವರ್ಷಗಳ ರಿಟರ್ನ್ ಬಗ್ಗೆ ನೋಡೋಣ. ಕಳೆದ 1 ವರ್ಷದಲ್ಲಿ ಚಿನ್ನವು 50 ಪರ್ಸೆಂಟ್ ಆದಾಯ ನೀಡಿದೆ. ನಿಫ್ಟಿ 50 ಕೇವಲ 6 ಪರ್ಸೆಂಟ್ ಕೊಟ್ಟಿದೆ. 5 ವರ್ಷಗಳಲ್ಲಿ ಬಂಗಾರವು 143 ಪರ್ಸೆಂಟ್‌ನಷ್ಟು ರಿಟರ್ನ್ ನೀಡಿದ್ದರೆ, 109 ಪರ್ಸೆಂಟ್ ರಿಟರ್ನ್ ಅನ್ನು ನಿಫ್ಟಿ 50 ನೀಡಿದೆ.

10 ವರ್ಷಗಳಲ್ಲಿ ಚಿನ್ನವು- 355 ಪರ್ಸೆಂಟ್ ಮತ್ತು ನಿಫ್ಟಿ 50- 222 ಪರ್ಸೆಂಟ್ ರಿಟರ್ನ್ ನೀಡಿವೆ. 15 ವರ್ಷಗಳಲ್ಲಿ ಇವು ಕ್ರಮವಾಗಿ 550 ಮತ್ತು 313 ಪರ್ಸೆಂಟ್ ಆದಾಯ ನೀಡಿರುವುದು ಗಮನಾರ್ಹ. ಅಂದರೆ ಅಲ್ಪಾವಧಿ, ಮಧ್ಯಮ ಮತ್ತು ದೀರ್ಘಾವಧಿಯಲ್ಲಿ ಚಿನ್ನ ಉತ್ತಮ ರಿಟರ್ನ್ ಕೊಟ್ಟಿದೆ. ಅದು ಕೇವಲ ಸುರಕ್ಷಿತ ಹೂಡಿಕೆಯ ಸಾಧನವಾಗಿರದೆ, ಹೆಚ್ಚಿನ ಲಾಭವನ್ನೂ ಕೊಟ್ಟಿದೆ.

ಆದರೆ ಬಫೆಟ್ ಪ್ರಕಾರ ನಿಜವಾದ ಸಂಪತ್ತು ಉತ್ಪಾದಕ ಆಸ್ತಿಗಳಲ್ಲಿ ಹೂಡಿಕೆ ಮಾಡುವುದರಿಂದ ಬರುತ್ತದೆ. ಚಿನ್ನದ ದರ ಏರಿಕೆಯಿಂದ ಹೂಡಿಕೆದಾರರಿಗೆ ಲಾಭವಾಗುತ್ತದೆಯೇ ಹೊರತು, ಚಿನ್ನವೇ ಏನನ್ನೂ ಉತ್ಪಾದಿಸುವುದಿಲ್ಲ. ಬಡ್ಡಿಯನ್ನೂ ಕೊಡುವುದಿಲ್ಲ. ಆದ್ದರಿಂದ ಅದು ಅನುತ್ಪಾದಕ ಆಸ್ತಿ ಎನ್ನುತ್ತಾರೆ ವಾರೆನ್ ಬಫೆಟ್. ನೋಡಿ, ಆಸ್ತಿ ಎಂದರೆ ಅದು ಏನನ್ನಾದರೂ ಉತ್ಪಾದಿಸಬೇಕು.

ಉದಾಹರಣೆಗೆ ಕಾರ್ಖಾನೆಯೊಂದು ಉತ್ಪನ್ನಗಳನ್ನು ತಯಾರಿಸುತ್ತದೆ, ಲಾಭ ಗಳಿಸುತ್ತದೆ, ಕಾಲಕ್ರಮೇಣ ಬೆಳೆಯುತ್ತದೆ. ಅದು ಉತ್ಪಾದಕತೆ. ನಿಜವಾದ ಸಂಪತ್ತು. ಆದರೆ ಚಿನ್ನದಂಥ ಲೋಹ ಯಾವುದನ್ನೂ ಉತ್ಪಾದಿಸುವುದಿಲ್ಲ ಎನ್ನುತ್ತಾರೆ ವಾರೆನ್ ಬಫೆಟ್.

ಹೀಗಿದ್ದರೂ, ಇವತ್ತು ಚಿನ್ನ ಎಂದರೆ ಕೇವಲ ಅಭರಣಗಳ ರೂಪದಲ್ಲಿ ಬಳಕೆಗೆ ಸೀಮಿತವಾಗಿಲ್ಲ. ನಾನಾ ದೇಶಗಳ ಸೆಂಟ್ರಲ್ ಬ್ಯಾಂಕ್‌ಗಳೂ ಟನ್ನುಗಟ್ಟಲೆ ಚಿನ್ನವನ್ನು ಖರೀದಿಸುತ್ತಿವೆ. ಡಾಲರ್ ಸೇರಿದಂತೆ ಜಾಗತಿಕ ಕರೆನ್ಸಿಗಳು ಕಿಮ್ಮತ್ತು ಕಳೆದುಕೊಳ್ಳುತ್ತಿವೆ. ಹೀಗಾಗಿ ದೇಶಗಳೇ ಬಂಗಾರವನ್ನು ಆಪದ್ಧನವಾಗಿ ಬಳಸುತ್ತಿವೆ.

ಚಿನ್ನದ ಸ್ಟೋರೇಜ್ ವಾಲ್ಯೂ ಇದಕ್ಕೆ ಕಾರಣ. ಭಾರತದಲ್ಲಂತೂ ಬಂಗಾರ ಎಂದರೆ ಕೇವಲಲೋಹವಲ್ಲ, ಅದೊಂದು ಅಮೂಲ್ಯ ಭಾವನೆ. ಧಾರ್ಮಿಕವಾಗಿಯೂ, ಸಾಂಸ್ಕೃತಿಕವಾಗಿಯೂ ಆರಾಧನೆಯ ಮಹತ್ವವನ್ನು ಪಡೆದಿರುವಂಥದ್ದು, ಭದ್ರತೆ ಮತ್ತು ಪ್ರೆಸ್ಟೀಜ್ ಮೂಡಿಸುವಂಥದ್ದೇ ಈ ಹಳದಿ ಲೋಹ.

ಭಾರತೀಯರು ಸಾಮಾನ್ಯವಾಗಿ ಬಂಗಾರವನ್ನು ಖರೀದಿಸಿದರೆ ಅದನ್ನು ತೀರಾ ಅನಿವಾರ್ಯ ಸಂದರ್ಭವನ್ನು ಹೊರತುಪಡಿಸಿದಂತೆ, ಯಾವತ್ತೂ ಮಾರಾಟ ಮಾಡುವುದಿಲ್ಲ. ಅದೇ ರೀತಿಯ ಬದ್ಧತೆ, ಶಿಸ್ತು ದೀರ್ಘಾವಧಿಯ ಹೂಡಿಕೆಯಲ್ಲಿ ಕೂಡ ಇರಬೇಕು. ಆಗ ಮಾತ್ರ ಸಂಪತ್ತನ್ನು ಸೃಷ್ಟಿಸಬಹುದು.

ಅದು ಬಿಟ್ಟು, ಪ್ರತಿ ತಿಂಗಳು ಗಳಿಸಿದ್ದನ್ನು ಅದೇ ತಿಂಗಳು ಸಂಪೂರ್ಣ ಖರ್ಚು ಮಾಡುತ್ತಿದ್ದರೆ, ಹೂಡಿಕೆಯಿಂದ ಸಿಗುವ ಸಂಪತ್ತನ್ನು ಕಳೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಎಷ್ಟೇ ಕಷ್ಟವಾದರೂ, ತಾಳ್ಮೆ ಬೇಕಾದರೂ, ಬಂಗಾರ ಮತ್ತು ಮ್ಯೂಚುವಲ್ ಫಂಡ್, ಇಟಿಎಫ್ ನಂಥ ಸಾಧನಗಳಲ್ಲಿ ದೀರ್ಘಾವಧಿಯ ಹೂಡಿಕೆಯನ್ನು ತಪ್ಪದೆ ಮಾಡಿರಿ ಎನ್ನುತ್ತಾರೆ ಹಲವಾರು ತಜ್ಞರು

**- ಕೇಶವ ಪ್ರಸಾದ್** ಬಿ

# ಆಡು ಕನ್ನಡ ಸಾಲದು, ಬರಹ ಕನ್ನಡವೂ ಬೆಳೆಯಲಿ

ಮಧ್ಯಾಹ್ನ ಆಗುತ್ತಿದ್ದಂತೆ ರಾಮ ಅಜಿಲ ಮಾಸ್ತ್ರು ಸ್ಟಾಫ್ ರೂಮಿನಲ್ಲಿದ್ದ ಮರದ ಪೆಠಾರಿಯನ್ನು ತೆರೆಯುತ್ತಿದ್ದರು. ನಾವು ಕುತೂಹಲಿ ಮಕ್ಕಳು ಅದರ ಸುತ್ತ ನೆರೆಯುತ್ತಿದವು. ಅದರೊಳಗಿಂದ ಚಂದಮಾಮ, ಬಾಲಮಿತ್ರ, ಅಮರಚಿತ್ರಕಥೆ ಪುಸ್ತಕಗಳೆಲ್ಲ ಹೊರ ಬರುತ್ತಿದ್ದವು. ಸಂಜೆ ಕ್ಲಾಸಿಗೆ ಈ ಕತೆಗಳದೇ ಜಾತ್ರೆ. ರಾಮ ಮಾಸ್ತ್ರು ಕನ್ನಡ ಪಾಠ ಮಾಡುತ್ತಿದ್ದುದಕ್ಕಿಂತಲೂ ಕತೆ ಹೇಳುತ್ತಿದ್ದುದೇ ಹೆಚ್ಚು.

ಹರಿಶ್ಚಂದ್ರನ ಕತೆ ಹೇಳುತ್ತಿದ್ದರೆ, ಹರಿಶ್ಚಂದ್ರ ಎಂದು ಬರೆಯಲು ಕಷ್ಟಪಡುತ್ತಿದ್ದ ಹುಡುಗನಿಗೆ ಸಲೀಸಾಗಿ ಅದು ಬಂದುಬಿಡುತ್ತಿತ್ತು. ಧೃತರಾಷ್ಟ್ರ ಎನ್ನುವುದೂ ಅಷ್ಟೆ. ಕರತಲಾ ಮಲಕ ಎಂದರೇನು ಎಂದು ತಿಳಿಯಲು ಕಷ್ಟಪಡಬೇಕಿರಲಿಲ್ಲ. ಅವರ ಬಳಿಯೋ ವೆಂಕಟರಮಣ ಮಾಸ್ತ್ರ ಬಳಿಯೋ ಕೇಳಿದರೆ ಸಾಕಿತ್ತು.

ಸಂದರ್ಭ ಸಹಿತ ವಿವರಿಸುತ್ತಿದ್ದರು. ಪಿಯುಸಿಯಲ್ಲಿ ಅಮೃತ ಸೋಮೇಶ್ವರರು, ಕಾಯಕಲ್ಪ ಎಂದರೆ ಏನೆಂದೂ, ಅದರ ಕತೆಯೇನೆಂದೂ ವಿವರಿಸುತ್ತಿದ್ದರು. ಅದೇ ಹೆಸರಿನಲ್ಲಿ ತಾವು ಬರೆದ ಯಕ್ಷಗಾನ ಪ್ರಸಂಗದ ಪದ್ಯಗಳನ್ನು ಉದ್ಧರಿಸುತ್ತಿದ್ದರು. ಬಿ.ಎ ವಿವೇಕ ರೈಗಳು ಗಿಳಿಸೂವೆ ಎಂಬ ಕೃತಿ ಬರೆದು, ಆ ವಿಶಿಷ್ಟ ಕನ್ನಡ ಪದವನ್ನು ಅದರ ಅರ್ಥ- ಧ್ವನಿಗಳ ಸಹಿತ ವಿದ್ಯಾರ್ಥಿಗಳ ಎದೆಯಲ್ಲಿ ಅಚ್ಚು ಒತ್ತುತ್ತಿದ್ದರು.

ಚೆನ್ನಯ್ಯ ಮಾಸ್ತ್ರು ಕೆದಂಬಾಡಿ ಜತ್ತಪ್ಪ ರೈಗಳ ಬೇಟೆಯ ಕತೆಗಳ ಪುಸ್ತಕಗಳನ್ನು ತೆಗೆದು ಕೊಂಡು ಬಂದು ಕ್ಲಾಸಿನಲ್ಲಿ ಓದುತ್ತಿದ್ದರು. ನಮ್ಮ ಅಕ್ಕಪಕ್ಕದ ಮಲೆಕಾಡುಗಳಲ್ಲಿ ಓಡಾಡುತ್ತಿದ್ದ ಹುಲಿ ಚಿರತೆ ಕಾಡುಕೋಣಗಳೇ ಈ ಕತೆಯ ನಾಯಕರೂ ದುರಂತ ನಾಯಕರೂ ಆಗಿರುವುದನ್ನು ಕಂಡು ನಾವು ಚಕಿತರಾಗುತ್ತಿದ್ದೆವು.

ಶ್ರೀಧರ ಮಾಸ್ತ್ರು ಶ್ರೀರಾಮನು ನಾಲ್ಕು ತಿಂಗಳ ದಟ್ಟ ಕಾರ್ಗಾಲವನ್ನು ಮಲೆನಾಡಿನ ಕಾನನದ ಗುಹೆಯೊಂದರಲ್ಲಿ ಕಳೆಯುವ ಸನ್ನಿವೇಶವನ್ನು ವಿವರಿಸುತ್ತಿದ್ದರು. ಆ ಕಾವ್ಯದಲ್ಲಿ ಅವರು ಕಾಣಿಸಿದ ಮಿಂಚುಹುಳಗಳೇ ರಾತ್ರಿ ಮಿಂಚುವುದನ್ನು ಕಂಡು ಆನಂದ ತುಂದಿಲರಾಗುತ್ತಿದ್ದೆವು.

ವಾರಿಜಾ ಮೇಡಂ ಹರಿಶ್ಚಂದ್ರ ಕಾವ್ಯದ ಲೋಹಿತಾಶ್ವನ ಸಾವಿನ ಚಂದ್ರಮತಿಯ ಪ್ರಲಾಪದ ಪ್ರಸಂಗವನ್ನು ಪಾಠ ಮಾಡುತ್ತ ತಾವೂ ಅಳುತ್ತ ನಮ್ಮನ್ನೂ ದುಃಖಿಸುವಂತೆ ಮಾಡುತ್ತಿದ್ದರು. ಹೀಗೆ ನಾವು ಕೇಳುತ್ತಿದ್ದುದು, ನೋಡುತ್ತಿದ್ದುದು ಬೇರೆಯಾಗಿರಲಿಲ್ಲ. ಬದುಕು ಮತ್ತು ಪಾಠವೆರಡೂ ಕನ್ನಡವೇ ಆಗಿರುತ್ತಿತ್ತು. ಆ ಕನ್ನಡ ಕೇವಲ ಭಾಷೆಯಾಗಿ ಅಲ್ಲದೆ, ಭಾವವಾಗಿ, ಬದುಕಾಗಿ ನಮ್ಮ ಜೊತೆಗಿರುತ್ತಿತ್ತು.

ಕನ್ನಡ ಉಳಿದು ಬೆಳೆದು ಬಂದುದು ಇಂಥ ಮೇಸ್ಟ್ರುಗಳು, ಉಪನ್ಯಾಸಕರು, ಪ್ರಾಧ್ಯಾಪಕರಿಂದ. ಇದಕ್ಕೂ ಹಿಂದಿನವರನ್ನೂ ಮುಂದಿನವರನ್ನೂ ನೂರಾರು ಸಂಖ್ಯೆಯಲ್ಲಿ ಉದಾಹರಿಸಬಹುದು. ಅದಲ್ಲ ಇಲ್ಲಿನ ಉದ್ದೇಶ. ಕನ್ನಡವನ್ನು ಇವರೆಲ್ಲ ಹೇಗೆ ನಮಗೆ ನಿಕಟವಾಗಿಸುತ್ತಿದ್ದರು ಎಂದು ಹೇಳುವುದಷ್ಟೇ ಆಶಯ.

ಇಂಥ ಮೇಸ್ಟ್ರುಗಳ ಶಿಷ್ಯತ್ವದಲ್ಲಿ ಬೆಳೆದ ಕೆಲವು ತಲೆಮಾರುಗಳು ಕನ್ನಡವನ್ನು ಕಾಪಾಡಿ ಕೊಂಡು ಇಂದಿನವರೆಗೂ ತಂದಿವೆ. ಇದು ಸಂರಕ್ಷಿಸಿ ಮ್ಯೂಸಿಯಂನಲ್ಲಿ ಇಡುವ ಕ್ರಮದಂತಲ್ಲ. ಜೊತೆಜೊತೆಗೇ ಕೊಂಡೊಯ್ಯುವ, ಬೆಳೆಸುವ ರೂಢಿ. ಈ ನವೆಂಬರ್ ಮಾಸದಲ್ಲಿ ರೋಷಾವೇಶದಿಂದ ಕನ್ನಡವನ್ನು ಉಳಿಸಬೇಕು, ಬೆಳೆಸಬೇಕು ಎಂದು ಭಾಷಣ ಮಾಡುವಾಗ ನಾವು ಇದನ್ನೆಲ್ಲ ನೆನಪಿನಲ್ಲಿ ಇಟ್ಟುಕೊಳ್ಳುವುದು ಒಳ್ಳೆಯದು.

ಕನ್ನಡವನ್ನು ರಕ್ಷಿಸಿಕೊಳ್ಳಲು ಹಲವು ದಾರಿ. ಮೊದಲನೆಯದು ಮಕ್ಕಳಿಗೆ ಮನೆಯಲ್ಲಿ ಕನ್ನಡ ಓದಲು ಪ್ರೋತ್ಸಾಹಿಸುವುದು. ಮನೆಯ ಮಾತು ಯಾವುದೇ ಉಪಭಾಷೆ ಆಗಿರಲಿ. ಇಂಗ್ಲಿಷ್‌ನ ಸಮಾನವಾಗಿ ಕನ್ನಡ ಒದಿನ ಭಾಷೆ ಆಗಿದ್ದರೆ ಒಳ್ಳೆಯದು.

**■ ಚೆನ್ನಯ್ಯ ಮಾಸ್ತ್ರು ಕೆದಂಬಾಡಿ ಜತ್ತಪ್ಪ ರೈಗಳ ಬೇಟೆಯ ಕತೆಗಳ ಪುಸ್ತಕಗಳನ್ನು ತೆಗೆದು ಕೊಂಡು ಬಂದು ಕ್ಲಾಸಿನಲ್ಲಿ ಓದುತ್ತಿದ್ದರು. ನಮ್ಮ ಅಕ್ಕಪಕ್ಕದ ಮಲೆಕಾಡುಗಳಲ್ಲಿ ಓಡಾಡುತ್ತಿದ್ದ ಹುಲಿ ಚಿರತೆ ಕಾಡುಕೋಣಗಳೇ ಈ ಕತೆಯ ನಾಯಕರೂ ದುರಂತ ನಾಯಕರೂ ಆಗಿರುವುದನ್ನು ಕಂಡು ನಾವು ಚಕಿತರಾಗುತ್ತಿದ್ದೆವು.**

ನಮ್ಮ ಕೊಂಕಣಿ ತುಳು ಅರೆಭಾಷೆ ದಕ್ಷಿನಿ ಹಾಗೇ ಕನ್ನಡದ ಬೇರೆ ಬೇರೆ ಡಯಲೆಕ್ಟುಗಳನ್ನು ಕಳೆದುಕೊಳ್ಳಬಾರದೆಂಬ ಪ್ರ ಎಡೆ ವಿಸ್ತರಿಸುತ್ತಿದೆ. ಅದು ಸರಿ. ಆದರೆ ಇಂಗ್ಲಿಷ್‌ಗೆ ಹೋಲಿಸಿದರೆ ಕನ್ನಡವೇ ಇಂದು ಉಪಭಾಷೆ. ಮನೆಮಾತು ನಾಶವಾದರೆ ಮನೆ ಸಂಸ್ಕೃತಿಯೇ ನಾಶವಾಗುತ್ತದೆ ಎಂಬ ಭಾವ ಇದೆ. ಇದನ್ನೇ ಕನ್ನಡಕ್ಕೆ ವಿಸ್ತರಿಸಿದರೆ ಎಲ್ಲ ಸ್ಪಷ್ಟವಾಗುತ್ತದೆ.


ಕನ್ನಡದ ನಾಶದೊಂದಿಗೆ, ನಮಗೆ ಪರಿಚಿತವಾದ, ನಮ್ಮ ಜೀವಾಳವಾಗಿದ್ದ ಎಲ್ಲವೂ ನಾಶದ ಹಾದಿ ಹಿಡಿಯುತ್ತವೆ. ಎರಡನೆಯದು ಕನ್ನಡದ ಮೇಲೆ ಪ್ರೀತಿ ಹುಟ್ಟಿಸಬಲ್ಲ ಮೇಸ್ಟ್ರುಗಳನ್ನು ಕಾಪಾಡಿಕೊಳ್ಳುವುದು. ಇದನ್ನು ಮುಖ್ಯವಾಗಿ ಸರಕಾರ, ಎರಡನೆಯದಾಗಿ ಸಮುದಾಯ ಮಾಡಿಕೊಳ್ಳಬೇಕು. ಕನ್ನಡ ಕಲಿಸುವ ವಿದ್ವಾಂಸರಿಗೆ ಇಲ್ಲಿ ಇಂಗ್ಲಿಷ್- ಹಿಂದಿ ಕಲಿಸುವವರ ಮನ್ನಣೆಯಿಲ್ಲ.

ಕನ್ನಡ ಮೇಸ್ಟ್ರುಗಳನ್ನು ಕಸಕ್ಕಿಂತ ಕಡೆಯಾಗಿ ಕಾಣುವ, ಅವರಿಗೆ ಕನ್ನಡವೊಂದು ಬಿಟ್ಟು ಮತ್ತೆಲ್ಲವನ್ನೂ ಕಲಿಸುವ ಕೆಲಸ ಹಚ್ಚುವ ರೂಢಿ ಇದೆ. ಬಹುಶಃ ಖಾಸಗಿ ಶಾಲೆಗಳಲ್ಲಿ ಕನ್ನಡ ಕಲಿಸುವವರು ಅತಿಥಿ, ಹಂಗಾಮಿ ಉಪನ್ಯಾಸಕರು ಮಾತ್ರ. ಇವರಿಗೆ ಉದ್ಯೋಗ ಖಾತರಿ ಇಲ್ಲ, ಸರಕಾರಿ ಶಾಲೆಗಳಲ್ಲಿ ಕನ್ನಡವನ್ನೂ ಸೇರಿದಂತೆ ಯಾವುದೇ ವಿಷಯದ ಶಿಕ್ಷಕರಿಗೂ ಇಂದು ತರಕಾರಿ ಚೀಲ ಹೊರುವ, ಮೊಟ್ಟೆ ಎಣಿಸುವ, ದಿನಸಿ ತರುವ ಕೆಲಸಗಳ ನಡುವೆ ಪಾಠ ಮಾಡಲು ಎಡೆಯಾದರೂ ಇದೆಯೋ ಇಲ್ಲವೋ ತಿಳಿಯದು.

ಹೀಗಿರುವಾಗ ಇವರು ಮಕ್ಕಳ ಮನ ಮುಟ್ಟುವಂತೆ ಕನ್ನಡ ಪಾಠ ಮಾಡಬೇಕು, ಕನ್ನಡದ ಬಗ್ಗೆ ಆಸೆ ಪ್ರೀತಿ ಬೆಳೆಸಬೇಕೆಂದು ನಾವು ನಿರೀಕ್ಷಿಸುವುದು ದುಬಾರಿಯಾದೀತೋ ಏನೋ. ಸರಕಾರಿ ಯಂತ್ರ ಸರಿಯಾಗದೇ ಇದು ಸರಿಹೋಗದು. ಸರಕಾರ ಇದನ್ನು ವೆಚ್ಚದ ವಿಷಯ ಎಂದು ನೋಡದೆ ಕರ್ತವ್ಯ ಎಂಬಂತೆ ನೋಡಿದರೆ, ಮುರಿದು ಬೀಳುತ್ತಿರುವ ಶಾಲೆಗಳು, ಏಕೋಪಾಧ್ಯಾಯ - ಏಕ ವಿದ್ಯಾರ್ಥಿ ಶಾಲೆಗಳ ಸಮಸ್ಯೆಯ ಜೊತೆಗೆ ಇದನ್ನೂ ಒಂದು ಪರಿಹರಿಸಲೇಬೇಕಾದ ಆದ್ಯತೆ ಎಂಬಂತೆ ತಿಳಿದರೆ ಸರಿಯಾದೀತು.

ಮಾತಾಡುವ ಕನ್ನಡಕ್ಕೆ ಸದ್ಯದಲ್ಲಿ ಅಳಿವು ಇದೆ ಎಂದು ನಮಗೆ ಅನಿಸದು. ಯಾಕೆಂದರೆ ಕನ್ನಡ ರಾಷ್ಟ್ರೀಯತೆ ಇದೀಗ ಹೊಸ ರೂಪ ಪಡೆಯುತ್ತಿದೆ. ಕೆಲವೆಡೆ ಅದು ಉಗ್ರ ಸ್ವರೂಪದಲ್ಲಿಯೂ ಅಭಿವ್ಯಕ್ತಗೊಳ್ಳುತ್ತಿದೆ. ಧರ್ಮರಾಯನಿದ್ದಲ್ಲಿ ಭೀಮನಿದ್ದಂತೆ ಅದು ಎಂದು ಹೇಳುವವರು ಇದ್ದಾರೆ. ಅನ್ಯ ಭಾಷಿಕರಿಗೆ ಇದರ ಬಗ್ಗೆ ಆಕ್ಷೇಪ ಇರಬಹುದು.

ಆದರೆ ಇಲ್ಲಿ ಬಂದು ನೆಲೆಯಾದವರು ಕನ್ನಡ ಕಲಿತು ಮಾತಾಡಲೇಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸುವುದಂತೂ ಅಗತ್ಯವಿದೆ. ಆಗ ಮಾತ್ರ, ಬೆಂಗಳೂರಿನಂಥ ಪ್ರದೇಶದಲ್ಲಿ ಕನ್ನಡ ಉಳಿಯಲು ಸಾಧ್ಯ. ಇಂದು ಬೆಂಗಳೂರಿನ ಜವಳಿ ಅಂಗಡಿಗಳು ಗುಜರಾತಿಗರಿಂದ, ಬೇಕರಿಗಳು ಮಲೆಯಾಳಿಗಳಿಂದ, ಸೆಲೂನ್‌ಗಳು ಉತ್ತರ ಪ್ರದೇಶ-ಬಿಹಾರಗಳಿಂದ ನಿರ್ವಹಿಸಲ್ಪಡುತ್ತಿವೆ.




ಕನ್ನಡಿಗರು ಪಟ್ಟು ಹಿಡಿದು ಕನ್ನಡದಲ್ಲಿಯೇ ವ್ಯವಹರಿಸಿದರೆ ಇವರೂ ಕಲಿಯುತ್ತಾರೆ, ಇಲ್ಲದಿದ್ದರೆ, ಹತ್ತು ವರ್ಷ ಇಲ್ಲಿದ್ದರೂ ಒಂದಕ್ಷರ ಕನ್ನಡ ಕಲಿಯದೆ ಬದುಕುತ್ತಾರೆ. ಆಡುವ ಕನ್ನಡವನ್ನು ಗಟ್ಟಿಯಾಗಿಸುವಲ್ಲಿ ದೊಡ್ಡ ಪಾತ್ರ ವಹಿಸುವುದು ಸೋಶಿಯಲ್ ಮೀಡಿಯಾಗಳು. ನಾವು ಇವುಗಳನ್ನು ಎಷ್ಟೇ ದೂರಿದರೂ, ಈ ಒಂದು ವಿಷಯದಲ್ಲಿ ಮಾತ್ರ ಇವುಗಳಿಗೆ ಕೈ ಮುಗಿಯಲೇಬೇಕು.

ಈ ಮೀಡಿಯಾಗಳ ಒಡೆಯರು ಹತ್ತಾರು ವರ್ಷಗಳ ಹಿಂದೆಯೇ ಕನ್ನಡ ಸೇರಿದಂತೆ ಸ್ಥಳೀಯ ಭಾಷೆಗಳಲ್ಲಿರುವ ವ್ಯಾಪಾರದ ಸಾಧ್ಯತೆಯನ್ನು ಕಂಡುಕೊಂಡರು. ಮಾಲಿಕರು, ಬಳಸುವವರು, ಡೆವಲಪರ್ಸ್ ಸೇರಿದಂತೆ ಎಲ್ಲರೂ ಇಲ್ಲಿ ಕನ್ನಡವನ್ನು ಬೆಳೆಸುತ್ತ ಹೋದರು.

ಇಂದು ಇಂಗ್ಲಿಷ್‌ನ ಹಂಗೇ ಇಲ್ಲದವನು ಕೂಡ ಸೋಶಿಯಲ್ ಮೀಡಿಯಾ ಬಳಸಲು ಸಾಧ್ಯ. ಅದು ಅನ್ನ ಗಳಿಕೆಯ ಎಷ್ಟೋ ಮಾರ್ಗಗಳನ್ನು ತೆರೆದಿದೆ. ಯುಟ್ಯೂಬ್, ಇನ್‌ಸ್ಟಗ್ರಾಂ ಮತ್ತಿತರ ಕಡೆ ಕನ್ನಡ ಕಂಟೆಂಟ್ ಕ್ರಿಯೇಶನ್‌ನಿಂದಲೇ ಬದುಕು ಕಟ್ಟಿಕೊಂಡವರು ಅಸಂಖ್ಯ. ಅದು ದಿಗಂತದ ಮಿರುಗುವ ಭರವಸೆಯ ಗೆರೆ.

ಕನ್ನಡ ಅನ್ನದ ಭಾಷೆಯಾಗಬೇಕು ಎಂಬ ಕ್ಲೀಷೆಯ ಮಾತು ಇಲ್ಲಿ ಹೀಗೆ ಸಾಕಾರವಾಗಿದೆ. ಇತ್ತೀಚೆಗೆ, ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಅವರನ್ನು ಮದುವೆಯಾಗಿ ಬೆಂಗಳೂರಿಗೆ ಬಂದು ನೆಲೆಸಿರುವ ಚೆನ್ನೈ ಮೂಲದ ಗಾಯಕಿ ಶಿವಶ್ರೀ ಸ್ಕಂದಪ್ರಸಾದ್, ಯುಟ್ಯೂಬ್ ಟ್ಯುಟೋರಿಯಲ್ ಮೂಲಕ ಆರೇ ತಿಂಗಳಲ್ಲಿ ಸಲೀಸಾಗಿ ಕನ್ನಡ ಮಾತಾಡುವುದನ್ನು ಕಲಿತಿದ್ದು ಇಲ್ಲಿ ನೆನಪಾಗುತ್ತಿದೆ.

ಆದರೆ ಆಡುವ ಕನ್ನಡದಂತೆಯೇ, ಕನ್ನಡ ಬರಹ, ಅದರ ಓದುವಿಕೆ ಬೆಳೆದಿದೆಯೇ ಎಂದು ನೋಡಿದರೆ ನಿರಾಶೆಯಾಗುತ್ತದೆ. ಜೆನ್ ಜಿ ಮಕ್ಕಳಿಗೆ ಕನ್ನಡ ಓದುವುದಕ್ಕಿಂತ ಇಂಗ್ಲಿಷ್ ಓದೇ ಸುಲಭವಾಗಿದೆ. ಅದಕ್ಕೆ ಕಾರಣ ಬಹು ಸುಲಭವಾಗಿ ಸಿಕ್ಕಿದ ಇಂಗ್ಲಿಷ್ ಚಿತ್ರಪುಸ್ತಕಗಳು, ಹೆತ್ತವರ ಇಂಗ್ಲಿಷ್ ಮೋಹ ಇತ್ಯಾದಿ ಪಟ್ಟಿ ಮಾಡಬಹುದು.

ಇನ್ನು ಜೆನ್ ಆಲ್ಫಾ ಮಕ್ಕಳನ್ನಂತೂ ಕನ್ನಡದ ವಿಷಯದಲ್ಲಿ ಮಾತಾಡಿಸುವಂತೆಯೇ ಇಲ್ಲ, ಇವು ಕನ್ನಡದಿಂದ ಬಹುದೂರ ಹೋಗಿವೆ. ಆಡು ಕನ್ನಡವನ್ನೇನೋ ಅಲ್ಪಸ್ವಲ್ಪ ವಾತಾವರಣದಿಂದ, ಮೊಬೈಲ್‌ನಲ್ಲಿ ಸಿಗುವ ಕನ್ನಡ ಮನರಂಜನೆಯ ಮೂಲಕ ಪಡೆದಿರಬಹುದು ಆದರೆ ಓದುಕನ್ನಡ ಅವರಲ್ಲಿ ಇಲ್ಲ. ಅವರ ಹೆತ್ತವರು ಓದುತ್ತಾರೋ ಎಂದು ಕೇಳಿದರೆ, ಅದಕ್ಕೂ ಉತ್ತರ ನಿರಾಶಾದಾಯಕ. ಹೆತ್ತವರು ಮನೆಯಲ್ಲಿ ಓದಿನ ವಾತಾವರಣ ತಂದಿದ್ದರೆ ಮಕ್ಕಳೇಕೆ ಓದುವ್ಯರಿಗಳಾ ಗುತ್ತಿದ್ದರು? ಹಾಗಂತ ಇವರು ಏನೂ ಓದುವುದಿಲ್ಲ ಎಂದಲ್ಲ, ಇಂಗ್ಲಿಷ್‌ನ ಯಂಗ್ ಅಡಲ್ಟ್ ಫಿಕ್ಷನ್ ಪುಸ್ತಕಗಳನ್ನು ಓದುತ್ತಾರೆ. ನಂತರ ಶೇಕ್ಸ್‌ಪೀಯರ್ ಕಡೆಗೆ ಹೋಗಲೂ ಬಹುದು. ಆದರೆ ಕುವೆಂಪು, ಬೇಂದ್ರೆ, ದೇವನೂರು ಕಡೆಗೆ ಬರುವುದಿಲ್ಲ.

ಓದು ಕನ್ನಡ ಯಾಕೆ ಬೇಕು? ಆಡು ಕನ್ನಡ ಸಾಲದೇ? ಅದರಿಂದ ಕನ್ನಡ ಉಳಿದುಕೊಳ್ಳುವುದಿಲ್ಲವೇ? ಹಾಗಂತ ವಾದ ಮಾಡುವವರು ಇರಬಹುದು. ಒಂದು ಮಟ್ಟಿಗೆ ಇದು ಸಮಂಜಸವಾಗಿಯೇ ಕಾಣಬಹುದು. ಆದರೆ ಇದು ಆಂಶಿಕ ಬೆಳವಣಿಗೆ. ಬರಹ ಮತ್ತು ಮಾತು ಎರಡೂ ಕೈಗೂಡಿಸಿ ಬೆಳೆದರೆ ಮಾತ್ರವೇ ಒಂದು ಭಾಷೆ ಬೆಳೆದುಕೊಳ್ಳುತ್ತದೆ ಎನ್ನುವುದಕ್ಕೆ ಇಂಗ್ಲಿಷ್ ಉದಾಹರಣೆ.

ಅದು ಕನ್ನಡದಿಂದ ಇಡ್ಲಿ, ಚಟ್ನಿಯಂಥ ಪದಗಳನ್ನು ತನ್ನದಾಗಿಸಿ ಮಾತಿನಲ್ಲೂ ಬರಹದಲ್ಲೂ ಬಳಸಿಕೊಂಡಿದೆ. ಅಚ್ಚರಿ ಎಂಬ ಅಚ್ಚಕನ್ನಡದ ಪದವನ್ನು ಇಂದು ಯಾರೂ ಆಡುಕನ್ನಡದಲ್ಲಿ ಬಳಸುವುದಿಲ್ಲ, ಬರೆಯುವಾಗ ಬಳಸುತ್ತಾರೆ. ಹೊಸ ಕನ್ನಡ ಹುಡುಗರಿಗೆ ಆಶ್ಚರ್ಯ ಎಂಬುದಕ್ಕಿಂತ ಅಚ್ಚರಿ ಎಂಬ ಪದ ಸುಲಭವಾದೀತು.


ಹೀಗಾಗಿ ಬರಹಕನ್ನಡವನ್ನು ಆದಷ್ಟು ಸರಳಗೊಳಿಸಬೇಕು ಎಂಬ ಕೆಲವು ವಿದ್ವಾಂಸರ ಮಾತಿನಲ್ಲಿ ಹುರುಳು ಇದೆ. ಆದರೆ ಇದು ಬಲವಂತದಿಂದ ಆಗುವುದಲ್ಲ, ಸಹಜವಾಗಿ, ನಿಧಾನವಾಗಿ ಕನ್ನಡವನ್ನು ಹಾಗೆ ಬಳಸುವತ್ತ ಕೊಂಡೊಯ್ಯಬಹುದು. ಆದರೆ ಇದಕ್ಕೆಲ್ಲ ನಮ್ಮ ಕನ್ನಡ ಬರಹಗಾರರು, ಸಾಹಿತಿಗಳು ಎಷ್ಟು ಸಿದ್ಧರಾಗಿದ್ದಾರೆ ಎಂಬ ಪ್ರಶ್ನೆ ಉಳಿದು ಕೊಳ್ಳುತ್ತದೆ.

ಕತೆ ಕವಿತೆ ವೈಚಾರಿಕ ಬರಹಗಳನ್ನು ಬರೆಯುವ ನಮ್ಮ ಸಾಹಿತಿಗಳು ಮಕ್ಕಳ, ಯಂಗ್ ಅಡಲ್ಟ್ ಫಿಕ್ಷನ್ ಬಗ್ಗೆ ಯೋಚಿಸುತ್ತಿಲ್ಲ. ಮಕ್ಕಳ ಪುಸ್ತಕಗಳನ್ನು ತರುವ ಪ್ರಕಾಶಕರು ಅಪರೂಪ. ಊರೂರಲ್ಲಿ ಮಕ್ಕಳ ಕನ್ನಡ ಪುಸ್ತಕಗಳು ದಿನಸಿ ಅಂಗಡಿಯಲ್ಲೂ ಕಡಿಮೆ ಬೆಲೆಗೆ ಸಿಗುವಂತಾದರೆ ಮಾತ್ರ ಓದುಕನ್ನಡ ಉಳಿದುಕೊಳ್ಳುತ್ತದೆ.

ಮೊದಲಾಗಿ ಅದು ಬೆಂಗಳೂರ ಆಗಬೇಕು. ಗ್ರಾಮೀಣ ಭಾಗಗಳಲ್ಲಿ ಕನ್ನಡದ ಬಗ್ಗೆ ನಾವು ದೂರಬೇಕಿಲ್ಲ, ಕನ್ನಡದ ಅಳಿವಿನ ಸಮಸ್ಯೆ ನಮ್ಮ ಪಟ್ಟಣಗಳ ಸಮಸ್ಯೆ ಅಂತಲೂ ಕೆಲವೊಮ್ಮೆ ಅನಿಸುತ್ತದೆ. ನಮ್ಮ ನಗರಗಳು ಕನ್ನಡದ ನಗರಗಳಾಗುವಂತೆ ನಾವು ಮಾಡದಿದ್ದರೆ, ನವೆಂಬರ್ ಮಾತ್ರವಲ್ಲ, ಹನ್ನೆರಡು ತಿಂಗಳುಗಳನ್ನು ಕನ್ನಡ ಮಾಸವೆಂದು ಆಚರಿಸಿದರೂ ಫಲವಿಲ್ಲ.

**- ಹರೀಶ್** ಕೇರ






# ಸಮುದ್ರಕ್ಕೆ ಬಿದ್ದಾಗ ಬುದ್ಧಿ ಕಲಿತ ವ್ಯಾಪಾರಿ

**" ಎಷ್ಟೋ ಬಾರಿ ನಮಗಿಂತ ಹೆಚ್ಚು ಕಷ್ಟ ಪಡುವ ಜನರನ್ನು ನೋಡಿದಾಗ ನಮ್ಮ ಸ್ಥಿತಿಯ ಬಗ್ಗೆ ನಮಗೆ ಸಮಾಧಾನವಾಗುತ್ತದೆ. ಆದ್ದರಿಂದ ಎಂತಹದ್ದೇ ಪರಿಸ್ಥಿತಿಯನ್ನು ಸಮಾಧಾನದಿಂದ ಎದುರಿಸುವ, ನಿರ್ಲಿಪ್ತ ಮನಸ್ಥಿತಿಯನ್ನು ಬೆಳೆಸಿಕೊಳ್ಳಬೇಕು. ಆಗ ಮಾತ್ರ ಬದುಕನ್ನು ಸಮಚಿತ್ತದಿಂದ ಸ್ವೀಕರಿಸಲು ಸಾಧ್ಯ. "**

- ರೂಪಾ ಗುರುರಾಜ್

ಒಮ್ಮೆ ಒಂದು ಹಡಗಿನಲ್ಲಿ ಸುಲ್ತಾನ ಪ್ರಯಾಣ ಹೊರಟಿದ್ದ, ಅವನ ಜೊತೆ ರಾಜ ಪರಿವಾರವೂ ಇತ್ತು. ಅದೇ ಹಡಗಿನಲ್ಲಿ ಒಬ್ಬ ತರುಣ ವ್ಯಾಪಾರಿ ಮತ್ತು ಸೂಫಿ ಕೂಡಾ ಪ್ರಯಾಣ ಹೊರಟಿದ್ದರು. ತರುಣ ವ್ಯಾಪಾರಿಗೆ ಅದು ಮೊದಲ ಹಡಗು ಪ್ರಯಾಣ. ಆತ ವಿಪರೀತ ಆತಂಕದಲ್ಲಿದ್ದ. ಹೊಸತಾಗಿ ಮದುವೆಯಾಗಿದ್ದ ಹೆಂಡತಿಯ ಮುಖ ಕಣ್ಮುಂದೆ ಬರುತ್ತಿತ್ತು.

ನಾನು ಹಡಗಿನಲ್ಲಿ ಮುಳುಗಿ ಸತ್ತು ಹೋದರೆ? ಅನ್ನುವ ಯೋಚನೆ ಕಣ್ಣೀರಾಗಿ ಹರಿದು ಸಿಕ್ಕಾಪಟ್ಟೆ ಆತಂಕಗೊಳ್ಳುತ್ತಿದ್ದ. ಸೂಫಿ ಅವನ ದುಃಖವನ್ನು ಗಮನಿಸುತ್ತಲೇ ಇದ್ದ. ಹಡಗು ಹೊರಟಿತು. ಅದು ಒಂದು ಸಲ ತೊನೆದಾಡಿದ ಕೂಡಲೇ ತರುಣ ವ್ಯಾಪಾರಿ ಕಾಪಾಡಿ ಕಾಪಾಡಿ ಎಂದು ಬೊಬ್ಬೆ ಹೊಡೆಯಲು ಶುರು ಮಾಡಿದ.

ರಾಜ ಪರಿವಾರದವರು ಅವನ ಸುತ್ತ ನೆರೆದು ಸಮಾಧಾನ ಹೇಳಿದರು. ಕೆಲ ನಿಮಿಷ ಸುಮ್ಮನಿದ್ದವನು, ಮತ್ತೆ ಬೊಬ್ಬೆ ಶುರುವಿಟ್ಟ. ಹಡಗಿನ ಪರಿಚಾರಕರೆಲ್ಲ ಬಂದು ಅವನಲ್ಲಿ ಧೈರ್ಯ ತುಂಬಲು ಯತ್ನಿಸಿದರು, ಆದರೂ ತರುಣನ ಕೂಗು ನಿಲ್ಲಲಿಲ್ಲ.

ಹಡಗಿನ ಒಳ ಕೋಣೆಯಲ್ಲಿ ಸಂಗೀತ ಕೇಳುತ್ತಾ ವಿರಮಿಸಿದ್ದ ಸುಲ್ತಾನನ ಕಿವಿಗೂ ಆತನ ಕೂಗಾಟ ತಲುಪಿತು. ಆವನು ಅದೇನೆಂದು ವಿಚಾರಿಸಲು ಆದೇಶಿಸಿದ. ತರುಣ ವ್ಯಾಪಾರಿಯ ಬಗ್ಗೆ ಭಟರು ತಿಳಿಸಿದರು. ಸುಲ್ತಾನ, ಹೇಗಾದರೂ ಸರಿ, ಅವನ ಬಾಯಿ ಮುಚ್ಚಿಸಿ ಎಂದು ಆಜ್ಞಾಪಿಸಿದ. ಎಲ್ಲ ಬಗೆಯ ಯತ್ನಗಳೂ ನಡೆದವು. ತರುಣ ಕೆಲ ನಿಮಿಷಗಳ ಕಾಲ ಸುಮ್ಮನಾದರೂ ಮತ್ತೆ ಬೊಬ್ಬೆ ಹಾಕುತ್ತಿದ್ದ, ಇದರಿಂದ ಅಸಹನೆಗೆ ಈಡಾದ ಸುಲ್ತಾನ, ತಾನೇ ಖುದ್ದಾಗಿ ಹೊರಗೆ ಬಂದ.

ಎಲ್ಲರನ್ನೂ ದಿಟ್ಟಿಸಿ ನೋಡುತ್ತಾ, ಈತನ ಬಾಯಿ ಮುಚ್ಚಿಸಬಲ್ಲವರು ಯಾರೂ ಇಲ್ಲವೆ? ಎಂದು ಕೇಳಿದ. ಅಷ್ಟರವರೆಗೆ ಸುಮ್ಮನಿದ್ದ ಸೂಫಿ ಎದ್ದು ನಿಂತ. ನಾನು ಸುಮ್ಮನಾಗಿಸ್ತೇನೆ ಅನ್ನುತ್ತಾ ಸೀದಾ ತರುಣ ವ್ಯಾಪಾರಿಯ ಬಳಿ ಹೋದವನೇ ಅವನನ್ನು ಎತ್ತಿ ಹಡಗಿನಿಂದ ಕೆಳಗೆ ಸಮುದ್ರಕ್ಕೆ ಹಾಕಿದ. ಏನಾಗುತ್ತಿದೆ ಎಂದು ಗೊತ್ತಾಗುವ ಮೊದಲೇ ತರುಣ ನೀರಿನಲ್ಲಿ ಮುಳುಗೇಳುತ್ತಾ ಜೀವ ಉಳಿಸಿಕೊಳ್ಳಲು ಪರದಾಡತೊಡಗಿದ.

ಹಡಗಿನ ಗೋಡೆ ಹಿಡಿದು, ಅದಕ್ಕೆ ಕಟ್ಟಿದ್ದ ಹಗ್ಗವನ್ನು ಗಟ್ಟಿಯಾಗಿ ಹಿಡಿದುಕೊಂಡು ತನ್ನನ್ನು ರಕ್ಷಿಸಲು ಬೇಡಿಕೊಳ್ಳತೊಡಗಿದ. ದಯವಿಟ್ಟು ನನ್ನನ್ನು ಮೇಲಕ್ಕೆತ್ತಿ. ನಾನಿನ್ನು ಕೂಗಾಡುವುದಿಲ್ಲ. ದಯಮಾಡಿ ಎಂದು ಅಂಗಲಾಚಿದ. ಸೂಫಿ ಇದ್ದ ಬೇರೆ ಜನರ ಸಹಾಯದಿಂದ ಹಗ್ಗದ ಬಲೆಯನ್ನು ಇಳಿಬಿಟ್ಟು, ತರುಣ ವ್ಯಾಪಾರಿಯನ್ನು ಮೇಲಕ್ಕೆ ಕರೆಸಿಕೊಂಡ. ಸುಲ್ತಾನ ಕೈಕಟ್ಟಿಕೊಂಡು ಅದನ್ನೆಲ್ಲ ನೋಡುತ್ತಿದ್ದ.

ತಾನು ಒಳಗೆ ಹೋದ ಮೇಲೆ ಈತ ಮತ್ತೆ ಕೂಗಾಡಲು ಶುರು ಮಾಡಬಹುದು ಅನ್ನಿಸಿ ಅಲ್ಲಿಯೇ ನಿಂತ. ಹದಿನೈದಿಪ್ಪತ್ತು ನಿಮಿಷಗಳಾದರೂ ತರುಣ ವ್ಯಾಪಾರಿ ದನಿ ತೆಗೆಯಲಿಲ್ಲ, ತನ್ನ ಜಾಗದಲ್ಲಿ ಸುಮ್ಮನೆ ಮಂಕಾಗಿ ಕುಳಿತ. ಸ್ವಲ್ಪ ಹೊತ್ತಿನಲ್ಲಿ ಸಾವರಿಸಿಕೊಂಡು ಎಲ್ಲರ ಜೊತೆ ಮಾತನಾಡತೊಡಗಿದ.

ಸುಲ್ತಾನ, ಸೂಫಿಯನ್ನು ಕೇಳಿದ: ನೀನು ಅವನನ್ನು ಎತ್ತಿ ಸಮುದ್ರಕ್ಕೆ ಎಸೆದ ಕೂಡಲೇ ಅವನು ಸುಮ್ಮನಾಗಿದ್ದು ಹೇಗೆ? ನಂತರ ನಿಧಾನವಾಗಿ ಅವನು ಹೇಗೆ ಸಮಾಧಾನ ಸ್ಥಿತಿಗೆ ಬಂದ ಎಂದ ಆಶ್ಚರ್ಯದಿಂದ. ಜಹಾಂಪನಾ, ಆತನಿಗೆ ಈ ಸಮುದ್ರಕ್ಕಿಂತ ಹಡಗೇ ಎಷ್ಟೋ ಮೇಲು ಅನ್ನಿಸಿರಬೇಕು.

ಇಲ್ಲಿ ಹಡಗು ಹೊಯ್ದಾಡಿದರೂ ನೀರಲ್ಲಿ ಮುಳುಗಿ ಉಸಿರುಗಟ್ಟುವ ಅಪಾಯವಿಲ್ಲ. ಸಮುದ್ರದಲ್ಲಿ ಉಪ್ಪು ನೀರು ಕುಡಿದು ಒದ್ದಾಡುವಾಗ ಅವನಿಗೆ ಅದರ ಅರಿವಾಗಿದೆ ಎಂದ ಸೂಫಿ. ನಮಗೂ ಕೂಡ ಕೆಲವೊಮ್ಮೆ ಚಿಕ್ಕ ಪುಟ್ಟ ಕಷ್ಟಗಳು ಬಂದಾಗ ಆತಂಕವಾಗಿ ಮನಸ್ಸಿನ ನೆಮ್ಮದಿ ಹಾಳಾಗುತ್ತದೆ. ಆದರೆ ಅದೇ ಪ್ರಕೋಪಕ್ಕೆ ಹೋದಾಗ ಹೇಗಿರಬಹುದು ಎಂಬ ಸಣ್ಣ ಉದಾಹರಣೆ ಸಿಕ್ಕರೂ ಸಹ ನಾವು ಎಷ್ಟು ಸುಖವಾಗಿದ್ದೇವೆ ಎಂದು ಅರಿವಾಗುತ್ತದೆ.

ಎಷ್ಟೋ ಬಾರಿ ನಮಗಿಂತ ಹೆಚ್ಚು ಕಷ್ಟ ಪಡುವ ಜನರನ್ನು ನೋಡಿದಾಗ ನಮ್ಮ ಸ್ಥಿತಿಯ ಬಗ್ಗೆ ನಮಗೆ ಸಮಾಧಾನವಾಗುತ್ತದೆ. ಆದ್ದರಿಂದ ಎಂತಹದ್ದೇ ಪರಿಸ್ಥಿತಿಯನ್ನು ಸಮಾಧಾನದಿಂದ ಎದುರಿಸುವ, ನಿರ್ಲಿಪ್ತ ಮನಸ್ಥಿತಿಯನ್ನು ಬೆಳೆಸಿಕೊಳ್ಳಬೇಕು. ಆಗ ಮಾತ್ರ ಬದುಕನ್ನು ಸಮಚಿತ್ತದಿಂದ ಸ್ವೀಕರಿಸಲು ಸಾಧ್ಯ.

# ಯುದ್ಧ

ಮನಸ್ಸಿನ ರಾಜ್ಯದೊಳಗೆ ಯುದ್ಧ ಗೆಲ್ಲುವುದಕ್ಕೆ ತಯಾರಿ ನಡೆದಿದೆ. ಯುದ್ಧವನ್ನ ಗೆಲ್ಲಲೇಬೇಕು ಅಂತ ತೀರ್ಮಾನಿಸಿ ಆಗಿದೆ. ಹಾಗಾಗಿ ಸುರೇಶ ಎಲ್ಲಿ ಯುದ್ಧ ಆಗುತ್ತೆ ಯುದ್ಧದ ತಯಾರಿಗಳೇನು ಯುದ್ಧದ ಹಿನ್ನೆಲೆ ಏನು ಯುದ್ಧ ಗೆದ್ದ ಮೇಲೆ ಏನಾಗುತ್ತದೆ ಹೀಗೆ ಎಲ್ಲ ರಣತಂತ್ರಗಳನ್ನ ತನ್ನ ಎದುರು ಸಿಕ್ಕ ಪ್ರತಿಯೊಬ್ಬರಲ್ಲೂ ಹಂಚಿಕೊಳ್ಳುತ್ತಾ ಸಾಗಿದ್ದಾನೆ .ಹೀಗೆ ಯುದ್ಧವನ್ನ ಗೆಲ್ಲುವುದರ ಬಗ್ಗೆ ಚರ್ಚೆ ಮಾಡುವುದರಲ್ಲಿ ನಿರತನಾಗ್ತಾ ಮುಂದುವರೆದು ವೈಯಕ್ತಿಕವಾಗಿ ಮಾಡಿಕೊಳ್ಳಬೇಕಾದ ತಯಾರಿಯನ್ನು ಇನ್ನೂ ಮಾಡಿಕೊಳ್ಳದೆ ಹಾಗೆ ಉಳಿದಿದ್ದಾನೆ. ಯುದ್ಧದ ದಿನ ಹತ್ತಿರ ಬಂದಾಗಿತ್ತು ಇವನಿಗಿಂತ ಮೊದಲು ಇವನ ಶತ್ರುಗಳೇ ಆ ಯುದ್ಧವನ್ನು ಗೆದ್ದುಕೊಂಡು ವಿಜಯದ ಪತಾಕೆ ಹಾರಿಸಿಬಿಟ್ಟರು.



ಇವನ ಕೈಯಲ್ಲಿ ಅವಕಾಶವಿದ್ದರೂ ಕಳೆದುಕೊಂಡು ಸುಮ್ಮನಾಗಿ ಬಿಟ್ಟಿದ್ದಾನೆ. ಹಾಗಾಗಿ ಸುರೇಶನ ಮಾತಿಷ್ಟೇ ನೀವು ಯುದ್ಧವನ್ನು ಗೆಲ್ಲಬೇಕಾದರೆ ವೈಯಕ್ತಿಕವಾಗಿ ಶ್ರಮವನ್ನ ಪಟ್ಟು ಗೆದ್ದು ಬಿಡಿ. ಯುದ್ಧ ಗೆಲ್ಲುವುದಕ್ಕಿಂತ ಹೆಚ್ಚಾಗಿ ಅದರ ಬಗ್ಗೆ ಮಾತುಕತೆಗಳು ನಡೆಯುತ್ತಾ ಹೋದರೆ ಸಿಕ್ಕವರೆಲ್ಲರಲ್ಲೂ ಸಂವಾದಗಳನ್ನು ಬೆಳೆಸಿದರೆ ಯುದ್ಧ ಯಾವತ್ತೂ ಗೆಲ್ಲೋದಕ್ಕೆ ಸಾಧ್ಯ ಆಗೋದಿಲ್ಲ. ಇದು ನಿಮ್ಮ ಮನಸ್ಸಿನೊಳಗೂ ಕೂಡ.

**- ಧೀರಜ್** ಬೆಳ್ಳಾರೆ

# ಅಪರೂಪದ ಖನಿಜಗಳ ಅತಿದೊಡ್ಡ ಜಾಗತಿಕ ಮೇಲಾಟ

**"ವಿಜ್ಞಾನಿಗಳು ಈವರೆಗೆ ನಡೆಸಿದ ಅಧ್ಯಯನ ಹಾಗೂ ಸಂಶೋಧಕರು ಈವರೆಗೆ ಪತ್ತೆಹಚ್ಚಿದ ಖನಿಜಗಳನ್ನು ವಿಶ್ಲೇಷಿಸಿ ನೋಡಿದಾಗ ಜಗತ್ತಿನಲ್ಲಿ 17 ವಸ್ತುಗಳನ್ನು ಅಪರೂಪದ ಖನಿಜಗಳು ಎಂದು ಕರೆಯಲಾಗುತ್ತದೆ. ಅವುಗಳೆಂದರೆ; ಲಂಥಾನಮ್, ಸೀರಿಯಮ್, ಪ್ರೆಸೆಯೋಡಿಮಿಯಮ್, ನಿಯೋಡಿಮಿಯಮ್, ಪ್ರೊಮೇಥಿಯಮ್, ಸಮೇರಿಯಮ್, ಯುರೋಪಿಯಮ್, ಗೆಡೋಲಿನಿಯಮ್, ಟೆರ್ಬಿಯಮ್, ಡಿಸ್ಪ್ರೋಸಿಯಮ್, ಹೋಲ್ಮಿಯಮ್, ಎರ್ಬಿಯಮ್, ಥೂಲಿಯಮ್, ಯೆಟೆರ್ಬಿಯಮ್, ಲುಟೇಟಿಯಮ್, ಸ್ಕ್ಯಾಂಡಿಯಮ್ ಮತ್ತು ಯೆಟ್ರಿಯಮ್."**



ಭಾರತದಲ್ಲಿ ಜಗತ್ತಿನ ಮೂರನೇ ಬಹುದೊಡ್ಡ ಅಪರೂಪದ ಖನಿಜಗಳ ನಿಕ್ಷೇಪವಿದೆ. ಆದರೂ ನಾವು ನಮಗೆ ಬೇಕಾದ ಶೇ.97ರಷ್ಟು ಉತ್ಪನ್ನಗಳನ್ನು ಚೀನಾದಿಂದ ಆಮದು ಮಾಡಿಕೊಳ್ಳುತ್ತೇವೆ, ಏಕೆ? ಇಷ್ಟಕ್ಕೂ ಜಗತ್ತಿಗೆ ಇಂದು ಅಪರೂಪದ ಖನಿಜಗಳ ತುರ್ತು ಅಗತ್ಯವೇನಿದೆ?

ಜಗತ್ತಿನ ಬೇರೆ ಬೇರೆ ದೇಶಗಳಿಗೆ ಅಪರೂಪದ ಖನಿಜಗಳನ್ನು ಪೂರೈಸುತ್ತಿದ್ದ ಚೀನಾ ಇದ್ದಕ್ಕಿದ್ದಂತೆ ಒಂದು ದಿನ ತಾನಿನ್ನು ಈ ಖನಿಜಗಳ ಪೂರೈಕೆಯನ್ನು ತನ್ನಿಷ್ಟದಂತೆ ಮಾಡುವುದಾಗಿ ಪ್ರಕಟಿಸಿದಾಗ ಜಗತ್ತಿನಲ್ಲಿ ಅಲ್ಲೋಲಕಲ್ಲೋಲ ಉಂಟಾಯಿತು. ತಕ್ಷಣ ಎಲ್ಲರ ಮನಸ್ಸಿಗೆ ಬಂದ ಪ್ರಶ್ನೆಯೇನೆಂದರೆ, ಮುಂದೇನಾಗಲಿದೆ? ನಿಜವಾಗಿಯೂ ಈ ವಿಷಯದಲ್ಲಿ ಜಗತ್ತು ಚೀನಾದ ಮರ್ಜಿಗೆ ಸಿಲುಕಿದೆಯೇ ಎಂಬಿತ್ಯಾದಿ ಯೋಚನೆಗಳು ಹರಿದಾಡಿದವು. ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಅಗತ್ಯವಿದೆ.

ಹೀಗಾಗಿ, ಜಗತ್ತನ್ನೇ ಅಡಿಸಿದ ಈ ಅಪರೂಪದ ಖನಿಜಗಳ ಬಗ್ಗೆ ಇಂದು ಚರ್ಚಿಸೋಣ. ಹಾಗೆ ನೋಡಿದರೆ, ಅಪರೂಪದ ಖನಿಜವೆಂಬುದು ವಿಜ್ಞಾನಕ್ಕೆ ಸಂಬಂಧಪಟ್ಟ ವಿಷಯ. ಅಷ್ಟು ಸುಲಭಕ್ಕೆ ಇದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಆದರೂ ಸಾಮಾನ್ಯ ಜ್ಞಾನಕ್ಕೆ ಬೇಕಾದಷ್ಟು ಇದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸೋಣ.

ವಿಜ್ಞಾನಿಗಳು ಈವರೆಗೆ ನಡೆಸಿದ ಅಧ್ಯಯನ ಹಾಗೂ ಸಂಶೋಧಕರು ಈವರೆಗೆ ಪತ್ತೆಹಚ್ಚಿದ ಖನಿಜಗಳನ್ನು ವಿಶ್ಲೇಷಿಸಿ ನೋಡಿದಾಗ ಜಗತ್ತಿನಲ್ಲಿ 17 ವಸ್ತುಗಳನ್ನು ಅಪರೂಪದ ಖನಿಜಗಳು ಎಂದು ಕರೆಯಲಾಗುತ್ತದೆ. ಅವುಗಳೆಂದರೆ; ಲಂಥಾನಮ್, ಸೀರಿಯಮ್, ಪ್ರೆಸೆಯೋಡಿಮಿಯಮ್, ನಿಯೋಡಿಮಿಯಮ್, ಪ್ರೊಮೇಥಿಯಮ್, ಸಮೇರಿಯಮ್, ಯುರೋಪಿಯಮ್, ಗೆಡೋಲಿನಿಯಮ್, ಟೆರ್ಬಿಯಮ್, ಡಿಸ್ಪ್ರೋಸಿಯಮ್, ಹೋಲ್ಮಿಯಮ್, ಎರ್ಬಿಯಮ್, ಥೂಲಿಯಮ್, ಯೆಟೆರ್ಬಿಯಮ್, ಲುಟೇಟಿಯಮ್, ಸ್ಕ್ಯಾಂಡಿಯಮ್ ಮತ್ತು ಯೆಟ್ರಿಯಮ್. ಈ ಖನಿಜಗಳನ್ನು ಮೊಬೈಲ್ ಫೋನ್, ಲ್ಯಾಪ್ ಟಾಪ್, ಟೀವಿ ಸ್ಕ್ರೀನ್‌ಗಳು, ಕಂಪ್ಯೂಟರ್, ಹಾರ್ಡ್ ಡಿಸ್ಕ್, ಮೆಮೋರಿ ಕಾರ್ಡ್, ಸೋಲಾರ್ ಪ್ಯಾನಲ್, ಗಾಳಿ ಯಂತ್ರಗಳು, ಬ್ಯಾಟರಿಗಳು, ಹೈಬ್ರೀಡ್ ಮತ್ತು ಎಲೆಕ್ಟ್ರಿಕ್ ವಾಹನಗಳ ಮೋಟರ್‌ಗಳಲ್ಲಿ ಬಳಸಲಾಗುತ್ತದೆ.

ಅಷ್ಟೇ ಅಲ್ಲ, ಕ್ಷಿಪಣಿಗಳು, ರಾಡಾರ್ ವ್ಯವಸ್ಥೆ, ಯುದ್ಧವಿಮಾನದ ಎಂಜಿನ್, ಇನ್ನಿತರ ರಕ್ಷಣಾ ಉಪಕರಣಗಳು, ಎಂಆರ್‌ಐ ಯಂತ್ರಗಳು ಮತ್ತು ಇತರ ವೈದ್ಯಕೀಯ ಉಪಕರಣಗಳಲ್ಲೂ ಬಳಸಲಾಗುತ್ತದೆ. ನೇರವಾಗಿ ಹೇಳಬೇಕು ಅಂದರೆ, ಈ 17 ಖನಿಜಗಳು ಆಧುನಿಕ ಮನುಷ್ಯನ ದಿನನಿತ್ಯದ ಬದುಕಿಗೆ ಇಂದು ಅತ್ಯವಶ್ಯ ವಸ್ತುಗಳಾಗಿ ಮಾರ್ಪಟ್ಟಿವೆ.

ಆದರೆ, ಕುತೂಹಲಕರ ಸಂಗತಿಯೇನೆಂದರೆ ಈ ಸೋಕಾಲ್ಡ್ ಅಪರೂಪದ ಖನಿಜಗಳು ನಿಜವಾಗಿಯೂ ಅಪರೂಪವೇನಲ್ಲ. ಭೂಮಿಯಲ್ಲಿ ಇವುಗಳ ಅಗಾಧ ಸಂಗ್ರಹವಿದೆ. ಹಾಗಿದ್ದರೆ ಇವುಗಳನ್ನೇಕೆ ಅಪರೂಪದ ಖನಿಜಗಳು ಎಂದು ಕರೆಯುತ್ತಾರೆ? ಇದನ್ನು ಕೂಡ ಮುಂದೆ ಚರ್ಚಿಸೋಣ. ಆದರೆ, ಮೊದಲಿಗೆ ಇನ್ನೊಂದು ವಿಚಾರ ಗಮನಿಸೋಣ.

ಇದು ನಿಮಗೆ ಆಶ್ಚರ್ಯವನ್ನೂ, ಹೆಮ್ಮೆಯನ್ನೂ ಉಂಟುಮಾಡಬಹುದು. ಅಮೆರಿಕದ ಭೂಗರ್ಭ ಸರ್ವೇಕ್ಷಣಾಲಯದ ಇತ್ತೀಚಿನ ವರದಿಯ ಪ್ರಕಾರ, ಕೆಲ ಅಪರೂಪದ ಖನಿಜಗಳ ಸಂಪತ್ತಿನಲ್ಲಿ ಭಾರತವು ಜಗತ್ತಿನ ಮೂರನೇ ಸ್ಥಾನದಲ್ಲಿದೆ. ಆದರೂ ನಾವು ನಮ್ಮ ದೇಶಕ್ಕೆ ಬೇಕಾದ ಶೇ.97ರಷ್ಟು ಅಪರೂಪದ ಖನಿಜಗಳನ್ನು ಚೀನಾದಿಂದ ಆಮದು ಮಾಡಿಕೊಳ್ಳುತ್ತೇವೆ.

ಇದಕ್ಕೆ ಕಾರಣವೇನು ಎಂಬುದನ್ನು ತಿಳಿದುಕೊಳ್ಳುವುದಕ್ಕಿಂತ ಮೊದಲು ಅಮೆರಿಕದ ಭೂಗರ್ಭ ಸರ್ವೇಕ್ಷಣಾಲಯದ ವರದಿಯ ಪ್ರಕಾರ ಯಾವ ದೇಶದಲ್ಲಿ ಎಷ್ಟು ಅಪರೂಪದ ಖನಿಜಗಳಿವೆ ಎಂಬುದನ್ನು ನೋಡೋಣ. ಅಮೆರಿಕದ ವರದಿಯ ಪ್ರಕಾರ, ಜಗತ್ತಿನ ಅತಿ ಹೆಚ್ಚು ಅಪರೂಪದ ಖನಿಜಗಳ ಸಂಗ್ರಹವಿರುವುದು ಚೀನಾದಲ್ಲಿ.

ಅಲ್ಲಿ 44 ದಶಲಕ್ಷ ಟನ್‌ಗಳಷ್ಟು ಅಪರೂಪದ ಖನಿಜಗಳಿವೆ. ಎರಡನೇ ಸ್ಥಾನದಲ್ಲಿ ಬ್ರೆಜಿಲ್ ಇದ್ದು, ಅಲ್ಲಿ 21 ದಶಲಕ್ಷ ಟನ್‌ಗಳಷ್ಟು ಅಪರೂಪದ ಖನಿಜಗಳಿವೆ. ಭಾರತ ಮೂರನೇ ಸ್ಥಾನದಲ್ಲಿದ್ದು, 6.9 ದಶಲಕ್ಷ ಟನ್ ಅಪರೂಪದ ಖನಿಜಗಳ ಸಂಗ್ರಹವನ್ನು ಹೊಂದಿದೆ. ನಂತರದ ಸ್ಥಾನಗಳಲ್ಲಿ 5.7 ದಶಲಕ್ಷ ಟನ್‌ನೊಂದಿಗೆ ಆಸ್ಟ್ರೇಲಿಯಾ, 3.8 ದಶಲಕ್ಷ ಟನ್‌ನೊಂದಿಗೆ ರಷ್ಯಾ ಹಾಗೂ 1.9 ದಶಲಕ್ಷ ಟನ್‌ನೊಂದಿಗೆ ಅಮೆರಿಕ ದೇಶಗಳಿವೆ.

ಅಪರೂಪದ ಖನಿಜಗಳಿಗೆ ಕೆಲ ವಿಶಿಷ್ಟ ಗುಣಗಳಿವೆ. ಇವುಗಳಲ್ಲಿ ಗರಿಷ್ಠ ಅಯಸ್ಕಾಂತೀಯ ಶಕ್ತಿಯಿರುತ್ತದೆ. ಇವು ಬೆಳಕನ್ನು ಹೊರಸೂಸುವ ಶಕ್ತಿ ಹೊಂದಿರುತ್ತವೆ. ಎಷ್ಟು ಬಿಸಿ ಮಾಡಿದರೂ ಕರಗುವುದಿಲ್ಲ. ಅತ್ಯಂತ ಗರಿಷ್ಠ ಉಷ್ಣತೆಯವರೆಗೆ ಇವು ಕುದಿಯುತ್ತಲೇ ಇರುತ್ತವೆ. ಇವು ಅತ್ಯುತ್ತಮ ವಿದ್ಯುತ್ ಮತ್ತು ಶಾಖದ ವಾಹಕಗಳು. ಈ ಎಲ್ಲ ಗುಣಗಳು ಅಪರೂಪದ ಖನಿಜಗಳನ್ನು ನಿಜಕ್ಕೂ ಅಪರೂಪವಾಗಿಸಿವೆ.

ಚೀನಾ ಬಹಳ ಮೊದಲೇ ಈ ಅಪರೂಪದ ಖನಿಜಗಳ ವಿಶೇಷತೆಯನ್ನು ಅರ್ಥ ಮಾಡಿ ಕೊಂಡಿತ್ತು. ಅಪರೂಪದ ಖನಿಜಗಳು ಭವಿಷ್ಯದಲ್ಲಿ ಬಹಳ ದೊಡ್ಡ ಸಂಪತ್ತಾಗುತ್ತವೆ ಎಂಬುದು ಆ ದೇಶಕ್ಕೆ ತಿಳಿದಿತ್ತು. ಹೀಗಾಗಿ ಅದು ಅಪರೂಪದ ಖನಿಜಗಳನ್ನು ಭೂಮಿಯಿಂದ ಹೊರತೆಗೆಯಲು ಸುಧಾರಿತ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿ ಕೊಂಡಿತು.

ಅವುಗಳನ್ನು ಭೂಮಿಯಿಂದ ತೆಗೆದ ಮೇಲೆ ನಮ್ಮ ಬಳಕೆಗೆ ಯೋಗ್ಯವಾಗಿಸಲು ಅತ್ಯಾಧುನಿಕ ಸಂಸ್ಕರಣಾ ವ್ಯವಸ್ಥೆಯನ್ನೂ ರೂಪಿಸಿಕೊಂಡಿತು. ಹೀಗಾಗಿ ಇಂದು ಜಗತ್ತಿನಲ್ಲಿ ಉತ್ಪಾದನೆಯಾಗುವ ಅಪರೂಪದ ಖನಿಜಗಳ ಪೈಕಿ ಶೇ.70ರಷ್ಟು ಚೀನಾದ ಉತ್ಪಾದನೆಯಾಗುತ್ತಿವೆ. ಮತ್ತು ಜಗತ್ತಿನಲ್ಲಿ ಸಂಸ್ಕರಣೆಯಾಗುವ ಅಪರೂಪದ ಖನಿಜಗಳ ಪೈಕಿ ಶೇ.90ರಷ್ಟು ಚೀನಾದಲ್ಲೇ ಸಂಸ್ಕರಣೆಯಾಗುತ್ತಿವೆ.

ಭಾರತ ಕೂಡ ಕೆಲ ಅಪರೂಪದ ಖನಿಜಗಳ ಗಣಿಗಾರಿಕೆ ನಡೆಸಿ, ಭೂಮಿಯಿಂದ ಹೊರ ತೆಗೆದು, ಸಂಸ್ಕರಣೆಗಾಗಿ ಅವುಗಳನ್ನು ಚೀನಾಕ್ಕೆ ಕಳುಹಿಸುತ್ತದೆ. ಅಪರೂಪದ ಖನಿಜಗಳ ಗಣಿಗಾರಿಕೆ ಬಹಳ ಕಷ್ಟಕರವಾದ ಹಾಗೂ ದುಬಾರಿಯಾದ ಕೆಲಸ. ಹೆಚ್ಚಿನ ಸಲ ಈ ಖನಿಜಗಳು ಅಪಾಯಕಾರಿ ವಿಕಿರಣಶೀಲತೆಯನ್ನು ಹೊಂದಿರುವ ಯುರೇನಿಯಮ್ ಮತ್ತು ಥೋರಿಯಮ್‌ನೊಂದಿಗೆ ಬೆರೆತಿರುತ್ತವೆ.

ಹೀಗಾಗಿ ಈ ಖನಿಜಗಳನ್ನು ಭೂಮಿಯಿಂದ ಹೊರತೆಗೆಯಲು ವಿಶೇಷವಾದ ಕೌಶಲ್ಯ ಬೇಕಾಗುತ್ತದೆ. ಅದಿಲ್ಲದೆ ಇವುಗಳನ್ನು ಭೂಮಿಯಿಂದ ಹೊರ ತೆಗೆದರೆ ಗಣಿಯಲ್ಲಿ ಕೆಲಸ ಮಾಡುವವರು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ವಾಸಿಸುವವರು ವಿಕಿರಣಶೀಲತೆಗೆ ತುತ್ತಾಗಬೇಕಾಗುತ್ತದೆ.

ಭಾರತದಲ್ಲಿ ಅಪರೂಪದ ಖನಿಜಗಳನ್ನು ಹೊರತೆಗೆಯುವ ಹಾಗೂ ಸಂಸ್ಕರಿಸುವ ಜಾಗತಿಕ ಮಟ್ಟದ ತಂತ್ರಜ್ಞಾನಗಳ ಕೊರತೆಯಿದೆ. ಗಣಿಗಾರಿಕೆಗೆ ಸಂಬಂಧಿಸಿದ ತಂತ್ರಜ್ಞಾನಗಳಿಗಾಗಿ ನಾವು ಆಸ್ಟ್ರೇಲಿಯಾ, ಸ್ವೀಡನ್‌ನಂತಹ ದೇಶಗಳನ್ನು ಅವಲಂಬಿಸಿದ್ದೇವೆ.

ಆದರೆ, ನಮ್ಮ ವಿಜ್ಞಾನಿಗಳು ಕೂಡ ಸಾಕಷ್ಟು ವರ್ಷಗಳಿಂದ ಸಮರೋಪಾದಿಯಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ. ಹೀಗಾಗಿ ಆದಷ್ಟು ಶೀಘ್ರದ ನಮಗೆ ಅಪರೂಪದ ಖನಿಜಗಳಿಗೆ ಸಂಬಂಧಿಸಿದ ದೇಸೀ ತಂತ್ರಜ್ಞಾನಗಳು ಲಭಿಸಬಹುದು. ಇದಕ್ಕಾಗಿ ಭಾರತ ಈಗಾಗಲೇ ರಾಷ್ಟ್ರೀಯ ಅಪರೂಪದ ಖನಿಜಗಳ ಮಿಷನ್ ಜಾರಿಗೊಳಿಸಿದೆ. ಅದರಡಿ, 2031ರೊಳಗೆ 30 ಪ್ರಮುಖ ಖನಿಜ ನಿಕ್ಷೇಪಗಳನ್ನು ಗುರುತಿಸಲಾಗುತ್ತದೆ. ಅವುಗಳನ್ನು ಹೊರತೆಗೆಯುವುದರಲ್ಲಿ ಮತ್ತು ಸಂಸ್ಕರಣೆ ನಡೆಸುವುದರಲ್ಲಿ ನಾವು ಯಶಸ್ವಿಯಾದರೆ ಅಪರೂಪದ ಖನಿಜಗಳ ವಿಷಯದಲ್ಲಿ ಭಾರತ ಸ್ವಾವಲಂಬಿಯಾಗಲಿದೆ.

ಇಂದು ಇಡೀ ಜಗತ್ತು ಅಪರೂಪದ ಖನಿಜಗಳಿಗಾಗಿ ಚೀನಾವನ್ನು ಅವಲಂಬಿಸಿದೆ. ಸದ್ಯದ ಪರಿಸ್ಥಿತಿಯಲ್ಲಿ ಚೀನಾದ ಮೇಲಿನ ಅವಲಂಬನೆಯೆಂದರೆ ನಮ್ಮ ಕಾಲನ್ನು ನಾವೇ ಕಡಿದು ಕೊಂಡಂತೆ. ಅಪರೂಪದ ಖನಿಜಗಳ ಪೂರೈಕೆಯಲ್ಲಿ ಚೀನಾ ವ್ಯತ್ಯಾಸ ಉಂಟು ಮಾಡುತ್ತಿರುವುದು ಇದೇನೂ ಮೊದಲಲ್ಲ. 2010ರಲ್ಲಿ ಜಪಾನ, ಅಮೆರಿಕ ಮತ್ತು ಐರೋಪ್ಯ ದೇಶಗಳಿಗೆ ಅಪರೂಪದ ಖನಿಜಗಳ ರಫ್ತನ್ನು ಚೀನಾ ನಿಲ್ಲಿಸಿ ಬಿಟ್ಟಿತ್ತು. ಇತ್ತೀಚೆಗೆ ಮತ್ತೆ ಚೀನಾ ಸರಕಾರ ಅಪರೂಪದ ಖನಿಜಗಳ ರಫ್ತಿಗೆ ನಿರ್ಬಂಧಗಳನ್ನು ವಿಧಿಸಿದೆ.

ಅದರಿಂದಾಗಿ ಸ್ಮಾರ್ಟ್ ಫೋನ್ ಉತ್ಪಾದನೆ, ರಕ್ಷಣಾ ಸಲಕರಣೆಗಳ ಉತ್ಪಾದನೆ ಹಾಗೂ ಹಸಿರು ಇಂಧನ ಯೋಜನೆಗಳಿಗೆ ಹೊಡೆತ ಬಿದ್ದಿದೆ. ಈ ಕಾರಣದಿಂದಾಗಿಯೇ ಅಮೆರಿಕ ಇಂದು ಅಪರೂಪದ ಖನಿಜಗಳ ಜಪ ಮಾಡುತ್ತಿದೆ. ಯಾವ ದೇಶಕ್ಕೇ ಹೋದರೂ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಮಗೆ ಅಪರೂಪದ ಖನಿಜ ನಿಕ್ಷೇಪಗಳನ್ನು ಕೊಡಿ ಎಂದು ಕೇಳುತ್ತಿದ್ದಾರೆ.

ಇತ್ತೀಚೆಗೆ ಆಸ್ಟ್ರೇಲಿಯಾದ ಜೊತೆಗೆ ಅಮೆರಿಕ ಮಾಡಿಕೊಂಡ ಒಪ್ಪಂದದಲ್ಲೂ ಅಪರೂಪದ ಖನಿಜಗಳನ್ನು ಖರೀದಿಸುವ ಸಂಗತಿಯಿದೆ. ಹೀಗಾಗಿಯೇ ಅಮೆರಿಕದ ಕಣ್ಣು ಗ್ರೀನ್‌ಲ್ಯಾಂಡ್ ಮೇಲೆ ಬಿದ್ದಿದೆ. ಅಲ್ಲಿ ವ್ಯರ್ಥವಾಗಿ ಹಿಮದ ಹೊದಿಕೆ ಹೊದ್ದು ಸಾವಿರಾರು ವರ್ಷಗಳಿಂದ ಮಲಗಿರುವ ಅಪಾರ ಭೂಸಂಪತ್ತಿದೆ. ಅದರಡಿಯಲ್ಲಿ ಸಾಕಷ್ಟು ಖನಿಜಗಳೂ ಇರಬಹುದು.

ಆದ್ದರಿಂದ ಗ್ರೀನ್ ಲ್ಯಾಂಡನ್ನು ಅಮೆರಿಕಕ್ಕೆ ಸೇರಿಸಿಕೊಂಡರೆ ದೊಡ್ಡ ಲಾಭವಿದೆ ಎಂದು ಶ್ವೇತಭವನ ಲೆಕ್ಕ ಹಾಕುತ್ತಿದೆ. ಉಕ್ರೇನ್ ಮತ್ತು ರಷ್ಯಾ ನಡುವಿನ ಯುದ್ಧದಲ್ಲಿ ಉಕ್ರೇನ್‌ನ ಕೆಲ ಭೂಭಾಗಗಳನ್ನು ರಷ್ಯಾ ತನ್ನ ವಶಕ್ಕೆ ತೆಗೆದುಕೊಂಡಿದೆ. ಅಪರೂಪದ ಖನಿಜಗಳು ಅಲ್ಲಿವೆ ಎಂಬ ಕಾರಣಕ್ಕೇ ರಷ್ಯಾ ಆ ಪ್ರದೇಶಗಳ ಮೇಲೆ ಕಣ್ಣು ಹಾಕಿತ್ತು ಎಂಬ ವಾದಗಳಿವೆ.

ಒಟ್ಟಿನಲ್ಲಿ ಈ 17 ಅಪರೂಪದ ಖನಿಜಗಳು ಆಗಾಗ ಜಗತ್ತಿನಲ್ಲಿ ಅಲ್ಲೋಲಕಲ್ಲೋಲ ಉಂಟುಮಾಡುತ್ತಲೇ ಬಂದಿವೆ. ಅಪರೂಪದ ಖನಿಜ ಸಂಪತ್ತನ್ನು ಯಾರು ನಿಯಂತ್ರಿಸುತ್ತಾರೋ ಅವರೇ ಮುಂದೆ ದೊಡ್ಡ ನಾಯಕರಾಗುತ್ತಾರೆ. ಇದನ್ನೆಲ್ಲ ನೋಡಿದರೆ ನನಗೊಂದು ಕವಿತೆ ನೆನಪಾಗುತ್ತದೆ: ನೀನು ನನಗೆ ಅಪರೂಪವಲ್ಲ, ನೀನು ನನ್ನ ಆಸೆಗಳಲ್ಲಿದ್ದೀಯೆ, ನೀನು ನನ್ನ ಕನಸುಗಳಲ್ಲಿದ್ದೀಯೆ, ನಿನಗಾಗಿಯೇ ನಾನು ತುಡಿಯುತ್ತಿರುವೆ!

ಕೊನೆಯ ಗುಟುಕು: ಕಳೆದ ವಾರ ಅಮೆರಿಕದಲ್ಲಿ ಅಲ್ಲಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿರುದ್ಧ 2600ಕ್ಕೂ ಹೆಚ್ಚು ಪ್ರತಿಭಟನೆಗಳು ನಡೆದವು. ಅವುಗಳಲ್ಲಿ ಒಟ್ಟು 70 ಲಕ್ಷಕ್ಕೂ ಅಧಿಕ ಜನರು ಪಾಲ್ಗೊಂಡಿದ್ದರು. ಆ ಪ್ರತಿಭಟನೆ ಅದಕ್ಕೂ ಹಿಂದೆ ಯಾವತ್ತೂ ಕಂಡು ಕೇಳರಿಯದ್ದಾಗಿತ್ತು. ಹಿಂದಿನ ಯಾವುದೇ ಒಬ್ಬ ಅಧ್ಯಕ್ಷರಿಗೂ ಈ ಪರಿಯ ವಿರೋಧ ವ್ಯಕ್ತವಾಗಿರಲಿಲ್ಲ. ಆದರೂ ಡೊನಾಲ್ಡ್ ಟ್ರಂಪ್ ಹೇಗೆ ಜಗತ್ತಿನ ಅತ್ಯಂತ ಶಕ್ತಿಶಾಲಿ ನಾಯಕ ನಾಗುತ್ತಾರೆ? ಅವರು ಕೃತಕ ಬುದ್ಧಿಮತ್ತೆ ಬಳಸಿ, ಪ್ರತಿಭಟನಾಕಾರರ ಮೇಲೆ ತಾವೇ ಕೆಸರು ಎರಚುವ ವಿಡಿಯೋವೊಂದನ್ನು ಮಾಡಿಸಿ ಹರಿಬಿಟ್ಟಿದ್ದರು.

ಇಷ್ಟು ಚೀಪ್ ಆಗಿ ವರ್ತಿಸುವುದು ಅಮೆರಿಕದ ಅಧ್ಯಕ್ಷರ ಘನತೆಗೆ ಎಷ್ಟು ದೊಡ್ಡ ಘಾಸಿ ಮಾಡಿರಬೇಡ? ಬಹುಶಃ ಟ್ರಂಪ್‌ಗೆ ಅಮೆರಿಕದ ಕಾಂಗ್ರೆಸ್ಸನ್ನು ಕಂಡರೆ ಭಯ. ಆದರೆ ಅದನ್ನು ಮುಚ್ಚಿಟ್ಟುಕೊಂಡು, ತಾನೊಬ್ಬ ಧೈರ್ಯಶಾಲಿ ಎಂಬಂತೆ ತೋರಿಸಿಕೊಳ್ಳಲು ಅವರು ಈ ರೀತಿಯ ನಾಟಕಗಳನ್ನು ಮಾಡುತ್ತಿದ್ದಾರೆ! ಅವರಿಗೆ ಯಾರಾದರೂ ಒಬ್ಬರು ಒಳ್ಳೆಯ ಸಲಹೆ ನೀಡುವವರು ಬೇಕಾಗಿದ್ದಾರೆ. ಅಂತಹವರು ಯಾರಿದ್ದಾರೆ?

**– ಡಾ.ವಿಜಯ್** ದರಡಾ

## ಕನ್ನಡ ಕವನಗಳು



## ವಿಧಿಲಿಖಿತ

ಅಳಿಸಲಾಗದಂತೆ ಹಣೆ ಬರಹವನು
ಅದೆಮ್ಮ ವಿಧಿಲಿಖಿತವಂತೆ
ನಿಜವಿರಲೇಬೇಕು ಈ ಮಾತು
ನಮ್ಮ ಹಣೆ ನಮಗೆ ಕಾಣಿಸದು
ಪರರಿಗೆ ಹಣೆ ಕಂಡರೂ ಕಾಣದು
ನಾವು ಪಡೆದು ಬಂದ ಬರಹ
ಅಹುದು ಹಣೆಬರಹ ಎಂದರೇನು?
ಅದ ಬರೆದು ನಮಗಿತ್ತವನು ಯಾರು?
ಬರೆದವನು ಅಳಿಸಲಾಗದು ಎಂದಿಗೂ
ಬರೆಸಿಕೊಂಡವನು ಓದಲಾರ ಇಂದಿಗೂ
ನಡೆದುದಕೆಲ್ಲ ಹೊಣೆ ಅದೇ ಬರಹ
ನಮ್ಮದೇನೂ ಹೊಣೆಯೇ ಇಲ್ಲವೇ?
ಕೈಮೀರಿ ನಡೆದುದನು ನೋಡುತ
ಹೇಳುವುದೊಳಿತು ಅದು ವಿಧಿಲಿಖಿತ

**– ಕೆರೋಡಿ.ಎಂ.ಲೋಲಾಕ್ಷಿ**

## ಮರಗಳ ಮನದ ಮಾತು

ಹಬ್ಬಗಳಲ್ಲಿ ಮಾವಿನಟೊಂಗೆ ಕತ್ತರಿಸಿ ತರುವುದು, ಯುಗಾದಿ ದಿನ ಬೇವು, ವಟಪೌರ್ಣಿಮೆಯಂದು, ಅಲದ ಗಿಡ, ದಸರೆಯಂದು, ಶಮಿ, ಆರಿ ಟೊಂಗೆ, ತುಳಸಿ ವಿವಾಹದಂದು, ನೆಲ್ಲಿ ಗಿಡ, ಹುಣಸೆ ಮರದ ಟೊಂಗೆ ಕತ್ತರಿಸಿ ತಂದು ಪೂಜಿಸುವುದು, ನಿಜ ಆದರೆ ಕೀಳುವಾಗ ಆಯಾ ಮರಗಳ ಕ್ಷಮೆ ಕೇಳಿ ಕೀಳುವುದು ಮನುಷ್ಯ ಧರ್ಮ. ಅಥಣಿ ಶಿವಯೋಗಿಗಳು ಮಲ್ಲಿಗೆ ಹೂ ಹರಿಯುವಾಗ ಕ್ಷಮೆ ಕೇಳುತ್ತಾ ನೋವುಂಟಾಯಿತೇ ಎನ್ನುತ್ತಾ ಅತ್ಯಂತ ನಿಧಾನವಾಗಿ ಮಲ್ಲಿಗೆ ಹೂವನ್ನು ನಾಜೂಕಾಗಿ ಹರಿಯುತ್ತಿದ್ದರಂತೆ. ಇದನ್ನೆಲ್ಲ ನೋಡಿ ಕೆಟ್ಟನಿಸಿ ಈ ಕವಿತೆ ಬರೆದಿರುವೆ.

ಅರಳಿ ಮರ ಮಾವಿನ ಮರಗಳು ನೆಲ್ಲಿ ನರಳುವದ ಕಂಡು ಬಳಿಸಾರಿ
ಬಿಗಿದಪ್ಪಿ ಸಂತೈಸುವದ ನೋಡಿ ಶಮಿ ಓಡಿಬಂತು ಮನದ
ಮಾತುಗಳನ್ನು ಅಳುತ್ತಲಿ ಹೇಳತೊಡಗಿದವು ದುಃಖದಿ//
ಹೊನ್ನವರ್ಣದಲೆಯ ಆರಿ ಗಿಡ ಹುಣಸೆ ಮರ ಬಂದವು
ತುಳಸಿಯೊಂದಿಗೆ ಪರಿಮಳದ ಪುಟ್ಟ ಗಿಡಗಳೂ ಬಂದವು. ನಾನಾವಿಧ
ಹಣ್ಣುಗಳ ಮಸಾಲೆಯ ಮರಗಳೂ ಕಣ್ಣೀರ ತಂದವು//
ಯುಗಾದಿಯಿಂದ ಎಲ್ಲ ಹಬ್ಬಗಳು ಏಕಾದರೂ ಬರುತ್ತವೆಯೋ ಕಾರುಣ್ಯ ಶೂನ್ಯ ಜನರಿಗೆ ದಯಯೇ ಇಲ್ಲ ಮನುಷ್ಯತ್ವವೂ ಇಲ್ಲ ನಾವು ನಮ್ಮಷ್ಟಕ್ಕೆ ಕಾನನದಲಿ ಸುಖ ಆನಂದದಿಂದ ಇದ್ದೆವಲ್ಲ//
ಇವರಿಗೆ ಬದುಕಲು ಉಸಿರು ಕೊಡುವ ಹಸುರಿನ ಚೈತನ್ಯ ನಾವು ಮಳ ಸುರಿಸಿ ನೆಲ ಫಲವತ್ತಾಗಲು ಕಾರಣರೂ ನಾವೇ ನಾವು
ಹೂ ಹಣ್ಣು ಉಣ್ಣುವುದಕ್ಕೆ ತಂಪಿನ ನೆರಳು ಕೊಡುವವರು ನಾವು//
ಜಾತಿಭೇದ ಮೇಲುಕೀಳು ಭಾವವಿಲ್ಲ ಎಲ್ಲರಿಗೂ ಆಶ್ರಯದಾತರು ಗುಡಿಸಿಲೇ ಇರಲಿ ಮನೆಗಳೇ ಇರಲಿ ಬಿದಿರೇ ಆಸರೆಯದಾತ ನಮ್ಮೆಲ್ಲರನೂ ನಿನಗೆ ಬೇಕಾದಂತೆ ಉಪಯೋಗಿಸುವ ಕೃತಘ್ನ//
ಕೃತಜ್ಞತೆಯಿಲ್ಲದ ನೀನು ನಮ್ಮ ಬೇಕು ಬೇಡಗಳ ಅರಿತಿರುವೆಯಾ ನಮ್ಮ ಉತ್ತಮ ಬೆಳವಣಿಗೆಯ ಬಗ್ಗೆ ನೀನು ಯೋಚಿಸಿರುವೆಯಾ ಸಾಲುಮರದ ತಿಮ್ಮಕ್ಕತುಳಸಿಗೌಡಳಂತೆ ನಡೆದುಕೊಂಡಿರುವೆಯಾ//

**– ಅನ್ನಪೂರ್ಣ ಸಕ್ರೋಜಿ** ಪುಣೆ.



## ಸಂಪಾದಕನ ಬದುಕು

ಸಂಪಾದಕರ ಸದ್ಯಶೋಧನೆ

ರಾಜ್ಯದ ಬೇರೆ ಬೇರೆ ಪತ್ರಿಕೆಗಳ ಸಂಪಾದಕನಾಗಿ, ಕಳೆದ 25 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಒಂದು ದಿನವೂ ನನ್ನ ಪಾಲಿಗೆ ನೀರಸ ದಿನವೆಂಬುದು ಇಲ್ಲವೇ ಇಲ್ಲ. ವರ್ಷದಲ್ಲಿ ಒಂದು ಸಲ, ಎರಡು ದಿನ ಜ್ವರ, ಅಸೌಖ್ಯ ಎಂದು ಮಲಗಿರಬಹುದು. ಆದರೆ ಒಂದು ದಿನ ಸಹ ರಜಾ ಹಾಕಿದ್ದಿಲ್ಲ.

ಪತ್ನಿ– ಮಗನೊಂದಿಗೆ ಪ್ರವಾಸ ಹೋಗಿದ್ದರೂ, ಆಫೀಸನ್ನು ಮರೆತಿದ್ದಿಲ್ಲ. ಅನೇಕ ಸಲ ಅವರು, ನೀವು ನಮ್ಮ ಜತೆ ಬರುವ ಬದಲು, ಆಫೀಸಿನ ಇರಬಹುದಿತ್ತಲ್ಲ? ಆಫೀಸಿನ ಬಗ್ಗೆ ಯೋಚಿಸದಿದ್ದರೆ, ಒಂದು ದಿನ ಏನಾದರೂ ಬರೆಯದಿದ್ದರೆ, ಓದದಿದ್ದರೆ ಜಗತ್ತೇನೋ ಮುಳುಗಿಹೋಗುವುದಿಲ್ಲ ಎಂದು ಅನೇಕ ಸಲ ತಮಾಷೆಗೆ ಹೇಳಿದ್ದಿದೆ.

ಆದರೆ ಎಲ್ಲಿಗೆ ಹೋಗಲಿ, ಬರಲಿ, ಪತ್ರಿಕೆಯನ್ನು ಜತೆಗೆ ಕಟ್ಟಿಕೊಂಡೇ ಹೋಗಬೇಕು. ಪತ್ರಕರ್ತ ವೈಎನ್ಕೆ, ಸಂಪಾದಕರು ರಜಾ ಹಾಕಿ, ಪ್ರವಾಸ ಹೋಗುವ ಬಗ್ಗೆ, For an editor, a holiday is an opportunity to travel within ಎಂದು ಹೇಳುತ್ತಿದ್ದರು. ಇದು ಅಕ್ಷರಶಃ ಸತ್ಯ. ಪತ್ರಕರ್ತರಾದವರಿಗೆ ರಜೆ ಎಂಬುದೇ ಇಲ್ಲ. ಅದೇನೂ ಇಲ್ಲದಿದ್ದರೂ, ಬೆಳಗ್ಗೆ ಎದ್ದು ನಾಲ್ಕು ಪತ್ರಿಕೆಗಳನ್ನು ತಿರುವಿ ಹಾಕಲೇಬೇಕು.

ಪತ್ರಿಕೆ ಸಿಗದ, ಕಾಣದ ಊರಿಗೆ ಪ್ರವಾಸ ಹೋದರೆ, ಅದು ರಜೆ. ಈಗಂತೂ ಎಲ್ಲೇ ಹೋದರೂ ಮೊಬೈಲ್ ಮತ್ತು ಅದಕ್ಕೆ ಇಂಟರ್‌ನೆಟ್ ಸಂಪರ್ಕ ಇದ್ದೇ ಇರುತ್ತದೆ. ಹೀಗಾಗಿ ಪತ್ರಿಕೆಗಳನ್ನು ತಪ್ಪಿಸಿಕೊಳ್ಳುವ ಪ್ರಶ್ನೆಯೇ ಇಲ್ಲ. ಕುಟುಂಬ ಸಮೇತ ಪ್ರವಾಸ ಹೋಗುವುದಾದರೆ, ಹೆಂಡತಿ ಇಲ್ಲದಿದ್ದರೋ ಪರವಾಗಿಲ್ಲ.

ಆದರೆ ಮೊಬೈಲ್ ಇಲ್ಲದೇ ಪ್ರವಾಸ ಹೋಗುವುದು ಸಾಧ್ಯವೇ? ಉಹುಂ.. ಇಲ್ಲವೇ ಇಲ್ಲ. ಇನ್ನು ನೆಟ್ ಮತ್ತು ವೈಫೈ ಇಲ್ಲದ ಜಾಗಕ್ಕೆ ಹೋಗಬೇಕು. ಇಲ್ಲದಿದ್ದರೆ ಪತ್ರಕರ್ತರು ಹೇಗೋ ಪತ್ರಿಕೆಗಳಿಗೆ ತಗುಲಿಕೊಂಡು ಬಿಡುತ್ತಾರೆ. ಕೈಗೆ ಪತ್ರಿಕೆ ಸಿಕ್ಕರೆ, ಹೇಗೋ ಆಫೀಸಿಗೆ ಕನೆಕ್ಟ್ ಆಗಿಬಿಡುತ್ತಾರೆ. ಅದರಲ್ಲೂ ನೀವು ಅಂಕಣ ಬರೆಯುವವರಾದರೆ, ರಜಾ ಇಲ್ಲವೇ ಇಲ್ಲ, ಕೆಲವರು ಮೊದಲೇ ಬರೆದಿಟ್ಟು ಹೋಗುತ್ತಾರೆ.

ಆದರೆ ನಾನು ಕಳೆದ 25 ವರ್ಷಗಳಿಂದ ವಾರಕ್ಕೆ ನಾಲ್ಕು ಅಂಕಣ ಬರೆಯುತ್ತಿರುವವನು. ಇದರೊಂದಿಗೆ ನಿತ್ಯ ಅಂಕಣಗಳು ಬೇರೆ. ಪ್ರವಾಸಿ ಪ್ರಪಂಚ ಆರಂಭವಾದ ಬಳಿಕ ಸಂಖ್ಯೆ




**"ಜಗತ್ತಿನ ಎಲ್ಲಾ ದೇಶಗಳಿಂದ ಅಲ್ಲಿಗೆ ಪ್ರವಾಸಿಗರು ವಿಹಾರಕ್ಕೆ ಬರುತ್ತಾರೆ. ಇಬಿಜಾ ನಾನು ನೋಡಿದ ಅತ್ಯಂತ ಸುಂದರ ದ್ವೀಪಗಳಂದು. ನಾನು ಹೋಗಿದ್ದಾಗ, ಅಲ್ಲಿ ವೈಫೈ ಸೌಲಭ್ಯ ಇರಲಿಲ್ಲ. ಕೈಯಲ್ಲಿ ಬರೆದು, ಫ್ಯಾಕ್ಸ್ ಮಾಡಬೇಕಿತ್ತು. ನಾನು ಹೋಟೆಲ್ ರೂಮಿನಲ್ಲಿ ಬರೆದು, ಅಲ್ಲಿನ ಬಿಜಿನೆಸ್ ಸೆಂಟರ್‌ಗೆ ಹೋಗಿ, ಫ್ಯಾಕ್ಸ್ ಮಾಡುತ್ತಿದ್ದೆ. ಒಂದು ಪುಟ ಫ್ಯಾಕ್ಸ್‌ಗೆ ಐನೂರು ರುಪಾಯಿ!"**

ಇನ್ನಷ್ಟು ಹೆಚ್ಚಾಗಿದೆ. ಜಗತ್ತಿನ ಯಾವ ದೇಶದಲ್ಲಿದ್ದರೂ, ಅಂಕಣ ಮತ್ತು ದೈನಂದಿನ ಕಾರ್ಯ ನಿರ್ವಹಿಸದೇ ಬಿಟ್ಟವನಲ್ಲ. ಹೀಗಾಗಿ ರಜೆ ಎಲ್ಲಿ? ಬೇರೆಯವರಾಗಿದ್ದರೆ, ಸಂಪಾದಕರಿಗೆ ಏನೋ ಸುಳ್ಳು ಹೇಳಬಹುದು.

ನಾನು ಯಾರಿಗೆ ಸುಳ್ಳು ಹೇಳಲಿ? ಹೇಗೆ ಕೆಲಸ ಕದಿಯಲಿ? ನನಗೆ ನಾನು ಸುಳ್ಳು ಹೇಳಿ ಕೊಳ್ಳಲು ಸಾಧ್ಯವಿಲ್ಲವಲ್ಲ. ವಿಜಯ ಕರ್ನಾಟಕದಲ್ಲಿದ್ದಾಗ ನಾನು ಒಮ್ಮೆ ಸ್ಪೇನ್ ದೇಶದ ಬಾರ್ಸಿಲೋನದಿಂದ ಒಂದೂವರೆ ಗಂಟೆ ವಿಮಾನ ಪ್ರಯಾಣದಷ್ಟು ದೂರದಲ್ಲಿರುವ, ಮೆಡಿಟರೇನಿಯನ್ ಸಮುದ್ರದಲ್ಲಿರುವ ಇಬಿಜಾ ಎಂಬ ಪುಟ್ಟ ದ್ವೀಪಕ್ಕೆ ಹೋಗಿದ್ದೆ. ಇದನ್ನು Dance floor of the world ಎಂದು ಕರೆಯುತ್ತಾರೆ.

ಜಗತ್ತಿನ ಎಲ್ಲಾ ದೇಶಗಳಿಂದ ಅಲ್ಲಿಗೆ ಪ್ರವಾಸಿಗರು ವಿಹಾರಕ್ಕೆ ಬರುತ್ತಾರೆ. ಇಬಿಜಾ ನಾನು ನೋಡಿದ ಅತ್ಯಂತ ಸುಂದರ ದ್ವೀಪಗಳಂದು. ನಾನು ಹೋಗಿದ್ದಾಗ, ಅಲ್ಲಿ ವೈಫೈ ಸೌಲಭ್ಯ ಇರಲಿಲ್ಲ. ಕೈಯಲ್ಲಿ ಬರೆದು, ಫ್ಯಾಕ್ಸ್ ಮಾಡಬೇಕಿತ್ತು. ನಾನು ಹೋಟೆಲ್ ರೂಮಿನಲ್ಲಿ ಬರೆದು, ಅಲ್ಲಿನ ಬಿಜಿನೆಸ್ ಸೆಂಟರ್‌ಗೆ ಹೋಗಿ, ಫ್ಯಾಕ್ಸ್ ಮಾಡುತ್ತಿದ್ದೆ. ಒಂದು ಪುಟ ಫ್ಯಾಕ್ಸ್‌ಗೆ ಐನೂರು ರುಪಾಯಿ! ಆದರೆ ಬೇರೆ ಮಾರ್ಗವಿಲ್ಲ. ಆದರೆ ಹೇಗೆ ಕಳಿಸಿದರೂ ಮೇಲಿನ ನಾಲ್ಕು ಮತ್ತು ಕೆಳಗಿನ ನಾಲ್ಕು ಸಾಲು ಕಟ್ ಆಗುತ್ತಿತ್ತು. ಆಗ ಫೋನಿನಲ್ಲಿ ಎಲ್ಲವನ್ನೂ ಓದಿ ಹೇಳಬೇಕಾಗುತ್ತಿತ್ತು. ನಾನು ಅನುಭವಿಸಿದ ಇಂಥ ಗೋಳು ಒಂದೆರಡಲ್ಲ. ಅದಕ್ಕೇ ಹೇಳಿದ್ದು ಈ 25 ವರ್ಷಗಳಲ್ಲಿ ಒಂದೇ ಒಂದು ದಿನ ನೀರಸ ಎಂಬುದೇ ಇರಲಿಲ್ಲ.

**– ವಿಶ್ವೇಶ್ವರ ಭಟ್**



## ಹಣೆಬರಹ ನಿರ್ಧರಿಸುವುದು ಯಾರು?

ಸಾಬೂನಿನ ಅಣುವಿನ ಎರಡು ತುದಿಗಿರುವ ಪರಸ್ಪರ ವಿರುದ್ಧ ಗುಣಗಳು ಸಾಬೂನು ಒಂದು ಬಹುಪಯೋಗಿ ವಸ್ತುವಾಗುವಂತೆ ಮಾಡಿದೆ ಎಂಬುದು ನಿಮಗೆ ಅರ್ಥವಾಗಿದೆಯಲ್ಲವೇ? ಜೀವನದಲ್ಲಿ ಇದೊಂದು ಅತಿದೊಡ್ಡ ಪಾಠ. ನಿಮ್ಮ ಗುಣಕ್ಕೆ ಒಲ್ಲದ ಗುಣ ಹೊಂದಿರುವ ಇನ್ನೊಬ್ಬ ವ್ಯಕ್ತಿ ನಿಮ್ಮ ಮಿತ್ರನಾದಲ್ಲಿ ನಿಮಗೊಲ್ಲದ ಅವನ ಗುಣವನ್ನು ನೀವು ಮರೆತು ಸ್ನೇಹ ಬೆಳೆಸುವುದು ಸಾಧ್ಯವಾದಲ್ಲಿ ನಿಮ್ಮ ಜೋಡಿ ಜನಪರವಾಗಿ ರೂಪುಗೊಳ್ಳಬಾರದೆಂದೇನೂ ಇಲ್ಲ. ನಿಮಗೆ ನೆನಪಿರಲಿ. ಹೀಗೆ ವೈರುಧ್ಯ ಗುಣಗಳ ಈ ಗುಣವನ್ನು ನಾವು ಆ್ಯಂಫಿಫಿಲಿಕ್ ಗುಣ ಎನ್ನುತ್ತೇವೆ. ಈ ಗುಣವೇ ಸೋಪನ್ನು ಸೋಪಾಗಿಸಿದೆ. ಅದರ ಧ್ರುವೀಯ ತುದಿ ನೀರಿನಂತಹ ಧ್ರುವೀಯ ದ್ರಾವಕದ ಸುತ್ತ ನೆರೆದರೆ ಧ್ರುವೀಯವಲ್ಲದ ತುದಿ ಎಣ್ಣೆ, ಗ್ರೀಸ್‌ನ ಸುತ್ತ ನೆರೆದು ಮೈಸೆಲ್ಲ್‌ಗಳನ್ನು ರಚಿಸಿ ಬಟ್ಟೆಯ ಕೊಳೆಯನ್ನು ತೊಡೆದು ಹಾಕಿದ್ದನ್ನು ನೋಡಿದ್ದೇವೆ.

ಈ ಸೋಪಿನ ಅಣುವಿನಂತಹುದೇ ವಸ್ತುಗಳಿಂದ ರಚಿಸಲ್ಪಟ್ಟಿದೆ ನಮ್ಮ ಕೋಶಪೊರೆ. ಕೋಶಪೊರೆಯ ರಚನಾತ್ಮಕ ರಾಸಾಯನಿಕಗಳು ಫಾಸ್ಫೋಲಿಪಿಡ್‌ಗಳು ಎಂದು ಕರೆಯಲ್ಪಡುತ್ತವೆ. ಈ ಫಾಸ್ಫೋಲಿಪಿಡ್‌ನಲ್ಲಿ ಫಾಸ್ಫೇಟ್ ಗ್ಲಿಸರೇಟ್ ತಲೆ ದ್ರುವೀಯ ತುದಿ ಇದಕ್ಕೆ ನೀರೆಂದರೆ ಇಷ್ಟ. ಇನ್ನೆರಡು ಕೊಬ್ಬಿನಾಮ್ಲದ ಅಣುಗಳು ನೀರು ನಿಷೇಧಕ ತುದಿಗಳು. ಇವುಗಳನ್ನು ನೀರಿನ ಮೇಲೆ ಹಾಕಿದರೆ ಫಾಸ್ಫೇಟ್ ಗ್ಲಿಸರೇಟ್ ತಲೆ ನೀರಿಗೆ ಆಕರ್ಷಿತವಾಗಿ ಕೊಬ್ಬಿನಾಮ್ಲದ ಅಣುಗಳು ನೀರಿನಿಂದ ದೂರಕ್ಕೆ ಅಂದರೆ ಬಾಲ ಎತ್ತಿದ ಕರುವಿನ ಹಾಗೆ ನಿಂತು ಬಿಡುತ್ತದೆ. ಆದರೆ ಹೀಗೆ ಬಾಲ ಎತ್ತಿ ನಿಲ್ಲಲು ಆಚೆ ಬದಿಯಲ್ಲೂ ನೀರಿರುತ್ತದೆಯಲ್ಲ ಆಗ ಈ ಬಾಲದ ಪರಿಸ್ಥಿತಿ ಹೇಗೆ ಎಂದು ಕೇಳಬಹುದು ನೀವು. ಹೌದು ಹೀಗೆ ಬಾಲ ಎತ್ತಿ ನಿಲ್ಲಲು ಸಾಧ್ಯವಾಗುವುದಿಲ್ಲ ಮುಂದೇನು ಎಂದು ಕೇಳಬಹುದು ನೀವು. ಈಗ ಆಚೆ ಕಡೆಯಲ್ಲಿರುವ ನೀರಿನ ಅಣುವಿಗೆ ಇನ್ನೊಂದು ಅಣುವನ್ನು ಸಿಕ್ಕಿಸಿಬಿಡಿ. ಆಗ ಫಾಸ್ಫೇಟ್ ಗ್ಲಿಸರೇಟ್ ತುದಿ ನೀರಿಗೆ ಅಂಟಿಕೊಂಡರೆ ಕೊಬ್ಬಿನಾಮ್ಲದ ತುದಿ ಒಳಮುಖವಾಗಿ ಅಂದರೆ ಈಗಾಗಲೇ ಇರುವ ಕೊಬ್ಬಿನಾಮ್ಲದ ತುದಿಯ ಕಡೆಗೆ ಚಾಚುತ್ತದೆ. ಆದ್ದರಿಂದ ಈಗ ರೂಪುಗೊಳ್ಳುವ ಈ ಪೊರೆ ಕೇವಲ ಒಂದೇ ಪದರ ಇದ್ದರೆ ಸಾಕಾಗುವುದಿಲ್ಲ ಬದಲಾಗಿ ಎರಡು ಪದರವನ್ನು ಹೊಂದಬೇಕಾಗುತ್ತದೆ. ಆದ್ದರಿಂದ ಕೋಶಪೊರೆ ದ್ವಿ ಪದರದ ರಚನೆ ಹೊಂದಬೇಕಾಗುತ್ತದೆ.

ಒಂದೇ ಗುಣದ ಎರಡು ಅಣುಗಳು ಒಂದು ಕಾಲ್ಚೆಂಡಿನ ಆಕಾರದಲ್ಲಿ ಮೈಸೆಲ್ಲ್‌ಗಳನ್ನು ರಚಿಸಿದರೆ ಇನ್ನೊಂದು ದ್ವಿಪದರದ ರಚನೆಗೆ ಕಾರಣವಾಗುತ್ತದೆ. ಇದು ಕಲ್ಲಿನ ಹಾಗೆ ಒಂದು ಮೆಟ್ಟಿಲಾಗುತ್ತದೆ, ಇನ್ನೊಂದು ಕಂಬವಾಗುತ್ತದೆ ಮತ್ತೊಂದು ವಿಗ್ರಹವಾಗುತ್ತದೆ. ಈ ಕಲ್ಲಿನ ಹಣೆಬರೆಹ ನಿಗದಿಯಾಗುವುದು ಅದು ಯಾರ ಕೈಗೆ ಸಿಗುತ್ತದೆ ಎಂಬುದು. ಕಲ್ಲು ಕುಟಿಗನ ಕೈಗೆ ಸಿಕ್ಕಿದ್ದು ಮೆಟ್ಟಿಲಾದರೆ ಸ್ಥಪತಿಯ ಕೈಗೆ ಸಿಕ್ಕರೆ ಕಂಬವಾಗುತ್ತದೆ. ಅದೇ ಶಿಲ್ಪಿಯ ಕೈಗೆ ಸಿಕ್ಕರೆ ವಿಗ್ರಹವಾಗುತ್ತದೆ. ಹೀಗೆ ಹಣೆಬರೆಹ ನಿರ್ಧಾರವಾಗುವುದಕ್ಕೆ ನಿರ್ದೇಶಕನ ನಿರ್ದೇಶನ ಬೇಕು. ಹಾಗಾದರೆ ಉಂಡೆಯಾಗಬೇಕಾದದ್ದು ಹಾಳೆಯಾಗುವುದು ಹೇಗೆ ಎಂದು ಮುಂದಿನ ವಾರ ನೋಡೋಣ.

**– ದಿವಾಕರ ಶೆಟ್ಟಿ ಎಚ್,** ಮಂಗಳೂರು

## ಕಡೆಗಣ್ಣಿನ ಬಿಡಿನೋಟ

ನಿಮ್ಮ ಮನೆಯಲ್ಲೂ ಪಾತಿ ಮಾಡಿದಾರಾ? ಎಂದು ಸುಮ್ಮನೆ ಮಾತಿಗೆ ಒಮ್ಮೆ ಕೇಳಿದ್ದೆ. ನಮ್ಮನೆ ಮುಂದೆ ಲಾಲ್ ಬಾಗೇ ಇದೆಯಲ್ಲ? ಎಂದು ಫಟ್ಟನೆ ಹೇಳಿದಾಗ ಬೆಚ್ಚಿಬೀಳುವ ಹಾಗಾಯಿತು. ಅದೊಂದು ಮಹಾವಾಕ್ಯದಂತೆ ಕೇಳಿಸಿತ್ತು. ಲಾಲ್ ಬಾಗಿನ ಎದುರು ಇರುವ ಸ್ಲಮ್ಮಿನಲ್ಲಿ ಅವರದ್ದು ಜೋಪಡಿ ವಾಸ. ಹೈದರ್ ಅಲಿ ಟಿಪ್ಪು ಸುಲ್ತಾನರು ದೇಶ ವಿದೇಶಗಳಿಂದ ತರಿಸಿ ಬೆಳೆಸಿರುವ ಅಪರೂಪದ ವೃಕ್ಷಗಳ ನಡುವೆಯೇ ಬೆಳೆಯುತ್ತಿರುವ ಮಗು ಅವಳು. ನಾನು ಪಾಠ ಮಾಡುವ ಶೇಕ್ಸ್ ಪಿರ್ ನೆನಪಾಗಿದ್ದ. ಅತ್ಯಂತ ಗಹನವಾದ ಸತ್ಯಗಳನ್ನು ಅವ ತುಂಬ ಗೌಣವಾದ ಪಾತ್ರಗಳ ಬಾಯಲ್ಲಿ ಹೇಳಿಸುತ್ತಾನೆ.

ಮಹಾವಾಕ್ಯ!

ನನ್ನ ಸಹ–ಉದ್ಯೋಗಿ, ನಂತರ ಹೆಡ್, ಪ್ರಿನ್ಸಿಪಾಲಿನಿಯೂ ಆದ ಬದುಕಿನ ಅತ್ಯಂತ ಆಪ್ತ ಸ್ನೇಹಿತೆಯ ಮನೆ ಇದ್ದದ್ದು ಬೆಂಗಳೂರಿನ ಜಯನಗರದಲ್ಲಿ. ಎರಡು ಮಕ್ಕಳನ್ನು ಹೆತ್ತು ಇನ್ನೆರಡು ಮಕ್ಕಳನ್ನು ದತ್ತು ತೆಗೆದುಕೊಂಡಿದ್ದ ಆಕೆ ನನಗಿಂತ ಒಂದೂವರೆ ದಶಕದಷ್ಟು ಹಿರಿಯಳು. ಸ್ನೇಹಕ್ಕೆ ವಯಸ್ಸಿನ ಹಂಗಿಲ್ಲ ಎಂದು ಯಾವತ್ತೂ ನಂಬಿದವಳು ನಾನು. ಇಲ್ಲದಿದ್ದರೆ ಹರಿ ಹೇಗೆ ನನ್ನ ಸಂಗಾತಿಯಾಗುತ್ತಿದ್ದ?

ಇರಲಿ, ಆಕೆಯ ಮನೆಯ ಔಟ್ ಹೌಸಿನಲ್ಲಿ ನಾನು ಬಾಡಿಗೆಗೆ ಇದ್ದೆ. ಕಾಫಿತೋಟದ ಹರವಾದ ಮನೆಯಲ್ಲಿ ಬೆಳೆದ ನೀವು ಔಟ್ ಹೌಸಿನಲ್ಲಿ? ಎಂದು ತುಂಬ ಮಂದಿ ಹುಬ್ಬೇರಿಸಿದ್ದರು. ನನಗೆ ಆಕೆಯ ಹತ್ತಿರದಲ್ಲಿ ಇರಬೇಕಿತ್ತು. ಅವಳ ಕಷ್ಟಸುಖದಲ್ಲಿ ಆತ್ಮೀಯವಾಗಿ ಪಾಲುಗೊಳ್ಳಬೇಕಿತ್ತು. ದಿನಾ ನನ್ನ ಕಾರಿನಲ್ಲಿ ಅವಳನ್ನು ಕರೆದುಕೊಂಡು ಹೋಗಿ ಕರೆತರುವುದು ನಾನು ತುಂಬ ಖುಷಿಯಿಂದ ಮಾಡುತ್ತಿದ್ದ ಕೆಲಸ. ಯಾವ ವಿಶ್ವವಿದ್ಯಾಲಯವೂ ಕಲಿಸಲಾಗದ ಬದುಕಿನ ಪಾಠಗಳನ್ನು ನನಗೆ ಹೇಳಿಕೊಟ್ಟವಳು ಅವಳು, ರಮಣಿ!

ಅಲ್ಲಿದ್ದಾಗ ಮನೆಕೆಲಸಕ್ಕೆ ಬರುತ್ತಿದ್ದ ಹೆಂಗಸಿನ ಸುಮಾರು ನಾಲ್ಕು ವರ್ಷದ ಮಗು ಒಮ್ಮೆ ಬಂದಿತ್ತು. ಅದೇನು ಅರಳು ಹುರಿದಂಥ ಮಾತು! ಆ ಧೈರ್ಯ, ಆತ್ಮವಿಶ್ವಾಸ, ನಿರ್ಭಿಡೆಯ ಮಾತು ನನ್ನನ್ನು ಮೈಮರೆಸುತ್ತಿತ್ತು. ಮನೆಯ ಎದುರಿಗಿದ್ದ ಪುಟ್ಟ ಜಾಗದಲ್ಲಿ ಹೂವಿನ ಪಾತಿ ಮಾಡಿ ಏನಾದರೂ ಬೆಳೆಯಲು ಪ್ರಯತ್ನಿಸುತ್ತಿದ್ದೆ. ಅವಳಿಗೆ ಅದರಲ್ಲಿ ನನಗೆ ಸಹಾಯ ಮಾಡಲು ಮಹಾ ಖುಷಿ.

ನಿಮ್ಮ ಮನೆಯಲ್ಲೂ ಪಾತಿ ಮಾಡಿದಾರಾ? ಎಂದು ಸುಮ್ಮನೆ ಮಾತಿಗೆ ಒಮ್ಮೆ ಕೇಳಿದ್ದೆ. ನಮ್ಮನೆ ಮುಂದೆ ಲಾಲ್ ಬಾಗೇ ಇದೆಯಲ್ಲ? ಎಂದು ಫಟ್ಟನೆ ಹೇಳಿದಾಗ ಬೆಚ್ಚಿಬೀಳುವ ಹಾಗಾಯಿತು.

ಅದೊಂದು ಮಹಾವಾಕ್ಯದಂತೆ ಕೇಳಿಸಿತ್ತು.

ಲಾಲ್ ಬಾಗಿನ ಎದುರು ಇರುವ ಸ್ಲಮ್ಮಿನಲ್ಲಿ ಅವರದ್ದು ಜೋಪಡಿ ವಾಸ. ಹೈದರ್ ಅಲಿ ಟಿಪ್ಪು ಸುಲ್ತಾನರು ದೇಶ



ವಿದೇಶಗಳಿಂದ ತರಿಸಿ ಬೆಳೆಸಿರುವ ಅಪರೂಪದ ವೃಕ್ಷಗಳ ನಡುವೆಯೇ ಬೆಳೆಯುತ್ತಿರುವ ಮಗು ಅವಳು.

ನಾನು ಪಾಠ ಮಾಡುವ ಶೇಕ್ಸ್‌ಪಿರ್ ನೆನಪಾಗಿದ್ದ. ಅತ್ಯಂತ ಗಹನವಾದ ಸತ್ಯಗಳನ್ನು ಅವ ತುಂಬ ಗೌಣವಾದ ಪಾತ್ರಗಳ ಬಾಯಲ್ಲಿ ಹೇಳಿಸುತ್ತಾನೆ.

ಮಗು ಬೇಡವೇ ಎಂದು ಹಲವು ಮಂದಿ ಕೇಳಿದ್ದರು. ಭೂಮಿಯ ಮೇಲೆ ಎಷ್ಟೊಂದು ಮಕ್ಕಳಿವೆಯಲ್ಲ? ಎಂದು ಉತ್ತರಿಸಿದಾಗ ನನ್ನ ತಲೆಯಲ್ಲಿ ಇದ್ದದ್ದು ಈ ಹುಡುಗಿಯ ಮಾತೇ. ವೆಲ್ಲಿಂಗ್ಟನ್ನಿನ ನಮ್ಮ ಮೂರಂತಸ್ತಿನ ಮನೆಯಲ್ಲಿ ಒಂದಕ್ಕಿಂತ ಹೆಚ್ಚು ಮಕ್ಕಳಿಗೆ ಜಾಗವಿತ್ತು. ಕಿವಿನಾಡಿನ ಸರಕಾರ ಹಲವಾರು ಮನೆಭೇಟಿ, ಮತ್ತು ಸಂದರ್ಶನಗಳ ನಂತರ ಹರಿ ಮತ್ತು ನಾನು ವಿದ್ಯಾಭ್ಯಾಸದ ಮಟ್ಟದಲ್ಲಿ, ಬದುಕಿನ ಶೈಲಿಯಲ್ಲಿ, ಮತ್ತು ಆರ್ಥಿಕ ಮಟ್ಟದಲ್ಲಿ ದತ್ತು ತೆಗೆದುಕೊಳ್ಳಲು ಎಂದು ಶರಾ ಬರೆದು ಒಪ್ಪಿಗೆ ನೀಡಿತ್ತು. ಯುದ್ಧದಿಂದ ನಲುಗಿದ್ದ ದೇಶದ ಅಥವಾ ನಿರಾಶ್ರಿತ ಸಮುದಾಯದ ಮಗು ಎಂದು ನಿರ್ಧರಿಸಿದ್ದೆವು. ಆದರೆ ದತ್ತು ತೆಗೆದುಕೊಳ್ಳುವ ಪ್ರೊಸೀಜರ್ ಮಾತ್ರ ಸರಳವೇ ಅಲ್ಲ. ಅದು ಎರಡು ದೇಶಗಳ ನಡುವೆ ನಡೆಯಬೇಕಾದ ಕಾಂಪ್ಲಿಕೇಟೆಡ್ ಪೇಪರ್ ವರ್ಕ್. ಶಕ್ತಿ ಮೀರಿ ಪ್ರಯತ್ನಿಸಿ ನಾನು ಹರಿ ಕೈ ಚೆಲ್ಲಿದ್ದೆವು.

ಮಹಾವಾಕ್ಯ ಹೊಮ್ಮುವುದು ಎಲ್ಲಿ? ತಲುಪುವುದು ಹೇಗೆ? ಋಷಿಗಳೇ ಆಗಬೇಕೆ?

ಭಾಷೆಯ ಅನಂತ ಸಾಧ್ಯತೆಗೆ ಮತ್ತೊಮ್ಮೆ ವಿಸ್ಮಯ ಮೂಡಿತ್ತು

**– ಸುಕನ್ಯಾ** ಕನಾರಳ್ಳಿ

## ಸೇನೆಯಲ್ಲಿ ಜಾತಿ: ರಾಹುಲ್ ಹೇಳಿಕೆಗೆ ರಾಜನಾಥ್ ಖಂಡನೆ

• ಪ್ರಜೋದಯ ವರದಿ

**ನವದೆಹಲಿ:** ನಮ್ಮ ಸಶಸ್ತ್ರ ಪಡೆಗಳಲ್ಲಿ ಎಲ್ಲಾ ಜಾತಿ, ಧರ್ಮ, ಪಂಗಡದವರು ಇದ್ದಾರೆ. ಆದ್ರೆ ಅವರಲ್ಲಿ ಎಂದಿಗೂ ತಾರತಮ್ಯವಿಲ್ಲ. ಸೇನೆಯನ್ನ ಜಾತಿ ರಾಜಕೀಯಕ್ಕೆ ಎಳೆದು ತರೋದು ದೇಶ ಒಡೆಯುವ ಕುತಂತ್ರ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ರಾಹುಲ್ ಗಾಂಧಿ ವಿರುದ್ಧ ಹರಿಹಾಯ್ದರು.

ಮಾಧ್ಯಮವೊಂದರಲ್ಲಿ ಮಾತನಾಡಿದ ಅವರು, ಶೆ. 10% ಇರುವ ಜನರು ಸೇನೆಯನ್ನ ನಿಯಂತ್ರಿಸುತ್ತಿದ್ದಾರೆ ಎಂಬ ರಾಹುಲ್ ಗಾಂಧಿ ಹೇಳಿಕೆಯನ್ನ ತೀವ್ರವಾಗಿ ಖಂಡಿಸಿದರು. ಇದು ರಾಹುಲ್ ಗಾಂಧಿ ಅವರ ಬೇಜವಾಬ್ದಾರಿ ತನದ ಹೇಳಿಕೆ. ಜಾತಿ ರಾಜಕೀಯಕ್ಕೆ ಸೇನೆಯನ್ನು ಎಳೆದು ತರುತ್ತಿರುವುದು ವಿಭಜಿಸುವ ರಾಜಕೀಯ ಕುತಂತ್ರ ಎಂದು ವಾಗ್ದಾಳಿ ನಡೆಸಿದರು.

ರಾಹುಲ್ ಗಾಂಧಿ ಜನರ ದಾರಿ ತಪ್ಪಿಸುವ, ಆಧಾರ ರಹಿತ ಹೇಳಿಕೆಗಳನ್ನ ನೀಡುವುದು ಅಭ್ಯಾಸ ಆಗಿಬಿಟ್ಟಿದೆ ಎಂದು ಕಿಡಿಕಾರಿದರು.

# ಕೀರ್ತನೆಗಳಿಂದಲೇ ಏಳಿಗೆಗೆ ಶ್ರಮಿಸಿದ ಕನಕದಾಸರು

### ಕನಕ ಭವನ ನಿರ್ಮಾಣಕ್ಕೆ 35 ಲಕ್ಷ ರೂ. ಅನುದಾನ: ಕನಕದಾಸ ಜಯಂತಿಯಲ್ಲಿ ಶಾಸಕ ಸಿ.ಎನ್.ಬಾಲಕೃಷ್ಣ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಹಲವು ಕೀರ್ತನೆಗಳ ಮೂಲಕ ಸಮಾಜದ ಅಂಕು-ಡೊಂಕುಗಳನ್ನು ತಿದ್ದುವಲ್ಲಿ ಶ್ರಮಿಸಿದ ಕೀರ್ತಿ ಹಾಗು ಹೆಗ್ಗಳಿಕೆ ಕನಕದಾಸರಿಗೆ ಸಲ್ಲುತ್ತದೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ತಾಲ್ಲೂಕು ಕಚೇರಿ ಆವರಣದಲ್ಲಿ ತಾಲ್ಲೂಕು ಆಡಳಿತ ಹಾಗು ಕುರುಬರ ಸಂಘದಿಂದ ಆಯೋಜಿಸಿದ್ದ ಭಕ್ತ ಕನಕದಾಸರ ಜಯಂತಿ ಉತ್ಸವದಲ್ಲಿ ಮಾತನಾಡಿ, ಪಟ್ಟಣದಲ್ಲಿ ಕನಕ ಭವನ ನಿರ್ಮಾಣಗೊಳ್ಳುತ್ತಿದ್ದು 35 ಲಕ್ಷ ರೂ. ಅನುದಾನ ಕಲ್ಪಿಸಲಾಗಿದೆ. ಏಪ್ರಿಲ್ ತಿಂಗಳಲ್ಲಿ ಮತ್ತೆ 15 ಲಕ್ಷ ರೂ. ಕಲ್ಪಿಸಲಿದ್ದು ನಂತರ 10 ಲಕ್ಷ ರೂ. ಅನುದಾನವನ್ನು ಲೋಕಾರ್ಪಣೆ ವೇಳೆಯ ಒಳಗೆ ಒದಗಿಸಲಾಗುವುದು ಎಂದು ಭರವಸೆ ನೀಡಿದರು.

ಪುಸ್ತಕಗಳನ್ನು ಸ್ನೇಹಿತರನ್ನಾಗಿ ಸ್ವೀಕರಿಸಿ ಓದುವ ಅಭ್ಯಾಸ ರೂಢಿಸಿಕೊಳ್ಳಬೇಕು. ಅದರಿಂದ ಜ್ಞಾನ ಸಂಪತ್ತು ಬೆಳೆಯಲಿದ್ದು ಸಮಾಜದ ಏಳಿಗೆ ಹಾಗು ಸುಧಾರಣೆಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ಉಪನ್ಯಾಸಕ ಮೈಲಾರಪ್ಪ ಮಾತನಾಡಿ, ತಮಗೆ ಸಿಕ್ಕ ಕನಕಗಳನ್ನು ದೇಗುಲಗಳ ನಿರ್ಮಾಣಕ್ಕೆ ಹಾಗು ಬಡವರಿಗೆ ದಾನವಾಗಿ ನೀಡಿದ್ದರಿಂದ ಅವರಿಗೆ ಕನಕದಾಸ ಎಂಬ ಬಿರುದು ಬಂದಿದೆ. ಕನಕದಾಸರು ಒಂದೇ ಸಮುದಾಯಕ್ಕೆ ಸೀಮಿತರಲ್ಲ. ಎಲ್ಲಾ ವರ್ಗದ ಜನರಿಗೂ ಸಮಾನತೆ ಸಿಗಬೇಕು ಎಂಬುದು ಅವರ ಕೀರ್ತನೆಗಳ ಸಾರ ಎಂದು ಹೇಳಿದರು.

ಕನಕದಾಸರು 316 ಕೀರ್ತನೆ ಹಾಗು ರಾಮಧಾನ್ಯ ಮಂತ್ರ, ನರಸಿಂಹ ಸ್ತೋತ್ರ ಹಾಗು ಮೋಹನ ತರಂಗಿಣಿ ಸೇರಿ ಸಾಕಷ್ಟು ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಅವರ ತತ್ವ ಆದರ್ಶಗಳನ್ನು ಮೈಗೂಡಿಸಿಕೊಂಡು ಮುನ್ನಡೆದರೆ ಸಮಾಜ ಪರಿವರ್ತನೆಯೊಂದಿಗೆ ಸುಧಾರಣೆ ಕಾಣಲಿದೆ ಎಂದು ತಿಳಿಸಿದರು.

ಮುಖಂಡ ಪಿ.ಕೆ.ಮಂಜೇಗೌಡ ಮಾತನಾಡಿ, ಕನಕ ಭವನ ನಿರ್ಮಾಣಕ್ಕೆ ಸರ್ಕಾರದ ಅನುದಾನಗಳ ಜೊತೆಗೆ ತಾಲ್ಲೂಕಿನ ಸಮಸ್ತ ಕುರುಬ ಸಮುದಾಯದ ತಲಾ ಕುಟುಂಬದಿಂದ 1001 ರೂ. ದೇಣಿಗೆ ಕಲ್ಪಿಸುವಂತೆ ವ್ಯವಸ್ಥೆ ಮಾಡಲಾಗಿದೆ. ಕ್ಷೇತ್ರದ ಶಾಸಕರು ಮತ್ತಷ್ಟು ಅನುದಾನ ಕಲ್ಪಿಸುವ ಮೂಲಕ ಹೆಚ್ಚಿನ ಬಲ ತುಂಬುವ ಭರವಸೆ ನೀಡಿದ್ದಾರೆ. ಎಲ್ಲರೂ ಒಗ್ಗೂಡಿ ಲೋಕಾರ್ಪಣೆಗೆ ಶ್ರಮಿಸೋಣ ಎಂದು ಕರೆ ನೀಡಿದರು.

ತಹಶೀಲ್ದಾರ್ ಶಂಕರಪ್ಪ ಅವರು ಕನಕದಾಸರ ಜೀವನ ಚರಿತ್ರೆಯ ಬಗ್ಗೆ ಗುಣಗಾನ ಮಾಡಿದರು. ಕುರುಬರ ಕಾಳೇನಹಳ್ಳಿ ಗ್ರಾಮದ ಯುವಕರು ಜೋಡಿ ಟಗರುಗಳನ್ನು ಪ್ರದರ್ಶಿಸಿದ್ದು ಗಮನ ಸೆಳೆಯಿತು. ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ಟಿಎಪಿಸಿಎಂಎಸ್ ಅಧ್ಯಕ್ಷ ಮೆಡಿಕಲ್ ವೆಂಕಟೇಶ್, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮೂರ್ತಿ, ತಾಲ್ಲೂಕು ಕುರುಬರ ಸಂಘದ ಅಧ್ಯಕ್ಷ ರಮೇಶ್, ಗ್ಯಾರಂಟಿ ಸಮಿತಿ ಅಧ್ಯಕ್ಷ ಎಲ್.ಪಿ. ಪ್ರಕಾಶ್, ಕೆಡಿಪಿ ಸದಸ್ಯ ಕಬ್ಬಾಳು ಮಹೇಶ್, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಜಿ.ಆರ್.ಹರೀಶ್, ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಎನ್.ದೀಪಾ, ಶಿಕ್ಷಣ ಸಮನ್ವಯಾಧಿಕಾರಿ ಅನಿಲ್ ಹಾಗು ಇತರರಿದ್ದರು.

## ಜೈನಕಾಶಿಯ ಇತಿಹಾಸ ಪುಟಕ್ಕೆ ಮತ್ತೆರಡು ಹಿರಿಮೆ ಸೇರ್ಪಡೆ

» ಮೊದಲನೇ ಪುಟದಿಂದ



ದಿನ ಕಳೆದಂತೆ ಅಂತರ್ಮುಖಿಯಾಗಿ ವೈರಾಗ್ಯದ ಚರ್ಚೆಯಲ್ಲಿದ್ದೂ ಮುನಿಶ್ರೀ ಆದಿಸಾಗರ (ಭೋಸೆ) ರವರ ಸಾನಿಧ್ಯದಲ್ಲಿದ್ದು, ಆತ್ಮ ಕಲ್ಯಾಣದ ಹಾದಿ ಹಿಡಿದು ಆಹಾರ ಕ್ರಮ, ಶಯನ ಕ್ರಮ, ವಿಹಾರಗಳಲ್ಲಿ ತ್ಯಾಗಿಗಳ ಜೀವನ ಕ್ರಮ ಅಳವಡಿಸಿಕೊಂಡು ಪ್ರತಿಮಾಧಾರಿಗಳೆನಿಸಿದರು.

ಸಾತಗೌಡರು ದಿಗಂಬರ ದೀಕ್ಷೆ ಪಡೆಯುವ ಪೂರ್ವದಲ್ಲಿ ಕ್ರಿ.ಶ. 1912ರಲ್ಲಿ ಶ್ರೀಕ್ಷೇತ್ರ ಶ್ರವಣಬೆಳಗೊಳಕ್ಕೆ ಆಗಮಿಸಿ ಭಗವಾನ್ ಶ್ರೀ ಬಾಹುಬಲಿ ಸ್ವಾಮಿಯ ದರ್ಶನ ಪಡೆದು ಅಂದಿನ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಜೊತೆ ಧರ್ಮ ಚರ್ಚೆಯನ್ನು ನಡೆಸಿ ವೈರಾಗ್ಯ ನೆಲೆಯನ್ನು ಉತ್ತಮ ಪಡಿಸಿಕೊಂಡು ಉತ್ತರ ಕರ್ನಾಟಕದೆಡೆಗೆ ವಿಹಾರ ಮಾಡಿದರು.

ಮುಂದೆ ದಿಗಂಬರ ಮುನಿಗಳು ವಿರಳವಾಗಿದ್ದ ಕಾಲದಲ್ಲಿ ತ್ಯಾಗಿ ಜೀವನದ ಅಸ್ತಂ ಹಿಡಿದೂ ಭವ ಸಾಮ್ರಾಜ್ಯವನ್ನು ಗೆಲ್ಲಲೂ ಸಿದ್ಧರಾಗಿ ಧರ್ಮ ರಕ್ಷಣೆಯತ್ತ ಮುನ್ನಡೆದು ಸಾಂಸಾರಿಕ ಬಂಧನಗಳನ್ನು ಕಾಲ ಕ್ರಮೇಣ ಕಳಚಿ, ಸಾತಗೌಡರು 42ನೇ ವಯಸ್ಸಿನಲ್ಲಿ ಕ್ರಿ.ಶ. 1915 ಜೂನ್ 25ರ ಜೇಷ್ಠ ಶುಕ್ಲ ತ್ರಯೋದಶಿಯಂದು ದೇವೇಂದ್ರ ಕೀರ್ತಿ ಮುನಿಗಳಿಂದ ಉತ್ತೂರು ಪಂಚ ಕಲ್ಯಾಣ ಸಂದರ್ಭದಲ್ಲಿ ಕ್ಷುಲ್ಲಕ ದೀಕ್ಷೆ ಪಡೆದು ಕ್ಷುಲ್ಲಕ ಶ್ರೀ ಶಾಂತಿಸಾಗರರು ಎನಿಸಿದರು.

ಶಾಂತಿಸಾಗರರು ಮುಂದೆ ಮೂರು ವರ್ಷಗಳ ಅವರ್ಣನೀಯ ಎಡರು-ತೊಡರುಗಳನ್ನು ಎದುರಿಸುತ್ತಾ ಆಗ ಮೋಕ್ಷ ಮಾರ್ಗದಲ್ಲಿ ನಡೆದು ತಮ್ಮ ಧ್ಯಾನ-ಅಧ್ಯಯನಗಳ ಮೂಲಕ ಚಾರಿತ್ರವನ್ನು ಬಲಪಡಿಸಿಕೊಳ್ಳುತ್ತಾ ಆತ್ಮಶಕ್ತಿಯನ್ನು ವೃದ್ಧಿಗೊಳಿಸಿ ಜ್ವಾಲಾಮುಖಿಯಂತೆ ಸಿಡಿಯದೇ ಶಾಂತಿಯ ಸಾಗರವೇ ಆಗಿ ಸಮ್ಯಕ್ ತತ್ವರೂಪಿ ಅಮೃತಕಳಶವನ್ನು ಎತ್ತಿ ಹಿಡಿದರು.

ಶಾಂತಿ ಸಾಗರರು ಗಿರಿನಾರ್ ಯಾತ್ರೆ ಕೈಗೊಂಡು 1920ರ ಮಾ.2 ರಂದು ಸ್ವತ ಮುನಿ ದೀಕ್ಷೆ ಪಡೆದು ಜೈನ ಸಮಾಜಕ್ಕೆ ಮುನಿಚರ್ಯೆಯ ದರ್ಶನ ಮಾಡಿಸಿದರು. 1924ರ ಅ.4ರಂದು ಆಚಾರ್ಯ ಪಟ್ಟಕ್ಕೇರಿದರು. 1925ರಲ್ಲಿ ಶ್ರವಣಬೆಳಗೊಳದಲ್ಲಿ ನಡೆದ ಭಗವಾನ್ ಶ್ರೀ ಗೊಮ್ಮಟೇಶ್ವರ ಬಾಹುಬಲಿ ಸ್ವಾಮಿಯ ಮಹಾಮಸ್ತಕಾಭಿಷೇಕ ಮಹೋತ್ಸವದ ಸಾನಿಧ್ಯ ವಹಿಸಿ ಮಹೋತ್ಸವದ ಯಶಸ್ವಿಗೆ ಕಾರಣೀಭೂತರಾದರು.

ಅವರು ಶ್ರವಣಬೆಳಗೊಳಕ್ಕೆ ಬಂದು ಇಂದಿಗೆ 100 ವರ್ಷಗಳು ಕಳೆದಿರುವ ಹಿನ್ನಲೆಯಲ್ಲಿ ಹಾಗು ಅವರಿಂದ ಜೈನ ಧರ್ಮದ ಮುನಿ ಪರಂಪರೆ ಗಟ್ಟಿಯಾಗಿದ್ದು ಇಂದಿಗೂ ಅವರನ್ನು ಸ್ಮರಿಸುವಂತೆ ಮಾಡಿದೆ. ಅವರ ಹೆಸರನ್ನು ಇತಿಹಾಸದಲ್ಲಿ ಚಿರಸ್ಥಾಯಿಯಾಗಿಸುವ ಉದ್ದೇಶದಿಂದ ಅವರ ಪ್ರತಿಮೆ ಸ್ಥಾಪನೆ ಮಾಡಿ ಕ್ಷೇತ್ರದಲ್ಲಿ ಅವರ ಹೆಸರಿನಲ್ಲಿ ನಾಲ್ಕನೇ ಬೆಟ್ಟದ ಅನಾವರಣ ಮಾಡಲಾಗುತ್ತಿದೆ.

## ಸಂತ ಕನಕದಾಸರು ಸಮಾನತೆಯ ಹರಿಕಾರ: ಕೆಎಂಶಿ

• ಪ್ರಜೋದಯ ವರದಿ



**ಅರಸೀಕೆರೆ:** ವಿಶ್ವದಾದ್ಯಂತ ಸಮಾನತೆಯ ಸಂದೇಶವನ್ನು ಸಾರಿರುವ ಸಂತ ಕನಕದಾಸರು ಸಮಾನತೆಯ ಹರಿಕಾರ ಆಗುವುದರೊಂದಿಗೆ ಕನ್ನಡ ನಾಡಿಗೆ ವಿಶೇಷ ಸ್ಥಾನ ಮತ್ತು ಗೌರವ ತಂದಿದ್ದಾರೆ ಎಂದು ಗೃಹಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಅವರು ಹೇಳಿದರು.

ತಾಲ್ಲೂಕು ಕಚೇರಿ ಕಂದಾಯ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕನಕದಾಸರ 538ನೇ ಜಯಂತಿ ಆಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕುರುಬ ಸಮಾಜವು ಸಂಘಟನೆಯಾದರೆ ಮಾತ್ರ ವಿವಿಧ ವಿವಿಧ ಕ್ಷೇತ್ರಗಳಲ್ಲಿ ಸಾಧಿಸಲು ಸಾಧ್ಯ. ಈ ಸಮಾಜದ ಮೂಲಕ ದೈವಾಂಶ ಸಂಭೂತರಾದ ಕನಕದಾಸರ ಅನುಯಾಯಿಗಳಾದ ಕುರುಬರೇ ಅದೃಷ್ಟವಂತರು ಎಂದರು.

ಮಹಾಭಾರತ ಮತ್ತು ರಾಮಾಯಣದಲ್ಲೂ ಜಾತಿ ವ್ಯವಸ್ಥೆ ಇದ್ದು, ದ್ವಾಪಾರಯುಗ ತ್ರೇತಾಯುಗ ಸೇರಿ ಪ್ರಸ್ತುತ ಕಲಿಯುಗದಲ್ಲೂ ಜಾತಿ ವ್ಯವಸ್ಥೆ ಮುಂದುವರೆದಿದೆ. 12ನೇ ಶತಮಾನದಲ್ಲಿ ದಿವ್ಯ ಜ್ಯೋತಿಯಾಗಿ ಅವತರಿಸಿದ ಬಸವೇಶ್ವರರ ಪ್ರಭಾವದಿಂದ ಪ್ರೇರಿತರಾದವರಲ್ಲಿ ಕನಕದಾಸರು ಒಬ್ಬರಾಗಿದ್ದರು. ಧಾರ್ಮಿಕ ಕ್ಷೇತ್ರಗಳಲ್ಲಿ ಭಗವಂತನನ್ನು ಸಾಕ್ಷಿಯಾಗಿಟ್ಟುಕೊಂಡು ವಚನ, ದಾಸರ ಪದಗಳನ್ನು ರಚಿಸಿ ನೊಂದ ಸಮಾಜಗಳನ್ನು ಒಗ್ಗೂಡಿಸಿದ ಹೆಗ್ಗಳಿಕೆ ಇವರಿಗೆ ಸಲ್ಲುತ್ತದೆ ಎಂದು ಹೇಳಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ರಚಿಸಿದ ಸಂವಿಧಾನದಲ್ಲಿ ಬಸವೇಶ್ವರ ಮತ್ತು ಕನಕದಾಸರ ಸಂದೇಶಗಳನ್ನು ಅಳವಡಿಸಿದ್ದಾರೆ. ಪ್ರಸ್ತುತ ದಿನಗಳಲ್ಲಿ ಜಾತಿ ಜಾತಿಗಳ ಮಧ್ಯೆ ಇರುವ ಅಂತರವನ್ನು ದೂರ ಮಾಡಿ, ಜಾತ್ಯಾತೀತವಾಗಿ ಒಂದಾಗಬೇಕಿದೆ. ಆರ್ಥಿಕವಾಗಿ, ಸಾಮಾಜಿಕ ಸೇರಿ ವಿವಿಧ ಕ್ಷೇತ್ರಗಳಲ್ಲಿ ಹಿಂದುಳಿದವರಿಗೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಹೆಜ್ಜೆ ಇಡಬೇಕಿದ್ದು, ಹಿಂದುಳಿದ ವರ್ಗಗಳಿಗೆ ಆಯೋಗ ರಚಿಸಿ ಮೀಸಲಾತಿ ನೀಡಿದ ಹೆಗ್ಗಳಿಗೆ ಡಿ.ದೇವರಾಜ ಅರಸ್ ಇವರಿಗೆ ಸಲ್ಲುತ್ತದೆ ಎಂದರು.

ತಹಶೀಲ್ದಾರ್ ಎಂ.ಜಿ.ಸಂತೋಷ್ ಕುಮಾರ್, ತಾಲ್ಲೂಕು ಕುರುಬ ಸಮಾಜದ ಅಧ್ಯಕ್ಷ ತೊಂಡಗನಹಳ್ಳಿ ಕೃಷ್ಣಮೂರ್ತಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಗೀಜಿಹಳ್ಳಿ ಧರ್ಮಶೇಖರ್, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಬಿಳಿಚೌಡಯ್ಯ, ಅರಸೀಕೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಾಣಾವರ ಶ್ರೀನಿವಾಸ್ ಮಾತನಾಡಿದರು.

ಅಹಲ್ಯ ಬಾಯಿ ಓಳಲ್ಕರ್ ಮಹಿಳಾ ವಿವಿದ್ದೇಶ ಸಹಕಾರ ಸಂಘದ ಗೌರವಾಧ್ಯಕ್ಷೆ ಯಶೋದಮ್ಮ, ಕನಕ ನೌಕರರ ಸಂಘದ ಅಧ್ಯಕ್ಷ ಗುತ್ತಿನಕೆರೆ ಬಸವರಾಜು, ಸಂಗೊಳ್ಳಿ ರಾಯಣ್ಣ ಬ್ಯಾಂಕ್ ಅಧ್ಯಕ್ಷೆ ಶೃತಿಮನು, ಕನಕದಾಸರು ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಆಚರಣಾ ಸಮಿತಿ ಅಧ್ಯಕ್ಷ ಹರೀಶ್, ಶಿಕ್ಷಣ ಇಲಾಖೆ ಇಓ ಮೋಹನ್ ಕುಮಾರ್, ತಾ.ಪಂ ಇಓ ಗಂಗಣ್ಣ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ವಿಶ್ವಕ್ಕೆ ಮಾನವತ್ವದ ಸಂದೇಶ ನೀಡಿದ ಶ್ರೇಷ್ಟ ಕನಕದಾಸರು



**ಅರಕಲಗೂಡು:** ವಿಶ್ವಕ್ಕೆ ಮಾನವತ್ವದ ಸಂದೇಶ ನೀಡಿ ಸಮಾಜವನ್ನು ತಿದ್ದಿದ ಕನಕದಾಸರು ಶ್ರೇಷ್ಠ ದಾರ್ಶನಿಕ ಎಂದು ಸಂಸದ ಶ್ರೇಯಸ್ ಪಟೇಲ್ ಹೇಳಿದರು.

ಪಟ್ಟಣದ ಸಂತೆಮರೂರು ಸರ್ಕಲ್ ನ ಕನಕ ಪ್ರತಿಮೆ ಬಳಿ ಶನಿವಾರ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲೂಕು ಕುರುಬ ಸಮಾಜದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕನಕ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಸಮಾಜ ಸುಧಾರಣೆಗೆ ಶ್ರಮಿಸಿದ ದಾಸ ಶ್ರೇಷ್ಠರಲ್ಲಿ ಕನಕದಾಸರು ಅಗ್ರಮಾನ್ಯರಾಗಿದ್ದರು ಎಂದರು.

ತಹಸೀಲ್ದಾರ್ ಕೆ.ಸಿ. ಸೌಮ್ಯ, ಪಪಂ ಅಧ್ಯಕ್ಷ ಪ್ರದೀಪ್ ಕುಮಾರ್, ಮಾಜಿ ಅಧ್ಯಕ್ಷ ಕೃಷ್ಣಯ್ಯ, ತಾಪಂ ಇಓ ಶ್ರೀನಿವಾಸ್, ಬಿಇಓ ಕೆ.ಪಿ. ನಾರಾಯಣ, ಮುಖಂಡರಾದ ಮುತ್ತಿಗೆ ರಮೇಶ್, ಎಚ್. ಮಾದೇಶ್, ಎಸ್.ಪಿ. ರೇವಣ್ಣ, ದಿವಾಕರಗೌಡ, ಪ್ರಶಾಂತ್ ಕುಮ್ಾರ್, ಬೀರಪ್ಪ, ರಾಮೇಗೌಡ, ಸತೀಶ್, ಶಶಿಕುಮಾರ್, ಶಿವಕುಮಾರ್ ಇತರರು ಉಪಸ್ಥಿತರಿದ್ದರು.

## ಓದುವುದು ಕೇವಲ ಜ್ಞಾನಕಲ್ಲ, ಅನುಭವ, ಅರಿವಿಗೆ

ಲೇಖಕಿ ಶೈಲಜಾ ಹಾಸನ ಅವರು ಮಾತನಾಡಿ, ಬದುಕಿನಲ್ಲಿ ಆಗದ ಅನುಭವಗಳು ಪುಸ್ತಕದ ಮೂಲಕ ತಿಳಿಯುತ್ತವೆ. ಈ ಸಾಲು ಓದಿನ ಮಹತ್ವವನ್ನು ತುಂಬಾ ಸುಂದರವಾಗಿ ವ್ಯಕ್ತಪಡಿ ಸುತ್ತದೆ. ನಾವು ಬದುಕಿನಲ್ಲಿ ಎಲ್ಲವನ್ನೂ ಅನುಭವಿಸಲು ಸಾಧ್ಯವಿಲ್ಲ. ಎಲ್ಲಾ ಕಾಲ, ದೇಶ, ಜನರ ಜೀವನವನ್ನು ನಾವು ನೋಡಲು ಸಾಧ್ಯವಿಲ್ಲ. ಆದರೆ ಪುಸ್ತಕಗಳು ಆ ಅನುಭವಗಳ ಸೇತುವೆಯಂತೆ ಕೆಲಸ ಮಾಡುತ್ತವೆ ಎಂದರು.

ದೂರದ ದೇಶದ ಸಂಸ್ಕೃತಿ, ಆಲೋಚನೆಗಳನ್ನು ಅರಿಯಬಹುದು. ಇತಿಹಾಸದ ಘಟನೆ ಗಳನ್ನು ಬದುಕಿನಂತೆ ಅನುಭವಿಸಬಹುದು. ಮಹಾನ್ ವ್ಯಕ್ತಿಗಳ ಹಾದಿಯಲ್ಲಿ ನಡೆದ ಭಾವನೆ, ತ್ಯಾಗ, ಹೋರಾಟ ತಿಳಿಯಬಹುದು. ಯುವ ಜನತೆ ದೇಶದ ಭವಿಷ್ಯ. ಅವರು ಚಿಂತನೆಯಿಂದ, ಜ್ಞಾನದಿಂದ ಮತ್ತು ವಿವೇಕದಿಂದ ಬೆಳೆಯಬೇಕಾದರೆ ಓದಿನ ಅಭ್ಯಾಸ ಅತ್ಯಾವಶ್ಯಕ. ಇಂದಿನ ಯುವಕರು ತಂತ್ರಜ್ಞಾನದಲ್ಲಿ ಮುಂದುನಿಂತರೂ, ಪುಸ್ತಕ ಓದುವ ಅಭ್ಯಾಸ ನಿಧಾನವಾಗಿ ಕಡಿಮೆಯಾಗುತ್ತಿದೆ. ಪುಸ್ತಕ ಓದಿದರೆ ಮನಸ್ಸು ವಿಶಾಲವಾಗಿ ವಿಚಾರ ಶಕ್ತಿ ತೀಕ್ಷ್ಣವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಬಿ.ಆರ್ .ಬೊಮ್ಮೇಗೌಡ ಅವರು ಮಾತನಾಡಿ, ಇಂದಿನವರಲ್ಲಿ ಪುಸ್ತಕ ಓದುವ ಹವ್ಯಾಸವನ್ನು ಬೆಳೆಸುವಲ್ಲಿ ನಾವು ಹಿಂದೆ ಬಿದ್ದಿದ್ದೇವೆ. ಮೊಬೈಲ್ ಪುಸ್ತಕದ ಜಾಗ ಆವರಿಸಿ ಬಿಟ್ಟಿದೆ. ಈ ನಿಟ್ಟಿನಲ್ಲಿ ಪುಸ್ತಕಗಳನ್ನು ಓದುವ ಬಗೆಗೆ ಕಿರಿಯರಲ್ಲಿ ಜಾಗೃತಿ ಬಿತ್ತಬೇಕಾದ ಕೆಲಸವಾಗಬೇಕಿದೆ ಎಂದು ಮನವಿ ಮಾಡಿದರು.

ದೇಶದ ಅತಿದೊಡ್ಡ ಪುಸ್ತಕ ಮಳಿಗೆಗಳಲ್ಲಿ ಒಂದಾದ ಸಪ್ನ ಹಾಸನದಲ್ಲೂ ಕೂಡ ಶಾಖೆ ತೆರೆದು ವರ್ಷ ಕಳೆದಿದೆ. ಇದು ಓದುಗರಿಗೆ ಪುಸ್ತಕಗಳ ಕೊರತೆ ನೀಗಿಸುವಲ್ಲಿ ಬಹುದೊಡ್ಡ ಪಾತ್ರ ವಹಿಸುತ್ತಿದೆ. ಸಪ್ನ ಇಂದು ಅಂತರ ರಾಷ್ಟ್ರೀಯ ಮಟ್ಟದಲ್ಲೂ ಬೆಳೆದು ನಿಂತು ವಹಿವಾಟು ನಡೆಸುತ್ತಿರುವುದು ಒಳ್ಳೆಯ ಪುಸ್ತಗಳನ್ನು ನೀಡಿದರೆ ಓದುಗ ಸ್ವೀಕರಿಸುತ್ತಾನೆ ಎಂಬುದಕ್ಕೆ ಸಾಕ್ಷಿ ಎಂದರು.

ಸ್ಕಾಲರ್ಸ್ ಇಂಟರ್ ನ್ಯಾಷನಲ್ ಶಾಲೆಯ ಸಂಸ್ಥಾಪಕ ಡಾ.ಹೆಚ್. ಎನ್.ಚಂದ್ರಶೇಖರ್, ಲೇಖಕಿ ಲತಾ, ಸಪ್ನ ಬುಕ್ ಹೌಸ್ ಹಾಸನ ಶಾಖೆಯ ವ್ಯವಸ್ಥಾಪಕಿ ಶಾಂತಲಾ ಇತರರು ಹಾಜರಿದ್ದರು.

## ಎಲೈಟ್ ಶಾಲೆಯಲ್ಲಿ ಕನಕ ಜಯಂತಿ

• ಪ್ರಜೋದಯ ವರದಿ



**ಹಾಸನ:** ಇಲ್ಲಿನ ಹೇಮಾವತಿ ನಗರದ ಎಲೈಟ್ ಶಾಲೆಯಲ್ಲಿ ಶನಿವಾರ ದಾಸ ಶ್ರೇಷ್ಠ ಕನಕದಾಸರ ಜಯಂತಿ ಯನ್ನು ಆಚರಿಸಲಾಯಿತು.

ಕನ್ನಡ ಶಿಕ್ಷಕ ಸತೀಶ್ ಮಾತನಾಡಿ, ಕನಕದಾಸರು ಸಂತ ಮತ್ತು ಮೇರು ವ್ಯಕ್ತಿತ್ವದವರು. ರಾಮಧ್ಯಾನ ಚರಿತೆ, ಹರಿದಾಸ ಚರಿತೆಗಳ ಮಹತ್ವ ತಿಳಿಸಿ ಕೊಡುವುದರ ಜೊತೆಗೆ ಪ್ರಸ್ತುತ ಬದುಕಿನಲ್ಲಿ ಸಂಗೀತ, ಭಕ್ತಿ, ಸತ್ಯ, ಶಾಂತಿ ಇಂತಹ ತತ್ವಗಳನ್ನು ರೂಢಿಸಿ ಕೊಂಡು ಆದರ್ಶ ವ್ಯಕ್ತಿಗಳಾಗ ಬೇಕೆಂದು ಹೇಳಿದರು.

ಕನ್ನಡ ಭಾಷಾ ಶಿಕ್ಷಕ ಆನಂದ್ ಮಾತನಾಡಿ, ನಿನ್ನಂತಾಗಬೇಕು ಕನಕ-ನಿನ್ನಂತಾಗಬೇಕು ಎಂಬ ಕೀರ್ತನೆಯನ್ನು ಹಾಡುವುದರೊಂದಿಗೆ ಕೀರ್ತನೆಯ ಮಹತ್ವ ತಿಳಿಸಿಕೊಟ್ಟರು.

ಮಕ್ಕಳು ಮತ್ತು ಶಿಕ್ಷಕರು ಕನಕದಾಸರ ಕೀರ್ತನೆಗಳನ್ನು ಹಾಡಿದರು.

ಶಾಲೆಯ ಆಡಳಿತಾಧಿಕಾರಿ ಕೆ.ಎಂ. ನಾಗರಾಜು, ಪ್ರಾಂಶುಪಾಲೆ ಕ್ರಿಸ್ಟೀನಾ, ಬೋಧಕ ಹಾಗು ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

## ರೋಗಿಗೆ ತಾಳ್ಮೆ, ಧೈರ್ಯವೇ ಉತ್ತಮ ಚಿಕಿತ್ಸೆ

• ಪ್ರಜೋದಯ ವರದಿ



**ಸಕಲೇಶಪುರ:** ರೋಗಿಗೆ ಔಷಧಕ್ಕಿಂತ ಪ್ರೀತಿ, ತಾಳ್ಮೆ ಮತ್ತು ಧೈರ್ಯವೇ ಉತ್ತಮ ಚಿಕಿತ್ಸೆ ಎಂದು ಶಾಸಕ ಸಿಮೆಂಟ್ ಮಂಜು ಅವರು ವೈದ್ಯರಿಗೆ ಸಲಹೆ ನೀಡಿದರು.

ತಾಲ್ಲೂಕಿನ ಯಸಳೂರು ಹೋಬಳಿ ಚಂಗಡಹಳ್ಳಿ ಗ್ರಾಮದಲ್ಲಿ 25 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡದ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ರೋಗಿಗಳೊಂದಿಗೆ ವೈದ್ಯರು ಸಂಯಮ ಮತ್ತು ಮಾನವೀಯತೆಯಿಂದ ವರ್ತಿಸಬೇಕು. ಸರ್ಕಾರಿ ಆಸ್ಪತ್ರೆ ಬಡಜನರಿಗೆ ಮರುಜೀವ ನೀಡುವ ದೇವಾಲಯವೆಂದು ಭಾವಿಸಿ, ಸೂಕ್ತ ಚಿಕಿತ್ಸೆಯನ್ನು ನೀಡಲು ಮುಂದಾಗಬೇಕು ಎಂದರು.

ವೈದ್ಯರು ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಬಾರದು. ಸಾರ್ವಜನಿಕರು ಸರ್ಕಾರವನ್ನೂ ವೈದ್ಯರನ್ನೂ ನಂಬಿ ಕೊಂಡಿದ್ದಾರೆ. ಅವರು ತೊಂದರೆ ಅನುಭವಿಸದಂತೆ ಕಾರ್ಯ ನಿರ್ವಹಿಸಬೇಕು. ಅವಧಿ ಮೀರಿದ ಔಷಧಿಗಳನ್ನು ಇಟ್ಟುಕೊಳ್ಳುವುದು, ಅಥವಾ ಔಷಧ ವಿತರಣೆ ವೇಳೆ ರೋಗಿಗಳನ್ನು ಸತಾಯಿಸುವುದು ಕಂಡುಬಂದರೆ, ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ವೈದ್ಯರು ಜನಾನುರಾಗಿಗಳಾಗಿ, ನಿಸ್ವಾರ್ಥ ಸೇವಾ ಭಾವದಿಂದ ರೋಗಿಗಳಿಗೆ ಚಿಕಿತ್ಸೆ ನೀಡಬೇಕು. ಇದು ಪುಣ್ಯದ ಕೆಲಸವೆಂಬ ಭಾವನೆಯಿಂದ ಕರ್ತವ್ಯ ನಿರ್ವಹಿಸಬೇಕು ಎಂದು ಕಿವಿಮಾತು ಹೇಳಿದರು.

ಚಂಗಡಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಕಾರ್ತಿಕ್, ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಪವಿತ್ರ, ಮಾಜಿ ಅಧ್ಯಕ್ಷ ಕುಮಾರಸ್ವಾಮಿ, ಸದಸ್ಯರಾದ ಲೋಕೇಶ್, ಮಧು, ಪಾರ್ವತಿ, ಸುಧಾ, ಬಿಜೆಪಿ ಮಹಾಶಕ್ತಿ ಕೇಂದ್ರ ಅಧ್ಯಕ್ಷ ಸವಿನ್‌ಗೌಡ, ಶಕ್ತಿ ಕೇಂದ್ರ ಅಧ್ಯಕ್ಷ ಕಿರಣ್ ನಾರು, ಬಿಜೆಪಿ ತಾಲ್ಲೂಕು ಯುವ ಮೋರ್ಚಾ ಕಾರ್ಯದರ್ಶಿ ಶೋಧನ್, ಚಂಗಡಹಳ್ಳಿ ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ಶರತ್, ಸಚಿನ್, ಕುಮಾರ್, ಹೇಮಂತ್ ಇತರರು ಹಾಜರಿದ್ದರು.

## ನ್ಯಾಯಯುತವಾಗಿ ನಿವೇಶನ ಖರೀದಿ: ಶಿವರಾಮ್

• ಪ್ರಜೋದಯ ವರದಿ




**ಬೇಲೂರು:** ಪಟ್ಟಣದಲ್ಲಿ ನಿರ್ಮಿಸುತ್ತಿರುವ ಕಾಂಗ್ರೆಸ್ ಕಚೇರಿಗೆ ನ್ಯಾಯಯುತವಾಗಿ ನಿವೇಶನ ಖರೀದಿಸಿ, ಕಟ್ಟಡಕ್ಕೆ ನೀಡಲಾಗಿದೆ ಹೊರತು ಯಾವುದೇ ಒತ್ತುವರಿ ಮಾಡಿಲ್ಲ. ಇನ್ನೊಬ್ಬರ ಆಸ್ತಿಯನ್ನು ಬಲವಂತವಾಗಿ ದಬ್ಬಾಳಿಕೆಯಿಂದ ಪಡೆದಿಲ್ಲ. ಈ ರೀತಿಯ ಆರೋಪದಲ್ಲಿ ಯಾವುದೇ ಸತ್ಯವಿಲ್ಲ ಎಂದು ಮಾಜಿ ಸಚಿವ ಬಿ. ಶಿವರಾಮ್ ಸ್ಪಷ್ಟನೆ ನೀಡಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಡೀ ರಾಜ್ಯದಲ್ಲಿ ಏಕಕಾಲದಲ್ಲಿ 100 ಕಾಂಗ್ರೆಸ್ ಕಚೇರಿ ನಿರ್ಮಾಣಕ್ಕೆ ಕಾಂಗ್ರೆಸ್ ವರಿಷ್ಠರಾದ ರಾಹುಲ್ ಗಾಂಧಿ ನ.20ರಂದು ಬೆಂಗಳೂರಿನಲ್ಲಿ ಚಾಲನೆ ನೀಡುವ ಕಾರಣದಿಂದ ಬೇಲೂರಿನಲ್ಲಿ ಕೂಡ ಕಾಂಗ್ರೆಸ್ ಕಚೇರಿ ನಿರ್ಮಿಸಿದ ಹಿನ್ನಲೆ ಒಕ್ಕಲಿಗರ ಕಲ್ಯಾಣ ಮಂಟಪದ ಮುಂದಿನ ಖಾತೆ ಸಂಖ್ಯೆ 3366 ಹಾಗು 2381/ ಸಿ ನಲ್ಲಿರುವ ರಹೀಂಖಾನ್ ಅವರಿಂದ ಖರೀಸಿದ ಜಾಗವನ್ನು ನಾವು ಕೆಪಿಸಿಸಿಯ ಪ್ರಧಾನ ಕಾರ್ಯದರ್ಶಿಯವರಿಗೆ ನೀಡಲಾಗಿದೆ. ಅದರಂತೆ ಪುಟ್ಟಮ್ಮ ಯೊಗೇಶ್ ಅವರಿಂದ ಖರೀದಿಸಿದ ಜಾಗವನ್ನು ತೌಫಿಕ್ ಅವರು ಈಗಾಗಲೇ ನೀಡಲಾಗಿದೆ ಎಂದು ತಿಳಿಸಿದರು.

ಒಟ್ಟು ನಿವೇಶನ 23x70 ಅಳತೆಯ ನಿವೇಶನವು ಇ-ಸ್ವತ್ತು ಹಾಗು ಖಾತೆ ಸೇರಿ ಎಲ್ಲಾ ನಿವೇಶನಗಳು ನಮ್ಮ ಬಳಿ ಇದ್ದು ಇದರಲ್ಲಿ ಯಾವುದೇ ರೀತಿಯ ಒತ್ತಡ ಹೇರುವುದಾಗಲಿ ಬೆದರಿಕೆ ಹಾಕಿ ಬರೆಸಿಕೊಳ್ಳುವುದಾಗಲಿಯಾರು ಸಹ ಮಾಡಿಲ್ಲ. ಯಾರೊಬ್ಬರ ವೈಯಕ್ತಿಕ ಹಿತಾಸಕ್ತಿ ರಾಜಕೀಯ ಷಡ್ಯಂತ್ರದಿಂದ ಇಂತಹ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ತಿಳಿಸಿದರು.

ಬೇಲೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಜೆ.ನಿಶಾಂತ್, ಪುರಸಭಾ ಮಾಜಿ ಅಧ್ಯಕ್ಷ ಎಂ.ಆರ್.ವೆಂಕಟೇಶ, ಬೇಲೂರು-ಹಳೇಬೀಡು ಪ್ರಾಧಿಕಾರದ ಅಧ್ಯಕ್ಷ ಸೈಯದ್ ತೌಫಿಕ್ ಹಾಜರಿದ್ದರು.

## ನಾನು ಬಿಟ್ಟರೆ ಮೋಕ್ಷ ಸಿದ್ಧಿ



• ಪ್ರಜೋದಯ ವರದಿ

**ಹೊಳೆನರಸೀಪುರ:** ಮೋಕ್ಷ ಸಿಗಬೇಕಾದರೆ 'ನಾನು' ಎಂಬ ಅಹಂಕಾರವನ್ನು ಬಿಡಬೇಕು ಎಂದು ಕನಕದಾಸರು ತಿಳಿಸಿದ್ದಾರೆ. ತಮಗೆ ಸಿಕ್ಕಿದ ಕೊಪ್ಪರಿಗೆಯಷ್ಟು ಬಂಗಾರವನ್ನು ತಮ್ಮ ಸ್ವಂತಕ್ಕೆ ಬಳಸಿಕೊಳ್ಳದೇ ಸಮಾಜದ ಒಳಿತಿಗಾಗಿ ಬಳಸಿದ ಕೀರ್ತಿ ತಿಮ್ಮಪ್ಪ ನಾಯಕನಿಗೆ ಸಲ್ಲುತ್ತದೆ. ಅಂದಿನಿಂದ ಇವರು ಕನಕದಾಸರೆಂದು ಪ್ರಸಿದ್ಧಿಯಾಗುತ್ತಾರೆ ಎಂದು ಜೆಎಸ್‌ಎಸ್ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕಿ ರೇಣುಕ ಎಸ್.ತಿಗರೇರ ತಿಳಿಸಿದರು.

ತಾಲ್ಲೂಕಿನ ದೊಡ್ಡಕಾಡನೂರು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಶ್ರೀ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ಕನಕದಾಸರು 15-16ನೇ ಶತಮಾನದಲ್ಲಿಯೇ ಅಂದಿನ ಸಮಾಜದಲ್ಲಿದ ಮೌಢ್ಯತೆಯ ಬಗ್ಗೆ, ಮೇಲು ಕೀಲು, ಬಡವ ಶ್ರೀಮಂತ ಎನ್ನುವ ಭಾವನೆಯ ಬಗ್ಗೆ ತಮ್ಮ ಕೀರ್ತನೆಗಳು ಮತ್ತು ಸಾಹಿತ್ಯ ಕೃತಿಗಳಲ್ಲಿ ಎಚ್ಚರಿಸಿದ್ದಾರೆ. ಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ.., ಬಲ್ಲಿರಾ.., ಎನ್ನುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದ್ದಾರೆ. ಸುಮಾರು 300ಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿದ್ದಾರೆ. ಮೋಹನ ತರಂಗಿಣಿ, ನಳಚರಿತೆ, ರಾಮಧಾನ್ಯ ಚರಿತೆ ಎಂಬ ಕಾವ್ಯ ಗ್ರಂಥಗಳನ್ನು ಬರೆದು, ಸಮಾಜದಲ್ಲಿ ಬಡವ- ಶ್ರೀಮಂತರೆನ್ನುವ ಬೇಧ ಭಾವ ಮತ್ತು ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟ ಮಾಡಿದ್ದಾರೆಂದು ಅವರ ಸಾಧನೆ ಮತ್ತು ತ್ಯಾಗವನ್ನು ಗುಣಗಾನ ಮಾಡಿದರು.

ಜೆಎಸ್‌ಎಸ್ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಸುರೇಶ್, ಕಾಲೇಜಿನ ಪ್ರಾಂಶುಪಾಲ ಡಾ. ಚೌಡಯ್ಯ ಕಟ್ನವಾಡಿ, ಕಾಲೇಜು ಮತ್ತು ಶಾಲೆಯ ಮುಖ್ಯಸ್ಥರು, ಬೋಧಕ ವರ್ಗ ಇದ್ದರು.


## ಹಾಸನ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ (ರಿ)
## ಆಡಳಿತ ಮಂಡಳಿ ಚುನಾವಣೆ 2025

ನಮ್ಮೆಲ್ಲ ಪ್ರೀತಿಯ ಹಿರಿಯ ಹಾಗೂ ಕಿರಿಯ ಪತ್ರಕರ್ತ ಬಾಂಧವರೇ, ಇದೇ ನವೆಂಬರ್ 09 ರಂದು (09-11-2025 ಭಾನುವಾರ) ಹಾಸನ ಜಿಲ್ಲಾ ಪತ್ರಕರ್ತರ ಸಂಘದ ನೂತನ ಆಡಳಿತ ಮಂಡಳಿಗೆ ಚುನಾವಣೆ ನಿಗದಿಯಾಗಿದೆ. ಕೆ.ಯು.ಡಬ್ಲ್ಯೂ.ಜೆ. ರಾಜ್ಯಾಧ್ಯಕ್ಷರಾದ ಶ್ರೀ ಶಿವಾನಂದ ತಗಡೂರು, ಉಪಾಧ್ಯಕ್ಷರಾದ ಶ್ರೀ ಹೆಚ್.ಬಿ.ಮದನಗೌಡರು, ಹಾಸನ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಬಾಳ್ಳುಗೋಪಾಲ್, ಶ್ರೀ ರವಿನಾಕಲಗೂಡು, ಶ್ರೀ ಬಿ. ಆರ್. ಉದಯ್ ಕುಮಾರ್ ಹಾಗೂ ಹಿರಿಯ ಪತ್ರಕರ್ತ ಚೌಡಳ್ಳಿ ಜಗದೀಶ್ ಅವರ ಮಾರ್ಗದರ್ಶನದಲ್ಲಿ ಶ್ರೀ ಜೆ.ಆರ್.ಕೆಂಚೇಗೌಡರು, ಶ್ರೀ ನಂಜುಂಡೇಗೌಡರ ನೇತೃತ್ವದಲ್ಲಿ ಒಂದು ತಂಡವಾಗಿ ಚುನಾವಣೆಗೆ ಸ್ಪರ್ಧೆ ಮಾಡಿದ್ದೇವೆ.

ಮತದಾನದ ಸಮಯ : ಬೆಳಗ್ಗೆ 8-00 ರಿಂದ 2-00ಗಂಟೆವರೆಗೆ
ಸ್ಥಳ : ಪತ್ರಕರ್ತರ ಭವನ, ಜಿಲ್ಲಾಧಿಕಾರಿ ಕಚೇರಿ ಹಿಂಭಾಗ, ಹಾಸನ

-: ಅಭ್ಯರ್ಥಿಗಳ ಪಟ್ಟಿ :-

| ಕ್ರಮ ಸಂಖ್ಯೆ | ಅಭ್ಯರ್ಥಿಗಳ ಹೆಸರು | ಅಭ್ಯರ್ಥಿಗಳ ಭಾವಚಿತ್ರ | ಮತ |
|---|---|---|---|
| 01 | ಜೆ.ಆರ್.ಕೆಂಚೇಗೌಡ (ಅಧ್ಯಕ್ಷರು) | | |
| 01 | ನಂಜುಂಡೇಗೌಡ (ಉಪಾಧ್ಯಕ್ಷರು) | | |
| 02 | ನಾಗರಾಜ್ ಹೆತ್ತೂರು (ಉಪಾಧ್ಯಕ್ಷರು) | | |
| 03 | ಜಿ.ಪ್ರಕಾಶ್ (ಉಪಾಧ್ಯಕ್ಷರು) | | |
| 03 | ಕೆ.ಜಿ.ಸುರೇಶ್ (ಪ್ರಧಾನ ಕಾರ್ಯದರ್ಶಿ) | | |
| 01 | ಖುಶ್ವಂತ್ (R ಕನ್ನಡ) (ಕಾರ್ಯದರ್ಶಿ) | | |
| 03 | ಬಿ.ಆರ್.ಬೊಮ್ಮೇಗೌಡ (ಕಾರ್ಯದರ್ಶಿ) | | |
| 06 | ಸುವರ್ಣ ಹರೀಶ್ (ಕಾರ್ಯದರ್ಶಿ) | | |
| 01 | ತ್ಯಾಗರಾಜ (TV5 ಪ್ರಕಾಶ್) (ಖಜಾಂಚಿ) | | |
| 01 | ಕೆ.ಪಿ.ಎಸ್.ಪ್ರಮೋದ್ (ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ) | | |

-: ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ಅಭ್ಯರ್ಥಿಗಳು

| ಕ್ರಮ ಸಂಖ್ಯೆ | ಅಭ್ಯರ್ಥಿಗಳ ಹೆಸರು | ಅಭ್ಯರ್ಥಿಗಳ ಭಾವಚಿತ್ರ | ಮತ |
|---|---|---|---|
| 03 | ಕೃಷ್ಣ ಇಬ್ಬೀಡು (ನ್ಯೂಸ್ 18) | | |
| 05 | ಜಗದೀಶ್ ಸಿ.ಆರ್ (ಚೌಡಳ್ಳಿ) | | |
| 09 | ನವೀನ್ ಸಿ.ಆರ್ (ಜನಮಿತ್ರ) | | |
| 10 | ನಾಗರಾಜ್ ಹೆಚ್.ಎ (ದಿಗ್ವಿಜಯ) | | |
| 11 | ಪ್ರತಾಪ್ ಹೆಚ್.ಜಿ (ಹಿರೀಸಾವೆ) | | |
| 12 | ಪ್ರಸನ್ನಕುಮಾರ್ (ಚಲಂ) | | |
| 14 | ಮಲ್ಲೇಶ್ ಬೇಲೂರು | | |
| 15 | ರಾಘವೇಂದ್ರ ಹೆಚ್.ವಿ (ರಾಘು ಆಲೂರು) | | |
| 16 | ವಿರೂಪಾಕ್ಷ ಪಿ.ಬಿ (ಅರಕಲಗೂಡು) | | |
| 17 | ವಿಶ್ವನಾಥ್ ಎನ್.ಆರ್. (ಸುಂದರ ನಾಕಲಗೂಡು) | | |
| 18 | ಶರಣ್ ಜಿ (ನಾಡಸಹ್ಯಾದ್ರಿ) | | |
| 19 | ಶರತ್ ಹೆಚ್.ಆರ್ (ಸುವರ್ಣ) | | |
| 20 | ಸುರೇಶ್‌ಕುಮಾರ್ ಹೆಚ್.ವಿ (ಹೊಳೆನರಸೀಪುರ) | | |
| 22 | ಸ್ವರೂಪ್ ಎಂ.ಜಿ (ಮಳಲಿ) | | |


ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019